ಕಲಾವಿದ

ಸಿ.ಎನ್.ಪಾಟೀಲರವರ

ಬದುಕು ಮತ್ತು ಕಲಾಕೃತಿಗಳು

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ
ಸಂಶೋಧನಾ ಪ್ರಬಂಧ



ಅಧ್ಯಯನಕಾರರು
ಶಾನವಾಜ ತಾ.ಜಮಾದಾರ

ಮೇಲ್ವಿಚಾರಕರು
ಡಾ. ಎಸ್.ಸಿ.ಪಾಟೀಲ

ಉಸ್ತುವಾರಿ
ಡಾ. ಎಮ್.ಸಿ.ಬಾಗೋಡಿ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩೨೭೬

ಕಲಾವಿದ ಸಿ.ಎನ್.ಪಾಟೀಲರವರ ಬದುಕು ಮತ್ತು ಕಲಾಕೃತಿಗಳು

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಪ್ರಬಂಧ)

ಅಧ್ಯಯನಕಾರರು
ಶಾನವಾಜ ತಾ.ಜಮಾದಾರ

ಮೇಲ್ವಿಚಾರಕರು
ಡಾ.ಎಸ್.ಸಿ.ಪಾಟೀಲ
ಪ್ರಾಧ್ಯಾಪಕರು, ಮುಖ್ಯಸ್ಥರು, ಡೀನ್ ಲಲಿತಕಲಾನಿಕಾಯ

ಉಸ್ತುವಾರಿ
ಡಾ.ಮಲ್ಲಿಕಾರ್ಜುನ್ ಸಿ.ಬಾಗೋಡಿ
ತಾ.ಅಧ್ಯಾಪಕರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮-೦೯

ಮಾರ್ಗದರ್ಶಕರ ದೃಢೀಕರಣ ಪತ್ರ

ಕಲಾವಿದ ಸಿ.ಎನ್.ಪಾಟೀಲರವರ ಬದುಕು ಮತ್ತು ಕಲಾಕೃತಿಗಳು ಎಂಬ ಸಂಪ್ರಬಂಧವನ್ನು ಶಾನವಾಜ ತಾ.ಜಮಾದಾರ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಎಂ.ಫಿಲ್, ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15/10/09
ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ.ಎಸ್.ಸಿ.ಪಾಟೀಲ
ಮೇಲ್ವಿಚಾರಕರು
ಪ್ರಾಧ್ಯಾಪಕರು, ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ಕಲಾವಿದ ಸಿ.ಎನ್.ಪಾಟೀಲರವರ ಬದುಕು ಮತ್ತು ಕಲಾಕೃತಿಗಳು ಎಂಬ ಸಂಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : 15/10/2009

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಾನವಾಜ ತಾ.ಜಮಾದಾರ

ಅಧ್ಯಯನಕಾರರು

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ದ್ಯಾರಣ್ಯ ೫೮೩ ೨೭೬

<u>ಪರಿವಿಡಿ</u>

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಸೌಂದರ್ಯಾನುಭವ ಮನುಷ್ಯರಿಗೆ ಸಹಜವಾದ ಗುಣ ಅದಕ್ಕೆ ಮುಖ್ಯವಾದ ಮಾಧ್ಯಮ ಕಲೆ. ಈ ಕಲೆಯ ಮೂಲಕ ಮನುಷ್ಯನಲ್ಲಿ ಸೌಂದರ್ಯಾನುಭವ ಸಂವೇದನೆಗಳು ಅಭಿವ್ಯಕ್ತವಾಗುತ್ತವೆ. ಕಲೆಯ ಆಕಾರವಾಗಲಿ ಮತ್ತು ತತ್ವಗಳಾಗಲಿ ಹಿಂದಿನಿಂದಲೂ ಒಂದೇ ರೀತಿ ನಡೆದು ಬಂದಿಲ್ಲ. ಕಾಲಕಾಲಕ್ಕೆ ಬದಲಾಗುತ್ತ ಬಂದಿವೆ. "ಆದಿಮಾನವನ ಗುಹೆ ಮತ್ತು ಶಿಲಾಶ್ರಯಗಳಲ್ಲಿ ರೂಪಿತವಾದ ಕಲೆಗೂ ಮುಂದಿನ ಯುಗಗಳ ಕಲೆಗೂ ವ್ಯತ್ಯಾಸವಿದೆ. ಸ್ವಾನುಭವದಿಂದ ಉತ್ಪತ್ತಿಯಾದ ಕಲೆ ಮುಂದೆ ಅದರದೇ ತತ್ವ ಮತ್ತು ಸಿದ್ಧಾಂತಗಳನ್ನು ಬೆಳಸಿಕೊಂಡು ಆ ಚೌಕಟ್ಟಿನಲ್ಲಿ ಬೆಳೆಯುತ್ತಿರುತ್ತದೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕಾರಣಗಳಿಂದ ಕಲೆಯು ಹೊರತಾಗಲು ಸಾಧ್ಯವಿಲ್ಲ. ಅವುಗಳ ಪ್ರಭಾವದಿಂದ ಕಲೆಯಲ್ಲಿ ಬದಲಾವಣೆಯಾಗುತ್ತಿರುತ್ತದೆ."[೧]

"ಈ ಶತಮಾನದ ಆರಂಭದಲ್ಲಿ ಕರ್ನಾಟಕ ಚಿತ್ರಕಲೆ ಇನ್ನೊಮ್ಮೆ ತಿರುವು ಪಡೆಯಿತು. ಆ ಘಟನೆ ಹಲವಾರು ಕಾರಣಗಳಿಂದ ಮಹತ್ವವಾದುದು. ಐವತ್ತು ವರ್ಷಗಳಷ್ಟು ದೀರ್ಘಾವಧಿಯ ಈ ಘಟ್ಟದ ಹಿಂದಿನ ಹಾಗೂ ಮುಂದಿನ ಕಾಲದಲ್ಲಿ ಆದ ಬದಲಾವಣೆ, ಕಲೆ ಕಲಾವಿವರವನ್ನು ಕುರಿತು ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ."[೨]

"ಮೊದಲ ಬದಲಾವಣೆ ಚಾರಿತ್ರಿಕ ಯುಗದ ಆರಂಭದೊಂದಿಗೆ ಆಯಿತು. ನಂತರ ಒಂದೊಂದು ಸಾಮ್ರಾಜ್ಯದ ಏಳು ಬೀಳುಗಳೊಂದಿಗೆ ಹಿಂದಿನವರ ಮುಂದುವರೆದ ರೂಪವಾಗಿಯೋ ಹೊರಗಿನ ಪ್ರಭಾವದಿಂದ ಬೇರೊಂದು ರೂಪದಲ್ಲಿಯೋ ಕಾಲಕಾಲಕ್ಕೆ ಈ ಬದಲಾವಣೆಗಳಿಂದ ಆದವು. ಅವುಗಳನ್ನು ಹೀಗೆ ವಿಭಾಗಿಸಬಹುದು."[೩]

---

೧. ಡಾ.ಎಸ್.ಸಿ.ಪಾಟೀಲ - ವರ್ಣಸಂಚಯ, ಪು-೨೩

೨. ಅ.ಲ.ನರಸಿಂಹನ್ -ಚಿತ್ರಕಲಾ ಪ್ರಪಂಚ, ಪು-೩೨೩

೩. ಅ.ಲ.ನರಸಿಂಹನ್ -ಚಿತ್ರಕಲಾ ಪ್ರಪಂಚ, ಪು-೨೩೩

೧. ಆದಿಮಾನವ ಗುಹಾ ಚಿತ್ರಗಳಿಂದ ಅಜಂತೆಯವರೆಗೆ,
೨. ೨ನೇ ಇಬ್ರಾಹಿಂ ಆದಿಲ್‌ಶಾಹಿಯ ಕಾಲದಲ್ಲಿ ಮೊಗಲ್ ಪ್ರಭಾವದ ದಖ್ಖನಿ ಚಿತ್ರಗಳು,
೩. ವಿಜಯನಗರ ಕಾಲದಲ್ಲಿ ಮತ್ತೊಮ್ಮೆ ಭಾರತೀಯ ಶೈಲಿ,
೪. ಅದೇ ತಂಜಾವೂರಿನ ಮಾರ್ಗವಾಗಿ ಒಡೆಯರ ಕಾಲದಲ್ಲಿ "ಮೈಸೂರು ಶೈಲಿ" ಎಂದೇ ವಿಜೃಂಭಿಸಿದ ಕಾಲ ಹಾಗೂ ನಂತರದಲ್ಲಿ
೫. ಪಾಶ್ಚಿಮಾತ್ಯ ಪ್ರಭಾವ ದೇಶಿಯ ಹುಡುಕಾಟಗಳಿಂದ ಬಂದ ನೈಜವಾದದ ಹಂತವೇ ಸ್ವಾತಂತ್ರ್ಯ ಕಾಲದವರೆಗೂ ಮುಂದುವರೆದು, ಇನ್ನೊಮ್ಮೆ ತನ್ನ ಇಡೀ ರೂಪವನ್ನು ಬದಲಾಯಿಸಿಕೊಂಡಿತು.

ಹೀಗೆ ವಿವಿಧ ಕಾಲ "ಘಟ್ಟಗಳಲ್ಲಿ ಚಿತ್ರರಚನೆಯ ತಂತ್ರ, ವಿನ್ಯಾಸ, ನಿರೂಪಣಾ ಶೈಲಿ ಇತ್ಯಾದಿ ಹಲವಾರು ದೃಷ್ಟಿಗಳಿಂದಲೂ ಪರಸ್ಪರ ಭಿನ್ನವಾದರೂ ಕಲೆ, ಕಲಾವಿದನ ಸ್ಥಾನಮಾನಗಳಾಗಲಿ ಸಾಮಾಜಿಕ ನೆಲಗಟ್ಟಾಗಲೀ ಬದಲಾವಣೆಗೊಳ್ಳಲಿಲ್ಲ. ಪೌರಾಣಿಕ ಕಥಾ ಸಂದರ್ಭಗಳಿಗೆ ಪೂರಕ ಚಿತ್ರಗಳಾಗುವ ಮಟ್ಟದಿಂದ ಮೇಲೆರಲಿಲ್ಲ. ೧೯ನೇ ಶತಮಾನದ ಅಂತ್ಯದಲ್ಲಿಯೇ ರವಿವರ್ಮನ ಆಗಮನ ಛಾಯಾ ಚಿತ್ರಣ ಅನ್ವೇಷಣೆ, ತಂತ್ರ ಮತ್ತು ವಸ್ತುವಿನ ಬದಲಾವಣೆ ರಾಷ್ಟ್ರೀಯ ಆಂದೋಲನ ಮತ್ತು ಸಾಮಾಜಿಕ ಪ್ರಜ್ಞೆ, ಕಲೆಯ ಬಗ್ಗೆ ಇದ್ದ ಕಲ್ಪನೆ, ಧೋರಣೆಗಳಲ್ಲಿ ಬದಲಾವಣೆ ಕಾಣಿಸಿಕೊಳ್ಳಲಾರಂಭಿಸಿದವು. ಕಲೆ ಒಂದೇ ಕುಲದವರಿಂದ ಹೊರಬಂದು ಬೇರೆ ಉನ್ನತ ಕುಲದವರು ಬಳಸಿಕೊಳ್ಳುವಿಕೆಯೊಂದಿಗೆ ಸಾಹಿತ್ಯವೂ ಸೇರಿದಂತೆ ಉಳಿದ ಕಲೆಯಲ್ಲಿ ಆಗುತ್ತಿದ್ದ ಬದಲಾವಣೆ ರಾಜಾಶ್ರಯ ತಪ್ಪಿ ಜನಾಶ್ರಯಕ್ಕೆ ಬಂದದು ಕಾಣಬಹುದಾಗಿದೆ. ಕಲೆ ಒಂದು ವಿಧ್ಯಾಭ್ಯಾಸದ ಮೂಲಕ ಕಲಿಯಬಹುದು ಎನ್ನುವ ಪರಿಕಲ್ಪನೆ ಇತ್ಯಾದಿ. ಹಲವಾರು ದೃಷ್ಟಿಗಳಿಂದ ನೈಜವಾದಿಗಳ ಹಂತ ಕರ್ನಾಟಕ ಚಿತ್ರಕಲೆ ಒಂದು ಅಭೂತಪೂರ್ವ ಬದಲಾವಣೆಗಳು ತಂದಿತು. ದಕ್ಷಿಣ ಭಾರತದಲ್ಲಿ ಚಿತ್ರಕಲೆಯ ಕೇಂದ್ರಗಳು ಇದ್ದುದ್ದು ಹೈದರಾಬಾದ್, ಬಿಜಾಪೂರ, ಸುರಪುರ, ಗದವಾಲ್, ವನಪರ್ತಿ, ಮೈಸೂರು ಮತ್ತು ತಂಜಾವೂರುಗಳಲ್ಲಿ ಮಾತ್ರ ಇವುಗಳ ಬೇರೆ ಬೇರೆ ದೇಶಿಯ ಸಂಸ್ಥಾನದ ಆಡಳಿತದಲ್ಲಿದ್ದರೂ ಮೈಸೂರು ಅರಸರು ಸುಧಾರಣೆಯತ್ತ ಹೆಚ್ಚು ಗಮನವಿಟ್ಟಿದ್ದರು. ಕಲೆಯ ಕ್ಷೇತ್ರದಲ್ಲಿ ಹೊಸದು ಏನು ಬರುತ್ತಿದೆ ಎಂದು ತಿಳಿದವರಾಗಿದ್ದರು."[೪]

"೧೯-೨೦ನೆಯ ಶತಮಾನದಲ್ಲಿ ಪಾಶ್ಚಾತ್ಯ ಚಿತ್ರರಂಗದಲ್ಲಿ ಬೆಳೆದ ಅನೇಕ ಸಂಪ್ರದಾಯಗಳನ್ನು ಅನುಸರಿಸುವ ಅದೇ ತಂತ್ರವನ್ನು ಉಪಯೋಗಿಸಿ ದೇಶಿಯ ವಸ್ತುಗಳನ್ನು ಚಿತ್ರಿಸುವ ಪಂಥಗಳು ಕರ್ನಾಟಕದಲ್ಲಿ ಕಾಣಿಸಿದವು. ಕರ್ನಾಟಕದ ಚಿತ್ರಕಲಾ ಇತಿಹಾಸದಲ್ಲಿ ಈ ಆಧುನಿಕ ಯುಗ ಸಂಕೀರ್ಣತೆಯ ಕಾಲ ವೈವಿಧ್ಯಮಯವಾದ ಚಿತ್ರರಚನಾ ತಂತ್ರಗಳು ತತ್ಸಧಬಂದ ಅನೇಕ ರೀತಿಯ ಹಿನ್ನಲೆಯ ವಸ್ತುಗಳು ಕೃತಕ ವರ್ಣಗಳು ಇವುಗಳನ್ನು ಬಳಸುವುದು. ಈ ಕಾಲದಲ್ಲಿ ಕಂಡು ಬಂದ ಮುಖ್ಯ ಬದಲಾವಣೆ,"[೫]

---

೪. ಪಿ.ಆರ್.ತಿಪ್ಪೇಸ್ವಾಮಿ - ಚಿತ್ರಕಲಾ ಪ್ರಪಂಚ, ಪು-೩೨೪

೫. ಪಿ.ಆರ್.ತಿಪ್ಪೇಸ್ವಾಮಿ - ಚಿತ್ರಕಲಾ ಪ್ರಪಂಚ, ಪು-೫೨೮

೬. ಟಿ.ಪಿ.ಅಕ್ಕಿ -ಸುವರ್ಣ ವಿಜಯ ನೆನಪಿನ ಸಂಚಿಕೆ, ಪು-೨

ಕಲಾ ಕ್ಷೇತ್ರದಲ್ಲಿ ಪ್ರಾಚೀನ ಕಾಲದಿಂದಲೂ ರಾಷ್ಟ್ರೀಯ ಕಲೆಯನ್ನು ಪ್ರತಿನಿಧಿಸುತ್ತ ಬಂದ ಶ್ರೇಯಸ್ಸು ನಮ್ಮ ಕರ್ನಾಟಕಕ್ಕಿದೆ. ಕರ್ನಾಟಕದ ಐತಿಹಾಸಿಕ ನಗರಗಳಲ್ಲಿಯ ಶಿಲ್ಪ, ವಾಸ್ತುಶಿಲ್ಪ ಹಾಗೂ ಭಿತ್ತಿ ಚಿತ್ರಗಳನ್ನೊಳಗೊಂಡ ಕಲೆ ಇಡೀ ವಿಶ್ವದ ಪ್ರೇಕ್ಷಕರನ್ನು ಆಕರ್ಷಿಸುತ್ತ ಬಂದಿದೆ. "ಕರ್ನಾಟಕ ಭವ್ಯ ನಾಡು ಕಲೆಯ ಬೀಡು" ಎಂಬುದಾಗಿಯೂ ಪ್ರಖ್ಯಾತಗೊಂಡಿದೆ. ಆದರೆ ಬರೀ ಗತವೈಭವದ ಬಗೆಗೆ ಪುನರುಚ್ಚರಿಸುತ್ತ ಹೋಗುವುದರಿಂದ ನಮ್ಮ ಕಲೆ ಅಜರಾಮರವಾಗಿ ಉಳಿಯಲಾರದು. ಕಲೆ ನಿಂತ ನೀರಲ್ಲ ಅದೂ ಸಧಾ ಸಹೃದಯರ ಹೃದಯಗಳಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಯಾಗಿ ಹರಿಯುವಂತಹುದು. ಇನ್ನುಳಿದ ದೇಶಗಳಲ್ಲಿಯೂ ಕಲಾ ಬೆಳವಣಿಗೆಗೆ ಕಲಾ ಪ್ರಗತಿಯನ್ನು ನಮ್ಮದಕ್ಕೆ ಹೋಲಿಸಿದರೆ ಇನ್ನೂ ಸಾಕಷ್ಟು ಪ್ರಗತಿಯಾಗದಿರುವುದು ಕಂಡುಬರುತ್ತದೆ."[೬] ಬೇರೆ ರಾಜ್ಯಗಳ ಸಾಲಿನಲ್ಲಿ ಕರ್ನಾಟಕದಲ್ಲಿ ಕಲಾ ಪ್ರಗತಿಯು ಇನ್ನೂ ಹೇಳಿಕೊಳ್ಳುವಂತಹ ಮಟ್ಟಕ್ಕೆ ಏರಿಲ್ಲವೆಂಬುದು ಸರ್ವವಿದಿತ. ಈ ಕುರಿತಂತೆ ಇಂದು ಸಾಕಷ್ಟು ಪ್ರಯೋಗಗಳು ನಡೆಯುತ್ತಿವೆ. ಆಸಕ್ತಿಗಯಿಂದ ಕಲಿಯಬೇಕೆನ್ನುವ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಲಿಲ್ಲ, ಆಸಕ್ತಿ ಇದ್ದವರಿಗೆ ಉತ್ತೇಜನ ಸಾಕಷ್ಟು ದೊರೆಯಲಿಲ್ಲ. ಮತ್ತು "ಕಲೆಯಿಂದ ಬದುಕುವುದು ಸಾಧ್ಯ ಎಂಬುದನ್ನು ಮನಗಂಡ ಕಲಾವಿದರಲ್ಲಿಯೂ ವಿಶ್ವಾಸ ಮೂಡಲಿಲ್ಲ. ಕಲಾ ಶಿಕ್ಷಕರಿಗೆ ಇನ್ನಿತರ ಶಿಕ್ಷಕರಿಗಿರುವ ವೇತನ ಸೌಲಭ್ಯ ಸವಲತ್ತು ಸಧಾವಕಾಶಗಳೇನನ್ನೂ ಒದಗಿಸಲಿಲ್ಲ. ಒಂದರ್ಥದಲ್ಲಿ ಐತಿಹಾಸಿಕ ವೈಭವತೆ ಭವ್ಯ ಪ್ರಾಚೀನತೆಯನ್ನು ಹೊಂದಿದ ಕರ್ನಾಟಕದ ಕಲಾರಂಗದಲ್ಲಿ ಇನ್ನೂ ಸೂಕ್ತ ಸುಧಾರಣೆಗಳನ್ನು ಕಾಣದಿರುವುದು ವಿಷಾದನೀಯ ಸಂಗತಿ."[೭]

"ಕರ್ನಾಟಕದ ಚಿತ್ರಕಲೆ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಇದರ ಇತಿಹಾಸದಲ್ಲಿ ಅನೇಕ ಕಲಾವಿದರು ಹುಟ್ಟಿ ತಮ್ಮ ಪ್ರತಿಭೆಯನ್ನು ತೋರಿ ಮರೆಯಾಗಿದ್ದಾರೆ. ಆದರೆ ಅವರ ಹೆಸರುಗಳು ಮಾತ್ರ ಉಳಿದುಬಂದಿಲ್ಲ. ಕಾರಣ ಆ ಕಾಲದ ಕಲಾವಿದರು. ತಮ್ಮ ಹೆಸರುಗಳನ್ನು ಕಲಾಕೃತಿಗಳ ಮೇಲೆ ಸೂಚಿಸದೇ ಇರುವುದು ಚಿತ್ರಕಲೆ ಶ್ರೇಷ್ಠಕಲೆ ಎಂಬ ಭಾವನೆ ಅವರಲ್ಲಿತ್ತಲ್ಲದೆ, ಅದು ಧರ್ಮಾಥತಾಮ ಮೋಕ್ಷ ಪ್ರದವಾದುದೆಂದು ನಂಬಿಕೆಯಿತ್ತು ಅಂತೆಯೇ ಚಿತ್ರಕಲೆಯೇ ಸರ್ವಕಲೆಗಳಲ್ಲಿ ಶ್ರೇಷ್ಠವೆಂಬುದಕ್ಕೆ ಖಚಿತಪಡಿಸುವ ಉಲ್ಲೇಖ ಹೀಗಿದೆ. ಮಾರ್ಕಂಡೇಯ ಪುರಾಣದ ಕಲಾನಾಂ ಪ್ರವರಂ, ಚಿತ್ರಂ, ಧರ್ಮಕಾಮಾರ್ಥ ಮೋಕ್ಷ ಪ್ರಧಮ್ ಮಾಂಗಲ್ಯಂ ಪ್ರಥಮ್ಂ ಚೈತವ್ಯೆಹೇತ್ ಪ್ರತಿಭತಮ್ ಕಲೆಗಳಲ್ಲಿ ಚಿತ್ರಕಲೆ ಉತ್ತಮವಾದುದು ಧರ್ಮ, ಅರ್ಥ, ಕಾಮ, ಮೋಕ್ಷಕ್ಕೆ ಸಾಧನವಾದುದು. ಮನೆಯಲ್ಲಿ ಮಂಗಳಕರವೆಂದೂ ಗೃಹದೇವತೆಯನ್ನು ಸಂತೃಪ್ತಿಪಡಿಸುವ ಸಾಧನವೆಂದು ಅರ್ಥ. ಆದ್ದರಿಂದ ಕಲೆಯ ಮುಂದೆ ತಾನು ಅಲ್ಲವೆಂದು ಭಾವಿಸಿದ ಕಲಾವಿದರು ತಮ್ಮ ಹೆಸರನ್ನು ಸೂಚಿಸುತ್ತಿರಲಿಲ್ಲ."[೮] ಚಾಲುಕ್ಯ, ಹೊಯ್ಸಳ, ಶಿಲ್ಪಿಗಳ ಕೆಲವರ ಹೆಸರುಗಳು ಮಾತ್ರ ಅಲ್ಲಲ್ಲಿ

---

೭. ಟಿ.ಪಿ.ಅಕ್ಕಿ -ಸುವರ್ಣ ವಿಜಯ ನೆನಪಿನ ಸಂಚಿಕೆ, ಪು-೨

೮. ಡಾ.ಲಕ್ಷ್ಮೀದೇವಿ ಗವಾಯಿ -ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಕಲಾಕೃತಿಗಲು ಒಂದು ಅಧ್ಯಯನ, ಸಂಚಿಕೆ, ಪು-೪

[illegible]

ಉಳಿದಿವೆ. "ಕನ್ನಡ ಚಿತ್ರಕಲೆಯ ಪ್ರಸ್ತಾವ ಬಂದಾಗಲೆಲ್ಲ ಬೇರಘಟ್ಟಿ ಎಂಬ ಕಲಾವಿದನೊಬ್ಬನ ಹೆಸರು ಮಾತ್ರ ಕೇಳಿ ಬರುತ್ತದೆ. ಅವನ ಕುರಿತು ಹೆಚ್ಚಿನ ಯಾವ ವಿವರಗಳೂ ತಿಳಿದುಬಂದಿಲ್ಲ ಹೀಗೆ ಅಲ್ಲಲ್ಲಿ ಕೇವಲ ಹೆಸರುಗಳನ್ನು ಮಾತ್ರ ಸೂಚಿಸಿರುವ ಅಂಶ ಕಂಡುಬಂದಿದ್ದು, ವಿವರವಾದ ಪರಿಚಯ ಇಲ್ಲ. ಮುಂದಿನ ಶತಮಾನಗಳಲ್ಲಿ ಕಲಾವಿದರ ಪರಿಚಯ ಹಾಗೂ ಕಲೆಯ ಬಗ್ಗೆ ಸ್ವಲ್ಪಮಟ್ಟಿನ ಪ್ರಯತ್ನಗಳು ನಡೆದಿವೆ. ಆದರೆ ಕಲೆ, ಕಲಾವಿದರ ಕುರಿತಾದ ಸಂಶೋಧನೆಗಳು ಈಗೀಗ ನಡೆಯುತ್ತಲಿರುವುದನ್ನು ಕಾಣಬಹುದಾಗಿದೆ."[೯]

"ಕಲಾವಿದನ ಬದುಕು, ಪರಿಸರ, ವ್ಯಾಸಂಗ, ಧ್ಯೇಯ ಪ್ರೇರಣೆ, ಸಾಧನೆ, ಸಿದ್ಧಿ ಮುಂತಾದವುಗಳು ಆತನ ಕಲಾಕೃತಿಯ ಸೃಷ್ಟಿಯ ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ ಮತ್ತು ಕಲಾವಿದನ ಸ್ವಂತಿಕೆಯ ಹೇಗೆ ಅಲ್ಲಿ ಅಭಿವ್ಯಕ್ತಗೊಂಡಿರುತ್ತದೆ ಎಂಬುದು ಮುಖ್ಯವಾಗುತ್ತದೆ. ಕಲಾವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ ಆ ಕಲಾ ವಸ್ತುವಿನ ಬಗ್ಗೆ ತೋರುವ ಆಸ್ಥೆ ಇಲ್ಲವೆ ಪ್ರತಿಕ್ರಿಯೆಯಲ್ಲಿ ಕಂಡುಬರುತ್ತದೆ. ಯಾವುದೇ ಕಲಾವಿದನ ಧೋರಣೆಯೂ ಅವನದೇ ಆದ ಅಭಿವ್ಯಕ್ತಿಯ ವೈಯಕ್ತಿಕತೆಯಲ್ಲಿ ಅವನ ಕಲಾಸೃಷ್ಟಿಯ ವಿಶಿಷ್ಟತೆಯನ್ನು ಗುರುತಿಸಬಹುದು. ಈ ಹಿನ್ನಲೆಯಲ್ಲಿ ಕಲಾವಿದರ ಜೀವನ ಚರಿತ್ರೆಯ ಅಧ್ಯಯದ ಇಲ್ಲಿ ಅಷ್ಟೇ ಮಹತ್ವವಾಗಿದೆ."[೧೦]

ಇಂದು ಬೇರೆ ಬೇರೆ ಕ್ಷೇತ್ರಗಳನ್ನು ಗಮನಿಸಿದಾಗ ಆಯಾ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿವೆ. ಚಿತ್ರಕಲಾ ಕ್ಷೇತ್ರದಲ್ಲಿ ಸಂಶೋಧನೆ ತೀರಾ ಕಡಿಮೆ ಆದರೆ ಈ ಕ್ಷೇತ್ರದ ಕೊಡುಗೆ ಅಪಾರವಾದುದು. ಬಹುಶಃ ಚಿತ್ರಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ತೀರ ವಿರಳವೆಂದರೆ ತಪ್ಪಾಗಲಾರವು. ಕಲಾವಿದರ ಉನ್ನತ ಶಿಕ್ಷಣದ ವಿಮುಖತೆಯಿಂದಾಗಿ ಮತ್ತು ಕಲಾಕೃತಿ ರಚನೆಯ ಕಡೆಗೆ ಹೆಚ್ಚು ಒಲವು ತೋರಿಸಿದುದರ ಪರಿಣಾಮದಿಂದಾಗಿ ಈ ಕ್ಷೇತ್ರದ ಅಧ್ಯಯನ ಕುಂಠಿತಗೊಂಡಿರುವುದನ್ನು ಕಾಣಬಹುದಾಗಿದೆ.

ವಿಶ್ವವಿದ್ಯಾಲಯ ಹಂತದಲ್ಲಿ ೧೯೯೦ರ ದಶಕದಿಂದ ಈ ವಿಷಯ ಗಂಭೀರ ಅಧ್ಯಯನದ ವಿಷಯವಾಗಿ ಪರಿಗಣಿಸಲ್ಪಟ್ಟಿದೆ. ಇತ್ತೀಚೆಗೆ ಈ ಕ್ಷೇತ್ರದ ಸಂಶೋಧನೆ ಇನ್ನುಳಿದ ಅನ್ಯ ಶಿಸ್ತುಗಳಂತೆ ಪ್ರಾರಂಭವಾಗಿರುವುದು ಈ ಕ್ಷೇತ್ರದ ಶುಭ ಲಕ್ಷಣವೆನ್ನಬಹುದು.

ರಾಷ್ಟ್ರ, ಅಂತರಾಷ್ಟ್ರೀಯ ಖ್ಯಾತಿ ಪಡೆದ ಸಾವಿರಾರು ಕಲಾಕೃತಿಗಳನ್ನು ನಿರ್ಮಿಸಿ, ತಮ್ಮದೇ ಆದ ಬಹುಮುಖ ವ್ಯಕ್ತಿತ್ವದಿಂದ ಕರ್ನಾಟಕ ಕಲಾಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ನೂರಾರು ಕಲಾವಿದರ ಕುರಿತ ಅಧ್ಯಯನ ನಡೆಯಬೇಕಾಗಿದೆ. ನೂರಾರು ಜನ ಈ ಕ್ಷೇತ್ರದಲ್ಲಿ ಅವಶ್ಯಕವಾಗಿ ಕೆಲಸ

---

೯. ಡಾ.ಎಸ್.ಸಿ.ಪಾಟೀಲ - ಕರ್ನಾಟಕ ಜನಪದ ಕಲೆ, ಪು-೩

೧೦. ಮಲ್ಲಿಕಾರ್ಜುನ ಸಿ.ಬಾಗೋಡಿ -ಚಿತ್ರಕಲಾವಿದ ಜೆ.ಎಸ್.ಖಂಡೇರಾವ್ ಒಂದು ಅಧ್ಯಯನ, ಪು-೩

ಮಾಡಬೇಕಾಗಿದೆ. ಆಗ ಮಾತ್ರ ಈ ಕ್ಷೇತ್ರದಲ್ಲಿ ಮಹತ್ವದ ಅಂಶಗಳು ಬೆಳಕಿಗೆ ಬಂದು ನಮ್ಮ ಕಲಾ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹೆಚ್ಚಿಸಲು ಸಹಕಾರಿಯಾಗಬಹುದು. ಆದರೆ ಅವು ನಿರಂತರವಾಗಿ ಮುಂದಿನ ಪೀಳಿಗೆಗೆ ಪರಿಚಯವಾಗಬೇಕಾದರೆ ಅವರುಗಳ ಅಧ್ಯಯನದ ಮೂಲಕ ಕಾರ್ಯರೂಪಕ್ಕೆ ತರುವುದು ಇಂದು ಬಹಳ ಅವಶ್ಯವಾಗಿದೆ.

ಪ್ರಸ್ತುತ ಇಂಥ ಅಧ್ಯಯನದ ಅನಾದರಕ್ಕೆ ಒಳಗಾದ ಮತ್ತು ಚಿತ್ರಕಲಾ ಕ್ಷೇತ್ರದಲ್ಲಿ ಅತ್ಯಂತ ಬಹು ಎತ್ತರದ ಸಾಧನೆಯನ್ನು ಮಾಡಿದ ಹಿರಿಯ ಕಲಾವಿದ ದಿ.ಶ್ರೀ.ಸಿ.ಎನ್.ಪಾಟೀಲರವರ ಕುರಿತು ಅವರ ಜೀವನ ಸಾಧನೆಯ ಮತ್ತು ಚಿತ್ರಕಲಾ ಕ್ಷೇತ್ರಕ್ಕೆ ನೀಡಿದ ಅವರ ವಿಶಿಷ್ಟ ಕೊಡುಗೆಯನ್ನು ದಾಖಲೀಕರಣ ಮಾಡುವ ಹಿನ್ನಲೆಯಲ್ಲಿ ಪ್ರಸ್ತುತ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ದಿ.ಶ್ರೀ.ಸಿ.ಎನ್.ಪಾಟೀಲರವರು ಗದಗ ಜಿಲ್ಲೆಯ ಹಿರಿಯ ಕಲಾವಿದರಲ್ಲಿ ಒಬ್ಬರು ಕಲಾ ಸಂಪನ್ನರು. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ, ಗದಗ, ಶಹರದಲ್ಲಿ ಶಿಕ್ಷಣ ಪಡೆದು ಎನ್ನುತ ಕಲಾ ಶಿಕ್ಷಣವನ್ನು ಮುಂಬೈನ ಸರ್.ಜೆ.ಜೆ.ಕಲಾ ಶಾಲೆಯಲ್ಲಿ ಪಡೆದು, ಕಲಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕಲಾ ಶಿಕ್ಷಕರಾಗಿ, ನಿರ್ದೇಶಕರಾಗಿ, ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಗದಗ ಜಿಲ್ಲೆಯಲ್ಲಿ ಸ್ಕೌಟ್ ಮತ್ತು ಗೈಡ್ಸ್ ಸ್ಥಾಪನೆ ಮತ್ತು ಅದರ ಅಸಿಸ್ಟೆಂಟ್ ಕಮೀಶನರ್‌ರಾಗಿ ಇನ್ನೂ ಹಲವಾರು ಕ್ಷೇತ್ರದಲ್ಲಿ ಪ್ರಮುಖರಾಗಿ ತಮ್ಮ ಸೇವೆಯನ್ನು ಸಲ್ಲಿಸಿದವರು. ಯಾವುದೇ ಕ್ಷೇತ್ರವಾದರೂ ಅಲ್ಲಿ ಕಲಾತ್ಮಕತೆಯನ್ನು ಪ್ರಾಧಾನ್ಯತೆ ಎದ್ದು ಕಾಣುತ್ತಿರುವುದು ತಿಳಿಯುತ್ತದೆ. ಇವರ ಈ ಕಲಾ ಸೇವೆಗೆ ಪ್ರತಿಫಲವಾಗಿ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳು ಮತ್ತು ಹಲವಾರು ಗಣ್ಯ ಮಾನ್ಯರಿಂದ, ಮಹಾಸ್ವಾಮಿಗಳವರಿಂದ ಗೌರವ ಸನ್ಮಾನಗಳು ಲಭಿಸಿವೆ. ದಿ.ಶ್ರೀ.ಸಿ.ಎನ್.ಪಾಟೀಲರ ಜೀವನ ಸಾಧನೆ ಕಲಾಬದುಕು ಕಲಾಕೃತಿಗಳು ಮತ್ತು ಕಲಾ ವಲಯಕ್ಕೆ ಅವರ ಸೇವೆ ಕುರಿತು ಅಧ್ಯಯನ ಮಾಡುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ದಿ.ಶ್ರೀ.ಸಿ.ಎನ್.ಪಾಟೀಲರವರು ಪಾಶ್ಚಾತ್ಯ ಕಲೆಯ ಸಿದ್ಧಾಂತಗಳನ್ನು ಇಷ್ಟಪಟ್ಟವರು. ಆದರೂ ತಮ್ಮ ಕಲಾಕೃತಿಗಳಲ್ಲಿ ತಮ್ಮದೇ ಸಾಂಕೇತಿಕ ಶೈಲಿ ಎದ್ದು ಕಾಣಸಿಗುತ್ತವೆ. ಅವರ ಹಲವಾರು ಶರಣರ ಪೂರ್ಣಭಾವಚಿತ್ರ ಬಿಡಿಸಿ ಹಿನ್ನಲೆಯಲ್ಲಿ ಭಾರತೀಯ ಸಂಪ್ರದಾಯಿಕ ಶೈಲಿಯನ್ನು ಹೋಲುವ ಸಣ್ಣ ಆಕೃತಿ ಸೂಕ್ಷ್ಮ ಕೆಲಸ ಇರುವುದು ನೋಡಬಹುದಾಗಿದೆ. ಸಿ.ಎನ್.ಪಾಟೀಲರ ಸಾಕಷ್ಟು ಕಲಾಕೃತಿಗಳು ಪ್ರಶಸ್ತಿ ಬಹುಮಾನಗಳನ್ನು ಪಡೆದುಕೊಂಡಿವೆ. ದೇಶ ವಿದೇಶದಲ್ಲಿಯೂ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ಪ್ರೌಢಶಾಲಾ ಶಿಕ್ಷಕರಾಗಿ, ವಿಜಯಕಲಾ ಮಂದಿರದ ಪ್ರಥಮ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಇವರು ನೂರಾರು ಕಲಾವಿದರನ್ನು ಕಲಾಶಿಕ್ಷಕರನ್ನು ನಾಡಿಗೆ ನೀಡಿದ ಇವರ ವಿದ್ಯಾರ್ಥಿಗಳಿಗೆ ಕಲಾಸಕ್ತಿ ಮೂಡಿಸುವ ರೀತಿ ಉಲ್ಲೇಖಿಸುವ ಅಗತ್ಯತೆ ಇದೆ ಎಂದೆನಿಸುತ್ತದೆ. ಸಿ.ಎನ್.ಪಾಟೀಲರು ಕೇವಲ ಕಲಾಕ್ಷೇತ್ರದಲ್ಲಿ ಅಲ್ಲದೇ ಸ್ಕೌಟ್ ಮತ್ತು ಗೈಡ್ಸ್, ನಾಟ್ಯ, ಭಾಷಣ, ಶಿಲ್ಪ, ಜನಸೇವೆ, ಕರ್ನಾಟಕ

ಏಕೀಕರಣದಲ್ಲಿ ಭಾಗವಹಿಸುವಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಬಗೆಯನ್ನು ಈ ಪ್ರಬಂಧದಲ್ಲಿ ವಿವರಿಸಲಾಗುವುದು.

ಶ್ರೀ. ಸಿ.ಎನ್.ಪಾಟೀಲರ ಕುರಿತು ಇದುವರೆಗೆ ನಡೆದಿರುವ ಅಧ್ಯಯನ

ಗದಗ ಜಿಲ್ಲೆಯ ಹಿರಿಯ ಕಲಾವಿದರಾದ ಶ್ರೀ.ಸಿ.ಎನ್.ಪಾಟೀಲರವರ ಜನನ, ಬಾಲ್ಯಪರಿಸರ, ವಿದ್ಯಾಭ್ಯಾಸ, ವೃತ್ತಿ ಜೀವನ, ಸಾಹಿತ್ಯ, ನಾಟಕ, ಸ್ಕೌಟ್ ಸೇವೆ ಕುರಿತು ವಿವರಣೆಯನ್ನು ಗಂಥ್ರ, ಸ್ಮರಣಸಂಚಿಕೆ, ದಿನಪತ್ರಿಕೆ ಹಾಗೂ ಕಲಾವಿದರ ಪರಿಚಯಗಳಲ್ಲಿ ಹರಡಿಕೊಂಡಿವೆ.

ಸಿ.ಎನ್.ಪಾಟೀಲರವರನ್ನು ಕುರಿತ ಕೆಲವು ಲೇಖನ ಮತ್ತು ಕಿರುಪ್ರಬಂಧಗಳು ಇಂತಿವೆ. ಸೆಪ್ಟಂಬರ್ ೧೯೭೫ರಲ್ಲಿ ನಮ್ಮ ಗದಗ ಬೇಟಗೇರಿ, ಡೈರೆಕ್ಟರಿ, ಹ.ರಾ.ಕಿವಿಯೂರು, ೧೯೯೦ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ದೃಶ್ಯಕಲೆ ಆರಾಧಕರು ಎಂಬ ಕಲಾವಿದರ ಪರಿಚಯದಲ್ಲಿ, ಕಲಾಚರಿತ್ರೆ ಪುಸ್ತಕ ಅಶೋಕ ಅಕ್ಕಿ, ೧೯೯೩ರಲ್ಲಿ ಆನೇ ಆಲ್ ಇಂಡಿಯಾ ವೆಸ್ಟರ್ನ್ ಆರ್ಟಿಸ್ಟ್ ಎಗ್ಜಿಬಿಷನ್, ನ್ಯೂಡೆಲ್ಲಿ, ೧೯೯೫ ವಜ್ರ ಮಹೋತ್ಸವ ಸಂಚಿಕೆ , ಹಾಲ್‌ಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ, ೧೯೯೬ರಲ್ಲಿ ಜ್ಯೋತಿರ್ಗಮಯ ಸುವರ್ಣ ಮಹೋತ್ಸವ ಸಂಚಿಕೆ, ೧೬.೦೯.೨೦೦೨ ನಾಗರಿಕ ದಿನಪತ್ರಿಕೆ ನವೆಂಬರ್ ೧-೨೦೦೬ ವಿಜಯ ಕರ್ನಾಟಕ ಸುವರ್ಣ ಕರ್ನಾಟಕ ವಿಶೇಷ ಪುರವಣಿ ೧೧.೦೧.೨೦೦೬ ನವೋದಯ ದಿನಪತ್ರಿಕೆಗಳಲ್ಲಿ ಪಾಟೀಲರ ಕಲೆ ಮತ್ತು ಬದುಕನ್ನು ಕುರಿತು ಉಲ್ಲೇಖನೀಯ ಸಾಹಿತ್ಯದ ಸಂಕ್ಷಿಪ್ತ ವಿವರಗಳು ಕಂಡುಬರುತ್ತವೆ.

ಕಿರುಪ್ರಬಂಧ

೨೦೦೫-೦೬ ಚಾಲುಕ್ಯ ಚಿತ್ರಕಲಾ ಮಹಾವಿದ್ಯಾಲಯ ಬದಾಮಿಯಲ್ಲಿ ೫ನೇ ವರ್ಷದ ವಿಶೇಷ ಪರಿಣಿತಿ ಪದವಿಗೆ ಮಂಡಿಸಿದ ಕಲಾಚಾರ್ಯ ಸಿ.ಎನ್.ಪಾಟೀಲ ಲಘುಶೋಧ ಪ್ರಬಂಧ, ೨೦೦೬-೦೭ರಲ್ಲಿ ವಿಜಯ ಕಾಲೇಜ್ ಆಫ್ ಫೈನ್ ಆರ್ಟ್, ಕರ್ನಾಟಕ ವಿಶ್ವವಿದ್ಯಾಲಯ ಅಂತಿಮ ವರ್ಷದ ಸ್ನಾತ್ತಕೋತ್ತರ ಪದವಿಗೆ ಮಂಡಿಸಿದ ಶ್ರೀ.ಸಿ.ಎನ್.ಪಾಟೀಲ ಬದುಕು ಮತ್ತು ಕಲಾಕೃತಿಗಳು ಲಘು ಸಂಶೋಧನಾ ಪ್ರಬಂಧ, ಎಫ್.ಎನ್.ಕುಳಗೇರಿ ೨೦೦೬-೦೭ರಲ್ಲಿ ೫ನೇ ವರ್ಷದ ವಿಶೇಷ ಪರಿಣತಿ, ಜೆ.ಎನ್.ಸ್ಕೂಲ್ ಆಫ್ ಆರ್ಟ್, ಕನ್ನಡ ವಿಶ್ವವಿದ್ಯಾಲಯ, ಚಿತ್ರಕಲಾವಿದ ಸಿ.ಎನ್.ಪಾಟೀಲ ಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ ಕಿರುಪ್ರಬಂಧ ಎಫ್.ಆರ್.ಲಮಾಣಿ, ೨೦೦೭-೦೮ರಲ್ಲಿ ಎಂ.ವಿ.ಎ.ಸ್ನಾತಕೋತ್ತರ ಪದವಿ, ಅಂತಿಮ ವರ್ಷ ಕನ್ನಡ ವಿಶ್ವವಿದ್ಯಾಲಯ ಕಲಾವಿದ ಸಿ.ಎನ್.ಪಾಟೀಲರ ಕಲೆ ಮತ್ತು ಬದುಕು ಒಂದು ಅಧ್ಯಯನ ಕಿರುಪ್ರಬಂಧ, ಸೇವಾನಿರತ ಅಧ್ಯಾಪಕ, ಎಸ್.ಎನ್.ಹರ್ಲಾಪುರ, ಜೆ.ಎನ್.ಕಲಾಶಾಲೆಯವರು ಇವರು ಸಿ.ಎನ್.ಪಾಟೀಲರ ಕುರಿತು ಪ್ರಬಂಧವನ್ನು ಮಂಡಿಸಿದ್ದಾರೆ.

ಅಧ್ಯಯನದ ಸ್ವರೂಪ

ಈ ಅಧ್ಯಯನವನ್ನು ಏಳು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದ ವಿಷಯವನ್ನು ಕುರಿತು ಸಂಕ್ಷಿಪ್ತ ಸ್ವರೂಪ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಗಳೊಂದಿಗೆ, ಆಕರ ಸಾಮಗ್ರಿಗಳ ವಿವರಣೆ ಇರುವುದು.

ಎರಡನೆಯ ಅಧ್ಯಾಯದಲ್ಲಿ ಗದುಗಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತ ಕಲೆಗಳು ಎಂದಾಗಿರುವುದರಿಂದ ಸಂಗೀತ, ನಾಟಕ, ನಾಟ್ಯ ಮತ್ತು ಚಿತ್ರಕಲೆಯನ್ನು ಕುರಿತು ವಿವರಿಸಿದೆ.

ಮೂರನೆಯ ಅಧ್ಯಾಯದಲ್ಲಿ ಸಿ.ಎನ್.ಪಾಟೀಲರ ಬಾಲ್ಯ ಪರಿಸರ, ಪ್ರಾಥಮಿಕ ಹಂತದಲ್ಲಿ ಚಿತ್ರಕಲೆಗೆ ಅವರ ಒಲವು ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಚಿತ್ರಕಲೆಯ ವಿದ್ಯಾಭ್ಯಾಸ ಕುರಿತ ವಿವರಣೆ ಇರುವುದು.

ನಾಲ್ಕನೆಯ ಅಧ್ಯಾಯದಲ್ಲಿ ಸಿ.ಎನ್.ಪಾಟೀಲರು ಚಿತ್ರಕಲಾ ಶಿಕ್ಷಣ ಮುಗಿಸಿ ಬಂದು ನಂತರ ಚಿತ್ರಕಲೆ ಜೊತೆಗೆ ತಮ್ಮ ಹಲವಾರು ಚಟುವಟಿಕೆಗಳನ್ನೊಳಗೊಂಡ ವೃತ್ತಿ ಜೀವನದ ವಿವರಣೆಯನ್ನು ಕಟ್ಟಿಕೊಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸಿ.ಎನ್.ಪಾಟೀಲರು ರಚಿಸಿದ ರೇಖಾ ಹಾಗೂ ವರ್ಣಚಿತ್ರಗಳನ್ನು ಮಾಧ್ಯಮವಾರು, ವಿಷಯವಾರು ವರ್ಗೀಕರಿಸಿಕೊಂಡು ವಿಮರ್ಶಾತ್ಮಕ ಅಧ್ಯಯನ ಕೈಗೊಳ್ಳಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸಿ.ಎನ್.ಪಾಟೀಲರು ರಚಿಸಿದ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ ಮತ್ತು ರಚನಾಶೈಲಿ ತಂತ್ರಗಾರಿಕೆಗಳ ಕುರಿತು ಚರ್ಚೆ ಮಾಡಲಾಗಿದೆ.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಪ್ರಸ್ತುತ ಅಧ್ಯಯನದ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಒಳಗೊಂಡಿರುತ್ತದೆ.

ವ್ಯಾಪ್ತಿ

ಶ್ರೀ.ಸಿ.ಎನ್.ಪಾಟೀಲರು ರಚಿಸಿದ ಕಲಾಕೃತಿಗಳು ಗದುಗಿನ ಮಠಗಳಲ್ಲದೇ ಈ ಜಿಲ್ಲೆಯ ಸುತ್ತಮುತ್ತಲಿನ ಮಠಗಳು, ದೇವಸ್ಥಾನಗಳು, ಗದಗ ನಗರದ ಸಭಾಭವನದಲ್ಲಿ, ಮನೆಗಳಲ್ಲಿ ಕಲ್ಕತ್ತಾ, ಡಿಲ್ಲಿ, ಕೆನಡಾ, ಅಮೇರಿಕಾ, ಮುಂಬೈ, ಮೈಸೂರು, ಬೆಂಗಳೂರು, ಧರ್ಮಸ್ಥಳ, ದಾವಣಗೇರಿ, ಚಿತ್ರದುರ್ಗ, ಬಿಜಾಪುರ, ಧಾರವಾಡ ಹೀಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ನಿಬಂಧದ ರಚನಾ ವ್ಯಾಪ್ತಿಗೆ ಅನುಗುಣವಾಗುವಂತೆ ವ್ಯಾಪ್ತಿಯನ್ನು ಸೀಮಿತಗೊಳಿಸಿ ಎಲ್ಲ ವಿಷಯಗಳು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

ವೈಧಾನಿಕತೆ

ವ್ಯಕ್ತಿಗತ ಅಧ್ಯಯನದ ವಿಧಾನವಾಗಿರುವುದರಿಂದ ಇಲ್ಲಿ ಎರಡು ರೀತಿಯ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

ಈ ಎರಡೂ ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ, ಇದರಲ್ಲಿ ಸಂದರ್ಶನ, ಧ್ವನಿಮುದ್ರಣ, ಛಾಯಾಚಿತ್ರಣ, ಪ್ರಕಟವಾದ ಗ್ರಂಥ ಹಾಗೂ ಲೇಖನಗಳನ್ನು ಸಂಗ್ರಹಿಸಿ ವಿವರ ಪಡೆಯುವುದಾಗಿದೆ.

ಸಂದರ್ಶನ

ಚಿತ್ರಕಲಾವಿದ ಸಿ.ಎನ್.ಪಾಟೀಲರ ಬಾಲ್ಯ ಶಿಕ್ಷಣ ಪ್ರಾಥಮಿಕ ಹಂತದಲ್ಲಿ ಕಲೆಯ ಕಡೆಗೆ ವಾಲಿದ ಅವರ ಮನಸ್ಸು, ಪ್ರೇರಣೆ ನೀಡಿದ ಕಲಾವಿದರು, ಗುರುಗಳು, ಕೌಟುಂಬಿಕ ಹಿನ್ನಲೆ, ಮುಂಬೈಯಲ್ಲಿನ ಅವರ ಚಿತ್ರಕಲಾಭ್ಯಾಸ, ಕಲಾ ವಾತಾವರಣ, ಶಿಕ್ಷಕ ವೃಂದ, ವಿದ್ಯಾರ್ಥಿ ಜೀವನ, ಚಿತ್ರಕಲಾ ಪ್ರದರ್ಶನ, ಕಲಾವೃತ್ತಿ, ಕಲಾ ಶಿಕ್ಷಕರಾದ ನಂತರದ ಅವರ ಅನುಭವಗಳು, ಅವರ ಚಿತ್ರ ಶೈಲಿ ತಂತ್ರ, ರೇಖಾವಿನ್ಯಾಸ ಹಾಗೂ ವರ್ಣಗಳ ಬಳಕೆ ಅಲ್ಲದೆ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಅನೇಕ ವಿಷಯಗಳನ್ನು ಅವರು ಬರೆದಿರುವ ಲೇಖನ ಮತ್ತು ವೃತಿ ಜೀವನದಲ್ಲಿ ಸಹ ಮಿತ್ರರು ಹಾಗೂ ಅವರ ಕಲಿಸಿದ ವಿದ್ಯಾರ್ಥಿಗಳನ್ನು ಸಂದರ್ಶನ ಮಾಡುವುದರ ಮುಖಾಂತರ ವಿಷಯ ಸಂಗ್ರಹಿಸಲಾಯಿತು. ಅಲ್ಲದೆ ಅವರ ಕುಟುಂಬದವರನ್ನು ಸಂದರ್ಶಿಸಿ, ಅವರಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಅವರಿಂದ ಬಂದ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಛಾಯಾಚಿತ್ರಣ

ಕಲಾವಿದರ ಸಂಗ್ರಹಕ್ಕೆ ಬೇಟಿಕೊಟ್ಟು ಅಲ್ಲಿರುವ ಹಳೆಯ ಚಿತ್ರಗಳನ್ನು ಇತ್ತೀಚಿಗೆ ರಚಿಸಿದ ಕಲಾಕೃತಿಗಳ ಛಾಯಾಚಿತ್ರ ಮಾಡಲಾಯಿತು. ಅಲ್ಲದೇ ಅವರು ಕಲಾ ವೃತಿಯನ್ನು ಪ್ರಾರಂಭಿಸಿ ಮುಂದುವರಿಸಿದ ದಿನಗಳವರೆಗಿನ ಹಂತ ಹಂತವಾದ ರೇಖಾ ಚಿತ್ರಗಳನ್ನು ಅಲ್ಲದೆ ಅವರ ಕಲಾವೃತ್ತಿಗಳಿರುವ ಸ್ಥಳಗಳಿಗೆ ಹೋಗಿ ಧಾರವಾಡ, ಹುಬ್ಬಳಿ, ಮುಂಡರಗಿ, ಬಳಗಾನೂರ, ಜಕ್ಕಲಿ, ಹಾಳಕೇರಿ, ಮುಳಗುಂದ, ಮಠಗಳು, ದೇವಸ್ಥಾನಗಳು ಹಾಗೂ ಮನೆಗಳಿಗೆ ಸಂದರ್ಶಿಸಿ ಛಾಯಾಚಿತ್ರಣ ಮಾಡಿ ಕಂಪ್ಯೂಟರ್ ಮುಖಾಂತರ ಮುಂದ್ರಿಸಲಾಗಿದೆ.

ಅನುಷಂಗಿಕ ಆಕರ ಸಾಮಗ್ರಿ

ಸಂಶೋಧನಾ ಪ್ರಬಂಧಗಳು, ಪ್ರಕಟಿತ, ಅಪ್ರಕಟಿತ ಲೇಖನಗಳು, ಸಂಪಾಧನ ಗ್ರಂಥಗಳು, ಸಂಚಿಕೆಗಳು ಹಾಗೂ ಕಲಾಶಾಲೆಗಳಿಗೆ ಭೇಟಿ ನೀಡಿ ವಿಷಯ ಸಂಗ್ರಹಿಸಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ - ೨

ಗದುಗಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಅಧ್ಯಾಯ - ೨

ಗದುಗಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಪುರೋಗಾಮಿ ಪಾತ್ರವನ್ನಾಡುತ್ತ ಬಂದಿರುವ ಮಹತ್ವದ ನಗರಗಳಲ್ಲಿ ಗದಗು ಕೂಡ ಒಂದಾಗಿದೆ. ಕಲೆಯ ಬೀಡಾಗಿ, ಕನ್ನಡ ನೆಲೆವೀಡಾಗಿ, ಶೈಕ್ಷಣಿಕ ಕೇಂದ್ರವಾಗಿ ಈ ಜಿಲ್ಲೆ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತ ಬಂದಿದೆ. ಗದಗು ವಿಜಯನಗರ ಕಾಲದ ಕನ್ನಡ ಸಂಸ್ಕೃತಿಗೆ ಕೊಟ್ಟ ಕಾಣಿಕೆ ಅವಿಸ್ಮರಣೀಯವಾದುದು.

ಗದುಗಿನ ಪ್ರಾಚೀನತೆ

"ಗದಗು ಪುರಾಣ ಪ್ರಸಿದ್ಧವಾದ ಪ್ರಮುಖ ನಗರ. ಶತಮಾನಗಳ ಹಿಂದಿನ ಗದಗ -ಬೇಟಗೇರಿಯ ಇತಿಹಾಸವನ್ನು ಸಂಸ್ಕೃತ ಮತ್ತು ಕನ್ನಡ ಶಿಲಾಶಾಸನಗಳು ಸಾರಿ ಹೇಳುತ್ತವೆ. ಸಾವಿರ ವರ್ಷಗಳ ಹಿಂದಿನಿಂದಲೇ ಗದಗು ಹೆಸರಾಂತ ನಗರವಾಗಿತ್ತು. ಈ ಗದಗು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ತೆರನಾಗಿ ಸಂಬೋಧಿಸಲ್ಪಟ್ಟಿದೆ. ಕೃತಕ, ಕೃತುಪುರ, ಕರ್ದುಗು, ಗಳದುಗು, ಗದಗು ಎಂದು ಮುಂತಾಗಿ ಗದುಗಿಗೆ ಹೆಸರುಗಳುಂಟು. ಕೃತು ಎಂದರೆ ಸಂಸ್ಕೃತದಲ್ಲಿ ಯಜ್ಞ ಎಂದರ್ಥ, ಹಿಂದೆ ಜನಮೇಜಯ ಮಹಾರಾಜನು ಸರ್ಪಯಜ್ಞವನ್ನು ಇದೇ ಸ್ಥಳದಲ್ಲಿ ಮಾಡಿದ್ದರಿಂದ ಗದುಗಿಗೆ ಕೃತುಪುರ ಎಂಬ ಹೆಸರು ಬಂತೆಂದು ಕೃತಪುರ ಮಹಾತ್ಮೆಯಿಂದ ತಿಳಿದುಕೊಳ್ಳಬಹುದು. ಕೃತುಪುರ ಮಹಾತ್ಮೆ ಎಂಬ ಹೆಸರು ಗದುಗಿನ ಸ್ಥಳ ಪುರಾಣವಾಗಿದೆ. ಗದುಗಿನ ವೀರನಾರಾಯಣ ಗುಡಿಯ ಪ್ರಾಕಾರದಲ್ಲಿಯೇ ಸರ್ವೇಶ್ವರ ದೇವಸ್ಥಾನವೂ ಇದೆ. ಇದು ಜನಮೇಜಯನ ಸರ್ಪಯಾಗ ಕುರುಹು ಸಾಕ್ಷಿಯಾಗಿ ಉಳಿದಿದೆ. ಕೃತುಪುರ ಒಂದು ಅಗ್ರಹಾರವಾಗಿತ್ತೆನ್ನುವುದಕ್ಕೆ ಇಲ್ಲಿನ ಶಾಸನ ನಿದರ್ಶನವಾಗಿದೆ.

---

೧. ಹ.ರಾ.ಕಿದಿಯೂರು -ನಮ್ಮ ಗದಗ ಬೇಟಗೇರಿ, ಪು-೪೫೦

"ಆಸ್ತಿ ದಕ್ಷಿಣಪಥೇ ಬೆಲ್ವಲತ್ರಿಶತಮಧ್ಯೇ ಕೃತುಕೋ ನಾಮ ಮಹಾಗ್ರಾಹರ ಯಃ ಕೀಲ ಸಕಲ ಭೂಪಾಲ ಚೂಡಾಮಣಿ ನಾ ಪಾಂಡು ತುಲತಿಲಕೇನ ಮಹಾರಾಜನ ಜನಮೇಜಯೇನ ಸರ್ಪಯಾಗೇ ತಪೋ ವಿದ್ಯಾವೃತ್ತ ಸಂಪನ್ನೇಭ್ಯಃ ನಾನಾಗೋ ತ್ರೇಭ್ಯಃ ದ್ವಾಸಪ್ತ ತ್ರ್ಯೆ ಬ್ರಾಹ್ಮಣೇಭ್ಯಃ ದತ್ತಃ"[೨] ಎನ್ನುವಂತೆ ಕೃತಕ ಗದಗು ಬೆಳ್ವಲ ದೇಶದ ದೊಡ್ಡ ಅಗ್ರಹಾರ, ವಿದ್ಯಾಕೇಂದ್ರವಾಗಿದ್ದು, ಪಾಂಡು ಕುಲತಿಲಕನಾದ ಮಹಾರಾಜ ಜನಮೇಜಯನ್ನು ಸರ್ಪಯಾಗ ಮಾಡಿ, ತಪೋನಿಷ್ಠರೂ, ವಿದ್ಯಾಸಂಪನ್ನರೂ ಆಗಿದ್ದ ಬೇರೆ ಬೇರೆ ಗೋತ್ರದ ೭೨ ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟನು ಎಂದು ಈ ಮೇಲಿನ ಸಂಸ್ಕೃತ ಶಿಲಾಲೇಖನವು ಸಾರುತ್ತದೆ.

"ದ್ವಾಪರ ಯುಗದ ಅಂತ್ಯಕಾಲದಲ್ಲಿಯೇ ಜನಮೇಜಯ ಮಹಾರಾಜನು ಗದುಗಿನಲ್ಲಿ ಕೈಗೊಂಡ ಸರ್ಪಯಾಗಕ್ಕೆ ಸಕಲವೇದ ವೇದಾಂಗ ಪರಿಣಿತ ಋತ್ವೆ ಜರ ಭಾಗವಹಿಸಿದ್ದ ವಿಷಯ ಮತ್ತು ತ್ರಿಕೂಟೇಶ್ವರ ಹಾಗೂ ಶ್ರೀ ವೀರನಾರಾಯಣ ದೇವರ ದೇವಸ್ಥಾನಗಳು ಅಸ್ತಿತ್ವದಲ್ಲಿದ್ದ ವಿಷಯವನ್ನು ಇನ್ನೊಂದು ಶಾಸನವು ಹೇಳುತ್ತದೆ."[೩] ಶತಮಾನಗಳಾಚೆ ಗದಗ ಸಂಸ್ಕೃತ ವಿದ್ಯೆಯ ತವರು ಮನೆಯಾಗಿದ್ದು ಇತಿಹಾಸದ ಪುಟಗಳಲ್ಲಿ ದಾಖಲುಗೊಂಡಿದೆ.

ಗದಗ ಪರಿಸರ

"ಗದಗ ಜಿಲ್ಲೆ ಕರ್ನಾಟಕದ ಹೃದಯ ಭಾಗದಲ್ಲಿದೆ. ಕರುನಾಡಿನ ಜೀವನಾಡಿ ಸಮೃದ್ಧ ಕರ್ನಾಟಕದ ಗದಗ ಜಿಲ್ಲೆಗೆ ಕಿರೀಟ ತೊಡಸಿದಂತೆ ಮಹಾತಾಯಿ ಮಲ್ಲಪ್ರಭೆಯು ರೈತರ ಜೀವನದಿಯಾಗಿ ಅನ್ನದಾತೆಯಾಗಿ ಹರಿಯುತ್ತಿದ್ದಾಳೆ. ಇನ್ನು ತುಂಗಭದ್ರೆ ಗದಗ ಜಿಲ್ಲೆಯ ಪಾದ ತೊಳೆಯುವಂತೆ ಕೆಳ ಪ್ರದೇಶದಲ್ಲಿ ರೈತರ ಬಾಳಿಗೆ ಭಾಗ್ಯದೇವತೆಯಾಗಿ ಜನರ ದಾಹವನ್ನು ನೀಗಿಸುತ್ತಾ ಹರಿದಾಡುವ ದೇವಿಯಾಗಿದ್ದಾಳೆ."[೪]

"ಗದಗ ಜಿಲ್ಲೆಯನ್ನು ಕವಿ ಕಾಶಿಯೆಂದರೆ ತಪ್ಪಾಗಲಾರದು. ಪ್ರಾಚೀನ ಕವಿಗಳಾದ ಕುಮಾರವ್ಯಾಸರು ಮತ್ತು ಚಾಮರಸರು ಕವಿಪುಂಗರೆನಿಸಿದ್ದಾರೆ. ಕವಿಯತ್ರಿಯಾದ ಆಯ್ದಕ್ಕಿ ಲಕ್ಕಮ್ಮ ಮಹಾ ಶಿವಶರಣೆಯೆನಿಸಿದ್ದಾಳೆ. ಅತ್ತಿಮಬ್ಬೆಯು ದಾನಚಿಂತಾಮಣಿಯೆನಿಸಿದ್ದಾಳೆ, ಗದುಗಿನ ವೀರನಾರಾಯಣ ದೇವನನ್ನೇ ಆರಾಧ್ಯ ದೈವವನ್ನಾಗಿಸಿಕೊಂಡ ನಾರಾಣಪ್ಪನು ಹುಟ್ಟಿದ್ದು ಗದಗ ಜಿಲ್ಲೆಯ ಕೋಳಿವಾಡ ಎಂಬ ಗ್ರಾಮದಲ್ಲಿ ಮುಂದೆ ನಾರಾಣಪ್ಪನು ಸಂಸ್ಕೃತ ವ್ಯಾಸಭಾರತವನ್ನು ಆಧರಿಸಿ ಕನ್ನಡದಲ್ಲಿ "ಕರ್ನಾಟಕ ಭಾರತ ಕಥಾ ಮಂಜರಿ"ಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಬಗೆಗೆ ತನಗಿರುವ ಭಕ್ತಿಯನ್ನು ವ್ಯಕ್ತಪಡಿಸುವ ಸಲುವಾಗಿ ತನ್ನನ್ನು 'ಕುಮಾರವ್ಯಾಸ' ಎಂದು ಕರೆದುಕೊಂಡಿದ್ದಾನೆ.

---

೨. ಹ.ರಾ.ಕಿದಿಯೂರು -ನಮ್ಮ ಗದಗ ಬೇಟಗೇರಿ, ಪು-೪೫೦

೩. ಹ.ರಾ.ಕಿದಿಯೂರು -ನಮ್ಮ ಗದಗ ಬೇಟಗೇರಿ, ಪು-೪೫೮

೪. ರಾಜೀವ ಬಾ.ಬೇಟಗೇರಿ -ಲಕ್ಕುಂಡಿ ಉತ್ಸವ, ೨೦೦೮

ಅಲ್ಲಮ್ಮಪ್ರಭುದೇವರ ಲೀಲೆಯನ್ನು ಸಾರುತ್ತ ಜನಮನ ಸೆಳೆದ ಕವಿಯೆಂದರೆ ಗದುಗಿನ ನಾರಾಯಣಪುರದ ಚಾಮರಸರು, ಗದಗ ಜಿಲ್ಲೆಯು ಕಾವ್ಯದಲ್ಲಿ ಶ್ರೀಮಂತವಾಗಿದೆ ಎಂಬುದಕ್ಕೆ ಈ ಕವಿಪುಂಗವರೇ ಸಾಕ್ಷಿ."[೫]

"ಗದಗ ಜಿಲ್ಲೆ ಹಲವಾರು ಮಹಾನ್ ವ್ಯಕ್ತಿಗಳ ನೆಲೆ ಬೀಡಾಗಿದೆ. ಅಂತರದಲ್ಲಿ ಮಹಾನ್ ಎನಿಸಿಕೊಂಡ ಮಹಾದೇವಿಯಾದ ತಾಯಿ ಇಟಗಿಯ ಭೀಮಾಂಬಿಕೆ ಅವರನ್ನು ಬನಶಂಕರಿ ದೇವಿಯ ಅವತಾರವೆಂದು ಪೂಜಿಸುತ್ತಾರೆ. ದೈವ ಮಹಾತ್ಮೆಯಿಂದ ಹಾಗೂ ಪವಾಡ ಪುರುಷರಿಂದ ಗದಗ ಜಿಲ್ಲೆ ದೈವೀಕೇಂದ್ರವಾಗಿ ರೂಪುಗೊಂಡಿದೆ."[೬]

ನಮ್ಮ ಗದಗ ಜಿಲ್ಲೆಯಲ್ಲಿ ಶಿಲ್ಪಕಲೆಯು ಪ್ರಕಾಶಿಸುತ್ತದೆ. ಜಿಲ್ಲೆಯ ಲಕ್ಕುಂಡಿಯ ನೂರೊಂದು ಗುಡಿಗಳು ಬಹು ಆಕರ್ಷಣೀಯ. ಅಲ್ಲಿಯ ಬ್ರಹ್ಮ ಜೀನಾಲಯ ತನ್ನ ಶಿಲ್ಪ ವರ್ಚಸ್ಸಿನಿಂದ ಕಂಗೊಳಿಸುತ್ತಿದ್ದರೆ. ಸೂರ್ಯ ದೇವಾಲಯ ಸೂರ್ಯನಷ್ಟೇ ಪ್ರಕಾಶಮಾನವಾಗಿ ಹೊಳೆಯುತ್ತಿದೆ. ಲಕ್ಕುಂಡಿಯಲ್ಲಿ ಇನ್ನೂ ಹಲವಾರು ದೇವಾಲಯಗಳು ಶಿಲ್ಪಕಲೆಯಿಂದ ತಮ್ಮ ಪ್ರತಿಷ್ಠೆಯನ್ನು ಮೆರೆದಿವೆ. ಗದುಗಿನ ವೀರನಾರಾಯಣ ದೇವಾಲಯ ತ್ರಿಕೂಟೇಶ್ವರ ದೇವಸ್ಥಾನ ಹಾಗೂ ಸೋಮನಾಥ ದೇವಾಲಯ ಬಹು ಪ್ರಸಿದ್ಧಿ. ಸೋಮನಾಥ ದೇವಾಲಯ ರಾಷ್ಟ್ರೀಯ ಸಂರಕ್ಷಣಾ ಸ್ಮಾರಕವಾಗಿ ರೂಪುಗೊಂಡಿದೆ. ಲಕ್ಷ್ಮೀಶ್ವರದ ಸೋಮೇಶ್ವರ ದೇವಾಲಯ ಕೂಡ ಶಿಲ್ಪಕಲಾ ಕೇಂದ್ರವಾಗಿದೆ. ನಿರ್ಜೀವ ಕಲ್ಲಿಗೆ ವಿಶೇಷ ರೂಪ ಕೊಡಬಹುದು ಎಂಬುದಕ್ಕೆ ಇಲ್ಲಿಯ ದೇವಾಲಯಗಳೇ ಸಾಕ್ಷಿ. ಗದಗ ಜಿಲ್ಲೆಯನ್ನು ಹಲವಾರು ರಾಜವಂಶಗಳು ಆಳಿದ್ದು ದೇವಾಲಯಗಳಿಗೆ ಶಿಲ್ಪಕಲೆಯಿಂದ ವಿಶೇಷ ಆಕರ್ಷಣಾ ಶಕ್ತಿ ನೀಡಿ ತಮ್ಮ ಕೊಡುಗೆಯನ್ನು ಸಮರ್ಪಿಸಿವೆ.

ಸಾಹಿತ್ಯ

"ಗದಗ ಜಿಲ್ಲೆ ಹಲಾವಾರು ಕವಿರತ್ನರಿಗೆ ಕಲಾವಿದರಿಗೆ ಜನ್ಮಸ್ಥಳವಾಗಿದೆ. ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಗದುಗಿನ ಕವಿಗಳ ಕೊಡುಗೆ ಅಪಾರ ಹಾಗೂ ಅವಿಸ್ಮರಣೀಯ ಆಧುನಿಕ ಕವಿಗಳಾದ ಹುಯಿಳಗೋಳ ನಾರಾಯಣರಾವ್, ಚೆನ್ನವೀರ ಕಣವಿ ಹಾಗೂ ಇನ್ನಿತರ ಮಹಾನ್ ಕವಿಗಳಿಗೆ ಗದಗ ಜಿಲ್ಲೆ ಹೆಸರಾಗಿದೆ. ಹುಯಿಲಗೋಳ ನಾರಾಯಣರಾವ್‌ರವರು ಬರೆದು ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ ಬಹು ಖ್ಯಾತಿಯಾಗಿದೆ. ಅದರ ಜೊತೆ ದೊಡ್ಡಮೇಟಿ ಅಂದಾನಪ್ಪನವರು ಅಂದಿನ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಕಲಾವಿದ ಶ್ರೀ.ಸಿ.ಎನ್.ಪಾಟೀಲರವರಿಂದ ಕರ್ನಾಟಕ ಭುವನೇಶ್ವರಿ ತಾಯಿಯ ಕಲಾಕೃತಿಯನ್ನು ರಚಿಸಲಾಗಿದೆ. ಚಳವಳಿಯಲ್ಲಿ ಈ ಗೀತೆ ಹಾಗೂ ಕಲಾಕೃತಿಯ ಪರಿಣಾಮಕಾರಿ ಪಾತ್ರವಹಿಸಿತ್ತು. ಆ ಕಾರಣಕ್ಕಾಗಿ ಈ ಗೀತೆಯನ್ನು ನಾಡಗೀತೆಯನ್ನಾಗಿ

---

೫. ರಾಜೀವ ಬಾ.ಬೇಟಗೇರಿ -ಲಕ್ಕುಂಡಿ ಉತ್ಸವ, ೨೦೦೮

೬. ರಾಜೀವ ಬಾ.ಬೇಟಗೇರಿ -ಲಕ್ಕುಂಡಿ ಉತ್ಸವ, ೨೦೦೮

ಘೋಷಿಸಿತ್ತು. ಏಕೀಕರಣ ಕರ್ನಾಟಕಕ್ಕೆ ಮೊದಲ ನಾಡಗೀತೆಯನ್ನು ಕೊಟ್ಟ ಕವಿ ಹಾಗೂ ಕರ್ನಾಟಕ ಮಾತೆ ಭುವನೇಶ್ವರಿ ತಾಯಿ ಕಲಾಕೃತಿಯನ್ನು ರಚಿಸಿದ ಮೊಟ್ಟ ಮೊದಲ ಕಲಾವಿದರು ಗದಗ ಜಿಲ್ಲೆಯವರೆಂದು ಹೇಳಿಕೊಳ್ಳಲು ಹಾಲುಜೇನಿನ ಸವಿಯನ್ನುಂಡಷ್ಟು ಸಂತೋಷವಾಗುತ್ತದೆ. ವಿಶ್ವದಲ್ಲೇ ವಿನೂತನವಾದ ವಿದ್ಯಾ ಚೇತನವಾದ ಹಾಗೂ ಸರ್ವ ಹೃದಯ ಸಂಸ್ಕಾರಿಯಾದ ಭಾರತ ಮಾತೆಗೆ ಜಯವೆಂದ ಕಣ, ಚನ್ನವೀರ ಕಣವಿ ಗದಗ ಜಿಲ್ಲೆಯವರು ಎಂದು ಹೇಳಿಕೊಳ್ಳಲು ತುಂಬಾ ಸಂತಸವಾಗುತ್ತದೆ. ಇವರಿಂದ ಕನ್ನಡ ಸಾಹಿತ್ಯ ಜೇನಿಗಿಂತ ಸಿಹಿಯಾಗಿದೆ, ಮಿಂಚಿಗಿಂತ ಹೊಳಪು ಆಗಿದೆ. ಸೂರ್ಯಕಿರಣದಂತೆ ಪ್ರಕಾಶಮಾನವಾಗಿವೆ ಎಂದು ಹೇಳಬಹುದು."[೭]

ಜಾನಪದ ಸಾಹಿತ್ಯ

"ಸಾಂಸ್ಕೃತಿಕ ಪರಂಪರೆಯಿಂದ ಮತ್ತು ಜಾನಪದ ಸಾಹಿತ್ಯ ಭಂಡಾರದಿಂದ ಗದಗ ಜಿಲ್ಲೆಯ ಚೆಲುವು ಹೆಚ್ಚಿದೆ. ಜನಪದ ಕಲೆಗಳಲ್ಲಿ ಬಹು ಆಕರ್ಷಕವಾದ ಕಲೆಯೆಂದರೆ ನೃತ್ಯಕಲೆ ಎಂದು ಹೇಳಿದರೆ ತಪ್ಪು, ಇದರ ಮುಖ್ಯ ಉದ್ದೇಶ ಮನರಂಜನೆಯೇ ಆಗಿದೆ. ನಾಲವತ್ತುಕ್ಕಿಂತ ಅಧಿಕ ನೃತ್ಯಗಳು ಸಿಗುತ್ತವೆ. ಮುಖ್ಯವಾದ ನೃತ್ಯಗಳೆಂದರೆ ಡೊಳ್ಳು ಕುಣಿತ ವೀರಗಾಸೆ ಕುಣಿತ, ಜೋಗತಿ ಕುಣಿತ, ಕರಡಿ ಮಜಲು ಕುಣಿತ, ಬೀಸುಕಂಸಾಳೆ ಕುಣಿತ, ಪುರವಂತರ ಕುಣಿತ ಹೆಜ್ಜೆಮೇಳ ಕುಣಿತ, ನಂದಿಕೋಲ ಕುಣಿತ, ಕರಗತ ಕುಣಿತ, ಹುತ್ತರಿ ಕುಣಿತ, ಸುಗ್ಗಿ ಕುಣಿತ, ಸಿಂಹನೃತ್ಯ, ಕೀಲು ಕುದುರೆ ಕುಣಿತ, ದುಡಿಕುಣಿತ, ಕುರುಬ ದೇವರ ಕುಣಿತ, ಅಲಾಯಿ ಹೆಜ್ಜೆ ಕುಣಿತ, ಪಂಜಿನ ಕುಣಿತ, ಸೋಮಿನ ಕುಣಿತ, ಕೋಲಾಟದ ಕುಣಿತ, ಡೋಲಿನ ಕುಣಿತ, ಗೊರವರ ಕುಣಿತ ಮೊದಲಾದವುಗಳು ಇಂದಿಗೂ ಇದರಲ್ಲಿಯ ಬಹುಪಾಲು ಕುಣಿತಗಳು ಗ್ರಾಮೀಣ ಜನತೆಯಲ್ಲಿ ಜೀವಂತವಾಗಿ ಉಳಿದು ಕೊಂಡವೆಯಲ್ಲದೆ ತಮ್ಮ ಆಕರ್ಷಣೆಯನ್ನು ಉಳಿಸಿಕೊಂಡಿವೆ. ನಮ್ಮ ಜನಪದರು ಇವುಗಳನ್ನು ಸಾಂದರ್ಭಿಕವಾಗಿ ಬಳಸುತ್ತಾ ಉಳಿಸಿ, ಬಳಸಿಕೊಂಡು ಬಂದಿರುವುದು ವಿಶೇಷವಾಗಿದೆ."[೮]

ಇವುಗಳು ಗದಗ ಜಿಲ್ಲೆಗೆ ಹೆಸರನ್ನು ತಂದು ಕೊಟ್ಟಿವೆ. ಸಾಂಸ್ಕೃತಿಕವಾಗಿ ಗದಗ ಜಿಲ್ಲೆ ಬಹು ಪ್ರಸಿದ್ಧಿಯಾಗಿದೆ. ಸುಸಂಸ್ಕೃತ ನಾಗರಿಕರಿಂದ ಸಂಸ್ಕೃತಿ ಹೊರ ಸೂಚಿಸುತ್ತದೆ ಎಂಬ ವಾಣಿಗೆ ಗದಗ ಜಿಲ್ಲೆಯೇ ಸಾಕ್ಷೀ.

ಗದಗ ಜಿಲ್ಲೆಯ ಸಂಗೀತ ಪರಂಪರೆ

"ಸಂಗೀತ ಕ್ಷೇತ್ರದಲ್ಲಿ ಇಡೀ ಭಾರತವನ್ನು ಕರ್ನಾಟಕ ಪ್ರಾತಿನಿಧಿಕವಾಗಿ ಪ್ರತಿನಿಧಿಸುವಂತೆ ಕರ್ನಾಟಕವನ್ನು ಅಷ್ಟೆ ಮುಖ್ಯವಾಗಿ ಪ್ರತಿನಿಧಿಸುವಂತೆ ಕರ್ನಾಟಕವನ್ನು ಅಷ್ಟೆ ಮುಖ್ಯವಾಗಿ ಪ್ರತಿನಿಧಿಸಬಲ್ಲ

---

೭. ರಾಜೀವ ಬಾ.ಬೇಟಗೇರಿ -ಲಕ್ಕುಂಡಿ ಉತ್ಸವ, ೨೦೦೮

೮. ಪ್ರೊ.ಆರ್.ಎಲ್.ಪೋಲಿಸ್‌ಪಾಟೀಲ -ಲಕ್ಕುಂಡಿ ಉತ್ಸವ, ೨೦೦೯

ಸಾಮರ್ಥ್ಯ ಗದುಗಿಗೆ ಇದೆ. ಗದಗು ಸಂಗೀತ ಪರಂಪರೆ ಹಾಗೂ ಸಂಸ್ಕೃತಿಯಲ್ಲಿ ರಸಿಕರ ರಸಬೀಡು ಅಣ್ಣಿಗೆರೆ ಪಂಪನ ಹುಟ್ಟೂರಾದರೆ, ಲಕ್ಕುಂಡಿ ರನ್ನ ಕವಿಗೆ ಆಶ್ರಯ ಕೊಟ್ಟ ಅಜಿತಪುರಾಣ ಬರೆಸಿದ ಅತ್ತಿಮಬ್ಬೆಯ ಧರ್ಮಭೂಮಿ, ಮುಳಗುಂದ ಧರ್ಮಾಮೃತದ ನಯಸೇನನ ಸ್ಥಳ. ಚಿತ್ರಕಲೆ, ಶಿಲ್ಪಕಲೆ, ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಆಧ್ಯಾತ್ಮದಂತಹ ವಿಷಯಗಳಲ್ಲಿ ಗದಗುಗೆ ತನ್ನದೇ ಆದ ಭವ್ಯ ಇತಿಹಾಸ ಹೊಂದಿದೆ. ಆಗಿನಿಂದಲೂ ಈ ಎಲ್ಲ ಕಲೆಗಳಲ್ಲಿ ಉಚ್ಚ ಪರಂಪರೆಯನ್ನು ಕಾಯ್ದುಕೊಂಡು ಬಂದಿದೆ. ಮೌರ್ಯರು, ಶಾತವಾಹನರು, ಚಾಲುಕ್ಯರು, ರಾಷ್ಟ್ರಕೂಟರು ಹಾಗೂ ಹೊಯ್ಸಳರ ಕಾಲದಲ್ಲಿಯೂ ಕೂಡ ಕಲೆಯಲ್ಲಿ ತನ್ನ ಶ್ರೇಷ್ಠತೆಯನ್ನು ಕಾಯ್ದುಕೊಂಡು ಬಂದು ಬೆಳವಲ ಮನ್ನೂರು ಎಂಬ ಗುಂಪಿನಲ್ಲಿ ಗದಗು ಕೇಂದ್ರಸ್ಥಾನವಾಗಿತ್ತು. ಗದುಗಿನ ಭಾರತವನ್ನು ಬರೆದ ಮಹಾಕವಿ ಕುಮಾರವ್ಯಾಸ ಮೂಲತಃ ಕವಿ ಆತ ದಿನನಿತ್ಯ ಕಾವ್ಯ ಬರೆಯುತ್ತಿದ್ದ ಹಾಗೂ ಇಲ್ಲಿಯ ಶ್ರೀ ವೀರನಾರಾಯಣನ ಪಾದ ಪದ್ಮಂಗಳಲ್ಲಿ ಕುಳಿತು ಹಾಡುತ್ತಿದ್ದ ಮಹಾಕವಿ ಕುವೆಂಪು ಅವರು ಹೇಳುವ ಹಾಗೆ ಗದುಗಿನ ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪಾರವಾಗುವುದು. ಪ್ರಭುಲಿಂಗಲೀಲೆಯನ್ನು ಬರೆದ ಚಾಮರಸ ಹುಟ್ಟಿದ್ದುದು ಕೂಡ ಗದುಗಿನಲ್ಲಿ ಕನ್ನಡ ನಾಡಗೀತೆ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಬರೆದು ಸುಶ್ರಾವ್ಯವಾಗಿ ಹಾಡಿದ ಆಧುನಿಕ ಕವಿ ಶ್ರೀ ನಾರಾಯಣರಾವ್ ಹುಯಿಲಗೋಳ ಅವರು ಕೂಡ ಗದುಗಿನವರೇ.”[೯]

“ಗದುಗಿನಲ್ಲಿ ಸಂಗೀತ ಕಲೆಯ ಸಲುವಾಗಿಯೇ ತಮ್ಮನ್ನು ಮೀಸಲಾಗಿಟ್ಟುಕೊಂಡ ಅನೇಕ ಮನೆತನಗಳು ಪ್ರಸಿದ್ಧವಾಗಿವೆ. ಅಂತೆಯೇ ಬೇಂದ್ರೆಯವರು ಧಾರವಾಡದ ಬಗೆಗೆ ಹೇಳಿರುವ ಮಾತನ್ನೇ ಇಲ್ಲಿಯ ಜನ ಗದುಗಿಗೂ ಈ ರೀತಿ ಬದಲಾವಣೆ ಮಾಡಿ ಅನ್ವಯಿಸಿ ಕೊಂಡಿದ್ದಾರೆ. ಗದುಗಿನ ಯಾವುದೇ ಮೂಲೆಯಲ್ಲಿ ನಿಂತು ಕಲ್ಲು ಬೀಸಿದರೆ ಅದು ಒಬ್ಬ ಕಲಾವಿದನ ಮನೆಗೆ ಬೀಳುತ್ತದೆ ಎಂಬ ಮಾತು ಗದುಗಿನ ಒಂದಿಲ್ಲಾ ಒಂದು ಮನೆಯಲ್ಲಿ ಒಬ್ಬರು ಅಥವಾ ಇಬ್ಬರು ಯಾವುದೇ ಕಲಾಸಕ್ತಿಯಲ್ಲಿ ತೊಡಗಿರುವವರ ಸಂಖ್ಯೆ ನಮಗೆ ಹೇರಳವಾಗಿ ದೊರೆಯುತ್ತವೆ. ಸಂಗೀತದ ಬಗೆಗೆ ಹೇಳುವಂತಹ ಮನೆತನಗಳನ್ನು ಇಲ್ಲಿ ಈ ಕೆಳಗಿನಂತೆ ಉದಾಹರಿಸಬಹುದಾಗಿದೆ. ಜೋಶಿಯವರ ಮನೆತನ ಕಬಾಡಿ, ಹುಯಿಲಗೋಳ, ನಾಕೋಡ, ಪುರಂದರೆ, ಮಾಳೆಕೊಪ್ಪಮಠ, ಇನಾಮದಾರ, ಹಿರೇಮಠ ಗುಡಿಹಾಳ, ಕಟ್ಟಿ, ಮುರಗೋಡ, ಹಾನಗಲ್ಲ, ಗರೂಡ, ಚಾಪೇಕರ, ಕಟ್ಟಿ, ಮೊರಬದ, ಗಡೇದಗೌಡರ ಇನ್ನೂ ಮುಂತಾದವುಗಳು.”[೧೦]

---

೯. ಅನ್ನದಾನಿ, ಹಿರೇಮಠ -ಲಕ್ಕುಂಡಿ ಉತ್ಸವ, ೨೦೦೯

೧೦. ಅನ್ನದಾನಿ, ಹಿರೇಮಠ -ಲಕ್ಕುಂಡಿ ಉತ್ಸವ, ೨೦೦೯

ಒಂದೊಂದು ಸಂಸ್ಥೆಗಳಲ್ಲಿಯೂ ಅನೇಕರನ್ನು ಹೆಸರಿಸಬಹುದಾಗಿದೆ. ವೀರೇಶ್ವರ ಪುಣ್ಯಾಶ್ರಮ ವಿಜಯ ಕಲಾಮಂದಿರ, ವಿಜಯ ನಾಟ್ಯಸಂಘ, ಹಿಂದುಸ್ಥಾನಿ ಸಂಗೀತ ಕಲಾವಿದರ ಸಂಘ, ಸುಗಮ ಸಂಗೀತ, ಕೀರ್ತನೆಕಾರರ ಸಂಘ, ನಾಟಕಗಳ ಸಂಘ, ಪ್ರವಚನಕಾರರ ಸಂಘ, ತೋಂಟದಾರ್ಯಮಠ, ಅಡವೀಂದ್ರಸ್ವಾಮಿ ಮಠ, ಹಾಳಕೇರಿ ಮಠ ಇನ್ನು ಅನೇಕ ಮಠಗಳಲ್ಲಿಯೂ ಆಶ್ರಮಗಳಲ್ಲಿಯೂ ಅನೇಕ ಸಂಗೀತ ಕಲಾವಿದರನ್ನು ಗುರುತಿಸಬಹುದಾಗಿದೆ. (ಅಂದಾನಿ ಹಿರೇಮಠ ಪು-೫೫, ೨೦೦೯)

ಗವಾಯಿಗಳ ಸಂಗೀತ ಪರಂಪರೆ

"ನಮ್ಮ ಪ್ರಪಂಚವು ನಾದಮಯವಾಗಲೂ ಸಂಗೀತವೇ ಕಾರಣ ಸಂಗೀತಕ್ಕೆ ಆಗಾಧ ಶಕ್ತಿಯಿದೆ. ಅಂತಹ ಆಗಾಧಶಕ್ತಿಯುಳ್ಳವರು ಗದುಗಿನಲ್ಲಿ ಗವಾಯಿಗಳಾಗಿ ಪ್ರಸಿದ್ಧಿಯಾಗಿದ್ದಾರೆ. ಸಂಗೀತಕ್ಕೆ ಅಂಗವಿಕಲತೆ ಹಾಗೂ ದೃಷ್ಟಿಹೀನತೆ ಅಡ್ಡಿಯಾಗದು ಎಂಬ ಸಂದೇಶವನ್ನು ಸಂಗೀತದಿಂದ ಸಾರಿದ್ದಾರೆ. ಗಾನಯೋಗಿ ಗುರುಗಳಾದ ಪಂಚಾಕ್ಷರಿ ಗವಾಯಿಗಳು ಸಂಗೀತವನ್ನು ಗುರುಗಳಾದ ಪಂಚಾಕ್ಷರಿ ಗವಾಯಿಗಳು ಸಂಗೀತವನ್ನು ಶ್ರೀಮಂತಗೊಳಿಸಿ ಅಂಗವಿಕಲತೆಗೆ ಸಂಗೀತವೆಂಬ ವಿಶೇಷಾಂಗ ನೀಡಿ ಸರಿಪಡಿಸಿದ್ದಾರೆ. ಧರ್ಮ ಗುರುಗಳಾಗಿ ಸಂಗೀತ ಜ್ಯೋತಿ ಬೆಳಗಿದ್ದಾರೆ. ವೀರೇಶ್ವರ ಪುಣ್ಯಾಶ್ರಮವನ್ನು ಕಟ್ಟಿದ್ದಾರೆ. ಅವರ ಶಿಷ್ಯರಾದ ಪುಟ್ಟರಾಜ ಕವಿ ಗವಾಯಿಗಳು ಸಂಗೀತಲೋಕಕ್ಕೆ ಹಾಗೂ ಗಾನಸ್ವರ್ಗಕ್ಕೆ ಹೊಸ ಆಯಾಮವನ್ನೇ ನೀಡಿದ್ದಾರೆ. ಅವರ ಗಾನ ಶೈಲಿಯಿಂದ ಲೋಕವನ್ನೇ ನಾದಮಯವನ್ನಾಗಿಸಿದ್ದಾರೆ. ಅವರಿಗೆ ಪ್ರತಿಷ್ಠಿತ ಕಾಳಿದಾಸ ಸಮ್ಮಾನ ಪ್ರಶಸ್ತಿಯನ್ನು ಮಧ್ಯ ಪ್ರದೇಶ ಸರಕಾರ ಕೊಡಮಾಡಿದೆ."[೧೧]

ವಾಧ್ಯ ಸಂಗೀತ

"ವಾಧ್ಯ ಸಂಗೀತದಲ್ಲಿಯೂ ಗದುಗಿನ ಕಲಾವಿದರು ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಸಾಕಷ್ಟು ಬೆಳೆದಿದ್ದಾರೆ. ಈಗ ಬೇರೆ ಬೇರೆ ಕಡೆಹೋಗಿ ನೆಲೆಸಿದ್ದರೂ ಕೂಡ ಅವರ ಸಂಗೀತದ ತವರುಮನೆ ಗದುಗೇ ಆಗಿದೆ. ಹಾರ್ಮೋನಿಯಂದಲ್ಲಿ ವಿಠಲಸಾ ಕಬಾಡಿ, ವಿರೇಶ್ವರ ಹಿರೇಮಠ, ರುದ್ರಾರಾಧ್ಯಶಾಸ್ತ್ರಿ, ಹಿರೇಮಠ, ವೈಲೀನ್ ದ.ಟಿ.ವ್ಹಿ.ಕಬಾಡಿ, ನಾರಾಯಣ ಹಿರೇಕೊಳಚಿ, ನೇತಾರದಲ್ಲಿ, ಆರ್.ವ್ಹಿ.ಗುಡಿಹಾಳ, ಕೃಷ್ಣ ಆರ್.ಗುಡಿಹಾಳ, ಪ್ರಿ.ಡಿ.ಎಸ್.ಕುರ್ತಕೋಟಿ, ನಿರ್ಮಲಾ ಕಟ್ಟಿ, ಶಶಿಕಲಾ ನಳಗಿ, ಡಾ.ಜೆ.ಎಸ್.ಶಿರೋಳ, ಡಾ.ಗೋಡಖಿಂಡಿ, ರಾಜೀವ ಹಿರೇಮಠ ತಬಲಾವಾದನದಲ್ಲಿ ಖ್ಯಾತಿ ಪಡೆದ ಕಲಾವಿದರಾಗಿದ್ದಾರೆ."[೧೨]

ರಂಗಭೂಮಿ ಪರಂಪರೆ

"ಸಾಹಿತಿಗಳ ಕಲಾವಿದರ ಗವಾಯಿಗಳವರ ಸಾಧನೆಗೆ ಗರಡಿ ಮನೆಯಾಗಿರುವ ಗದುಗಿಗೆ ನಾಡಿನ ಚರಿತ್ರೆಯಲ್ಲಿ ಸ್ಥಳ ಮಹಿಮೆಯ ಹಿರಿಮೆ ಪ್ರಾಪ್ತವಾಗಿದೆ. ಕರ್ನಾಟಕ ವೃತ್ತಿ ರಂಗಭೂಮಿಯ

---

೧೧. ರಾಜೀವ ಬಾ.ಬೇಟಗೇರಿ -ಲಕ್ಕುಂಡಿ ಉತ್ಸವ, ೨೦೦೮

೧೨. ಅನ್ನದಾನಿ, ಹಿರೇಮಠ -ಲಕ್ಕುಂಡಿ ಉತ್ಸವ, ೨೦೦೯, ಪು-೫೬

ವರ್ಣಮಯ ಇತಿಹಾಸವೂ ಇಲ್ಲಿಂದಲೇ ಆರಂಭವಾಗಿದೆ. ವೃತ್ತಿರಂಗ ಸಂಸ್ಥೆಗಳು, ಕಲಾವಿದರು, ನಾಟಕಕಾರರಿಗೆಲ್ಲ, ಗರಡಿ ಮನೆಯಾದ ಗದುಗಿಗೆ ಕನ್ನಡ ರಂಗಭೂಮಿ ಗದ್ದುಗೆ ಎಂದೇ ಗೌರವ. ಕರ್ನಾಟಕ ನಾಟಕ ಪಿತಾಮಹ ಶಾಂಕವಿ ಕಾವ್ಯಯದ ಸಕ್ಕಲಿ ಬಾಳಾಚಾರ್ಯರು ಪ್ರಾರಂಭಿಸಿದ ಶ್ರೀ ವೀರಾನಾರಾಯಣ ಪ್ರಸಾಂತ ಕೃತಪುರ ನಾಟಕ ಮಂಡಳಿ, ನಾಟಕಾಲಂಕಾರ ಗರೂಡ ಸದಾಶಿವರಾಯರ ಶ್ರೀ ದತ್ತಾತ್ರೇಯ ನಾಟಕ ಮಂಡಳಿ, ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಮತ್ತು ಪುಟ್ಟರಾಜ ಗವಾಯಿಗಳ ಶ್ರೀ ಕುಮಾರೇಶ್ವರ ಗವಾಯಿಗಳ ಮತ್ತು ಪುಟ್ಟರಾಜ ಗವಾಯಿಗಳ ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ವಿರಾನೆ ಭರಮಪ್ಪನವರ ಶ್ರೀ ವಾಣಿವಿಲಾಸ ನಾಟಕ ಮಂಡಳಿ ಈ ನೆಲದ ಬಲದಿಂದಲೇ ಬೆಳಗಿ ಕನ್ನಡ ರಂಗದ ಮೇಲೆ ಸಂಭ್ರಮಿಸಿದ ಈ ಸಂಸ್ಥೆಗಳ ರೋಚಕ ಸಾಧನೆ ವೃತ್ತಿ ರಂಗಭೂಮಿಯ ಪ್ರಾರಂಭ ಪ್ರಗತಿ ಮತ್ತು ಪರಂಪರೆಯ ದೃಷ್ಟಿಯಿಂದ ತುಂಬ ಮೌಲಿಕವಾಗಿದೆ."[೧೩] ವಿಸ್ಮಯವೆಂದರೆ ಹುಟ್ಟು ಗುರುಡರಾದ ಗವಾಯಿಗಳು ಕಣ್ಣುಳ್ಳವರೆಲ್ಲ ಬೆರಗಾಗುವಂತೆ ಯಶ್ವಸಿಯಾಗಿ ಮುಂದುವರೆಸಿಕೊಂಡು ಬರುತ್ತಿರುವುದು ಕಣ್ಣಿದ್ದ ವ್ಯವಹಾರ ಚತುರ ಮಾಲಿಕರು ಮೇಲ್ವಿಚಾರಕರಿದ್ದರೂ ಹುಟ್ಟಿದ ಕೆಲ ವರ್ಷಗಳಲ್ಲಿ ಹತಬಲಗೊಳ್ಳುವ ನಾಟ್ಯ ಸಂಘಗಳ ಅಲ್ಪಾಯುಷಿ ಸಂಸ್ಕೃತಿಯಲ್ಲಿ ಗವಾಯಿಗಳ ಐದು ದಶಕಗಳಿಗೂ ಮೀರಿದ ರಂಗ ಸೇವೆ ಅಗಾಧ ಮತ್ತು ಅಪೂರ್ವವೇ ಸರಿ, ಬಹುಶಃ ಇದು ಕರ್ನಾಟಕಷ್ಟೇ ಅಲ್ಲ ಭಾರತಕ್ಕೆ ಒಂದು ಉಜ್ವಲ ನಿದರ್ಶನ.

ಸರ್ವಧರ್ಮಗಳ ಶಾಂತಿನೆಲೆ

"ಗದಗ ಜಿಲ್ಲೆಯ ಸರ್ವಧರ್ಮಗಳ ಶಾಂತಿನೆಲೆಯಾಗಿದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಜೈನರು ಎಲ್ಲ ಧರ್ಮದವರು ಒಗ್ಗಟ್ಟಿನಿಂದ ಬಾಳುತ್ತಿದ್ದಾರೆ. ಜಾತಿ ಧರ್ಮಗಳಿಂದ ಮಾನವೀಯ ಮೌಲ್ಯಗಳು ಶ್ರೇಷ್ಠ ಎಂಬುದನ್ನು ತೋರಿಸಬೇಕಾಗಿದೆ. ಶರಣ ಸಂಸ್ಕೃತಿಯನ್ನು ಸಾಕಲು ಇಲ್ಲಿಯ ಮಠ ಮಾನ್ಯಗಳು ಶ್ರಮಿಸುತ್ತಿವೆ. ಶರಣ ಹಾಗೂ ಬಸವ ತತ್ವಗಳನ್ನು ಕೇಂದ್ರಿಕರಿಸಿ ಈ ಮಠಗಳು ಕಾಯಕವೇ ಕೈಲಾಸವೆಂಬ ಸಂದೇಶವನ್ನು ಸಾರುತ್ತಿದೆ. ನಿತ್ಯ ದಾಸೋಹ ನೀಡುತ್ತಾ ಜನರ ಹಸಿವು ನೀಗಿಸಿವೆ. ಗದುಗಿನ ತೋಂಟದಾರ್ಯ ಮಠ, ವಿರೇಶ್ವರ ಪುಣ್ಯಾಶ್ರಮ, ವಿರೇಶ್ವರ ಮಠ, ವೀರೇಶ್ವರ ಕೇಂದ್ರಗಳಾಗಿವೆ. ಶಿರಹಟ್ಟಿಯ ಪಕೀರಸ್ವಾಮಿ ಮಠ ನಾಡಿನಲ್ಲೆಡೆ ಹೆಸರುವಾಸಿಯಾಗಿದೆ. ಹಿಂದೂ ಮುಸ್ಲಿಂ ಭಾವೈಕ್ಯದ ಸಂಕೇತವಾಗಿ ರೂಪಗೊಂಡಿದೆ. ಗದುಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶರಣ ತತ್ವ ಸಿದ್ಧಾಂತದ ಭಂಡಾರಿಯಾಗಿದ್ದಾರೆ. ಮಾಜಿ ರಾಷ್ಟ್ರಪತಿಗಳಾದ ಸನ್ಮಾನ್ಯ ಅಬ್ದುಲ್ ಕಲಾಂರವರು ತೋಂಟದ ಶ್ರೀಸಿದ್ಧಲಿಂಗ ಮಹಾಸ್ವಾಮಿಗಳಿಗೆ ಕೋಮ ಸೌಹಾರ್ದ ರಾಷ್ಟ್ರ ಪ್ರಶಸ್ತಿಯನ್ನು ಕೊಡಮಾಡಿದ್ದಾರೆ."[೧೪]

---

೧೩. ಪ್ರೊ.ಶಕುಂತಲಾ ಸಿಂಧೂರ -ಲಕ್ಕುಂಡಿ ಉತ್ಸವ, ೨೦೦೯, ಪು-೬೨

೧೪. ರಾಜೀವ ಬಾ.ಬೇಟಗೇರಿ -ಲಕ್ಕುಂಡಿ ಉತ್ಸವ, ೨೦೦೮

ಕ್ರೀಡಾಕೂಟ

"ಗದಗ ಜಿಲ್ಲೆ ಕ್ರೀಡಾತ್ಮಕವಾಗಿಯೂ ಪ್ರಸಿದ್ಧಿ ಹೊಂದಿದೆ. ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಮುಖ ಕ್ರೀಡೆಯಾದ ಕ್ರಿಕೆಟ್‌ನಲ್ಲಿರುವ ಗದುಗಿನ ಪ್ರತಿಭೆಯಾದ ಸುನೀಲ ಜೋಶಿ ಅಂತರಾಷ್ಟ್ರೀಯ ಸಾಧನೆ ತೋರಿದ್ದಾನೆ. ನಮ್ಮ ದೇಶದ ಕ್ರೀಡೆಯಾದ ಹಾಕಿಯಲ್ಲಿ ಗದುಗಿನ ಧನರಾಜ ಪಿಳ್ಳೆ ಉತ್ತಮ ಸಾಧನೆ ತೋರುತ್ತಾ ಅಂತರಾಷ್ಟ್ರೀಯ ಸಾಧನೆಯನ್ನು ಮಾಡಿದ್ದಾನೆ. ಗದಗ ಜಿಲ್ಲೆಯ ಮುಳಗುಂದದವನಾದ ವಿಲಾಸ್ ನಿಲಗುಂದೆ ಓಟದಲ್ಲಿ ರಾಷ್ಟ್ರ ಮಟ್ಟದ ಸಾಧನೆ ತೋರಿಸಿದ್ದಾನೆ. ಸಾಧನೆಗೈದ ಹಲವಾರು ಪ್ರತಿಭೆಗಳು ಗದಗ ಜಿಲ್ಲೆಯಲ್ಲಿದ್ದಾರೆ. ಇನ್ನು ಎಲೆಮರೆ ಕಾಯಿಯಂತಿರುವ ಯುವ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವುದು ನಮ್ಮ ಕರ್ತವ್ಯವಾಗಿದೆ. ಅವರು ಮುಂದುವರಿದರೆ ಗದಗ ಜಿಲ್ಲೆಯು ಕ್ರೀಡಾ ಕೇಂದ್ರವಾಗುವಲ್ಲಿ ಎರಡು ಮಾತಿಲ್ಲ."[೧೫]

ಚಿತ್ರಕಲಾ ಕ್ಷೇತ್ರ

"ಗದಗ ಜಿಲ್ಲೆಯ ಕಲೆಯ ಇತಿಹಾಸವನ್ನು ಗಮನಿಸಿದರೆ ಹಬ್ಬ, ಉತ್ಸವ, ಜಾತ್ರೆ, ಮದುವೆಯಂತಹ ಸಂಭ್ರಮದ ದಿನಗಳಲ್ಲಿ ನೆಲಗೋಡೆಗಳನ್ನು ಸಾರಿಸಿ ಸುಣ್ಣ, ಬಣ್ಣ ಹಚ್ಚಿ ಅಲಂಕರಿಸಿ ಶ್ರೀಕಾರ, ಸ್ವಸ್ತಿಕ ಸಂಕೇತಗಳನ್ನು ಇಡುವುದು ಗದಗ ಜಿಲ್ಲೆಯ ಹಳ್ಳಿಗಳಲ್ಲಿ ಇಂದಿಗೂ ಕಾಣಬಹುದು. ಮಾನವಾಕೃತಿಗಳು, ಹಾವು, ಚೇಳು, ಸೂರ್ಯ, ಚಂದ್ರ, ವಾಲಗದವರು ಮೊದಲಾದ ಚಿತ್ರ ವಿನ್ಯಾಸಗಳು ಇಂದಿಗೂ ಜಿಲ್ಲೆಯಾದ್ಯಂತ ಕಂಡು ಬರುತ್ತದೆ. ಮದರಂಗಿ ಕಲೆಗೆ ಹೊಂದಿಕೊಂಡಿರುವ ಹಚ್ಚೆ ಚಿತ್ರಕಲೆಯು ಈ ಭಾಗದಲ್ಲಿ ಬಳಸುತ್ತಿರುವುದು ಕಂಡು ಬರುತ್ತದೆ. ಈ ಕಲೆಯನ್ನು ಸಂಕೇತ ಪ್ರಧಾನವಾಗಿ ಬಳಸಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಗದಗ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಹಾಸುಹೊದಿಕೆಯಾಗಿ ಬಳಸುವ ಕೌದಿಯು ಒಂದು ಜನಪದ ಸ್ತ್ರೀಯರ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿಯಾಗಿ ಬಹುಪಯೋಗಿ ವಸ್ತುವಾಗಿ ಕೌದಿ ಕಂಡು ಬಂದಿದೆ. ಕೌದಿಗಳಲ್ಲಿ ವೈವಿಧ್ಯತೆಯನ್ನು ಬಯಸಿ ಚಿತ್ತಾರಗಳನ್ನು ಸೃಷ್ಟಿಸುತ್ತಾರೆ. ತಮ್ಮ ಭಾವನೆಗಳಿಂದ ಹೊರಹೊಮ್ಮುವ ಕಲಾತ್ಮಕತೆ ಈ ಚಿತ್ತಾರಗಳಲ್ಲಿ ಎದ್ದು ಕಾಣುತ್ತೇವೆ."[೧೬]

ಇದಲ್ಲದೆ ಗ್ರಾಮೀಣ ಸೊಗಡಿನ ಜಿಲ್ಲೆಯ ಮಹಿಳೆಯರು ಕಸೂತಿ ಕಲೆಯಿಂದ ಕಲೆ ಮೆರಗನ್ನು ಹೆಚ್ಚಿಸಿದ್ದಾರೆ. ಬಟ್ಟೆಗಳ ಮೇಲೆ ಚಿತ್ರಗಳ ಬಾಹ್ಯರೇಖೆಗಳನ್ನು ಗುರುತಿಸಿ ಬಣ್ಣಗಳ ದಾರಗಳಿಂದ ಅಲಂಕರಿಸಿದ್ದಾರೆ. ಇವುಗಳಲ್ಲಿ ಅನೇಕ ಧಾರ್ಮಿಕ ಚಿತ್ರಗಳು ತುಳಸಿಕಟ್ಟೆ, ತೇರು, ಗೋಪುರ ಬಾಸಿಂಗ್, ನಾಯಿ, ಮೊಲ, ಬೆಕ್ಕು, ಪಶು-ಪಕ್ಷಿಗಳು, ಹೂ-ಬಳ್ಳಿ, ಸೂರ್ಯ-ಚಂದ್ರ ಹಾಗೂ ಭೂಮಿಯ ಆಕೃತಿಯ

---

೧೫. ರಾಜೀವ ಬಾ.ಬೇಟಗೇರಿ -ಲಕ್ಕುಂಡಿ ಉತ್ಸವ, ೨೦೦೮

೧೬. ಪ್ರಕಾಶ ಬಿ.ಬಂಡಿ -ವಜ್ರ ವಿಜಯ -ನೆನಪಿನ ಸಂಚಿಕೆ -೨೦೦೭-೦೮, ಪು-೭೭

ಚಿತ್ರಗಳನ್ನು ಕಸೂತಿ ಕಲೆಯಲ್ಲಿ ಬಿಂಬಿಸಿದ್ದಾರೆ. ನೇಯ್ಗೆಕಲೆ ಗದಗ-ಬೇಟಗೇರಿಯ ಪ್ರಬಲ ಕೆಲಸವನ್ನು ಮಾಡಿದೆ. ದೆಹಲಿಯ ಕೆಂಪು ಕೋಟೆಯ ಮೊದಲು ಹಾರಿಸಿದ ಪ್ರಥಮ ಧ್ವಜ ಗದಗ ಜಿಲ್ಲೆಯ ಇತಿಹಾಸವನ್ನು ದಾಖಲಿಸಿದೆ.

ರಾಜ್ಯದಲ್ಲಿಯೇ ಗದಗ ಜಿಲ್ಲೆಯು ಚಿತ್ರಕಲೆಗೆ ತನ್ನದೇ ಆದ ಹೆಸರು ಪಡೆದುಕೊಂಡಿದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ವರ್ಷವೇ ದಿವಂಗತ ಶ್ರೀ ಟಿ.ಪಿ.ಅಕ್ಕಿಯವರು ವಿಜಯ ಕಲಾಮಂದಿರವನ್ನು ಸ್ಥಾಪಿಸಿದ್ದರಿಂದ ಗದಗು ಕಲೆಯ ತೊಟ್ಟಿಲು ಎಂಬುದು ಸಾಹಿತಿಗಳ ಸಾಹಿತ್ಯದಲ್ಲಿ ವರ್ಣಾತೀತವಾಗಿದೆ. ಈ ಕಲಾಶಾಲೆ ರಾಷ್ಟ್ರಮಟ್ಟದಲ್ಲಿ ದಾಖಲೀಕರಣಗೊಂಡಿದೆ. ಅಂದಿನಿಂದ ಇಂದಿನವರೆಗೂ ಕಲಾ ಶಾಲೆ ಸ್ವತಂತ್ರವಾಗಿ ಬೆಳೆಯುವುದರೊಂದಿಗೆ ಗದುಗಿನ ಹೆಸರನ್ನು ಇತಿಹಾಸದಲ್ಲಿ ದಾಖಲೀಕರಿಸಿದ ಕೀರ್ತಿ ವಿಜಯ ಕಲಾಮಂದಿರಕ್ಕೆ ಸಲ್ಲುತ್ತದೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಗುರುವನ್ನು ಮೀರಿಸಿದ ಶಿಷ್ಯರಾಗಿ ಬೆಳೆದು ನಾಡಿಗೆ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ. ನಾಡಿನ ಉದ್ದಗಲಕ್ಕೂ ಅನೇಕ ಕಲಾವಿದರನ್ನು ಹಾಗೂ ಅನೇಕ ಕಲಾ ಶಿಕ್ಷಕರನ್ನು ರಾಜ್ಯ ಮತ್ತು ರಾಷ್ಟ್ರಮಟದಲ್ಲಿ ಬೆಳೆಸಿದ ಕೀರ್ತಿ ಚಿತ್ರಕಲಾ ಕ್ಷೇತ್ರದ ಕೊಡುಗೆಯಾಗಿದೆ.


ಇದಲ್ಲದೇ ಗದಗ ಬೇಟಗೇರಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ವಿದ್ಯಾದಾನ ಸಮಿತಿಯ ಜೆ.ಎನ್.ಚಿತ್ರಕಲಾ ಪದವಿ ಮಹಾವಿದ್ಯಾಲಯವು ಸಹ ಉತ್ತಮ ಕಲಾ ಶಿಕ್ಷಕರನ್ನು ನೀಡುತ್ತಾ ರಾಜ್ಯಾದ್ಯಂತ ಅನೇಕ ಕಲಾ ಶಿಕ್ಷಕರನ್ನು ಕಲಾವಿದರನ್ನು ರೂಪಿಸಿದೆ. ಈ ಕಲಾ ಪದವಿ ಮಹಾವಿದ್ಯಾಲಯದಲ್ಲಿ ಕೂಡ ನಿರಂತರವಾಗಿ ಅನೇಕ ಕಲಾ ಚಟುವಟಿಕೆಗಳು ನೀಡಿದೆ. ಇತ್ತೀಚಿನ ದಶಕಗಳಲ್ಲಿ ಪ್ರಾರಂಭವಾದ ರೋಣದ ರವೀಂದ್ರ ಕಲಾನಿಕೇತನವು ಕೂಡ ಅನೇಕ ಕಲಾ ಚಟುವಟಿಕೆಗಳನ್ನು ನಡೆಸುತ್ತಾ ಅನೇಕ ಯುವ ಕಲಾವಿದರನ್ನು ಕಲಾ ಶಿಕ್ಷಕರನ್ನು ಕೊಟ್ಟ ಕೀರ್ತಿ ಗದಗ ಜಿಲ್ಲೆಗೆ ಸೇರುತ್ತದೆ. ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆದ ಹಿರಿಯ ಕಲಾವಿದ ದಿ.ಶ್ರೀ.ಎಂ.ಎ.ಚೆಟ್ಟಿ, ದಿ.ಟಿ.ಪಿ.ಅಕ್ಕಿ, ದಿ.ಸಿ.ಎನ್.ಪಾಟೀಲ, ದಿ.ಐ.ಎ.ಕಮಾನಗಾರ, ಶ್ರೀಶಿವಾನಂದ ಅಕ್ಕಿ, ದಿ.ಶ್ರೀ.ಎಸ್.ಎಂ.ಶಿರಹಟ್ಟಿ, ದಿ.ಎಂ.ಆರ್.ಭಾಗವಾನ, ಶ್ರೀ.ಜಿ.ಎನ್.ಜಾಡಗೌಡರ, ಶ್ರೀ.ಎನ್.ಎನ್.ಶಿಲ್ಪಿ, ಶ್ರೀ.ಎನ್.ಎ.ಹರ್ಲಾಪುರ, ಶ್ರೀ.ವಸಂತ ಅರ್ಸ್ಯ, ಶ್ರೀ.ಆರ್.ಹೆಗಡೆ, ಶ್ರೀ.ಕೆ.ವಿ.ಕುಂದಗೋಳ, ಶ್ರೀ.ವ್ಹಿ.ವಾಯ್.ಬಡಿಗೇರ, ಶ್ರೀ.ಅಶೋಕ ಅಕ್ಕಿ, ಶ್ರೀ.ಎಸ್.ವ್ಹಿ.ಗುಂಬಾಳ ಹಾಗೂ ಶ್ರೀ.ಸಿ.ವ್ಹಿ.ಬಡಿಗೇರ ಇನ್ನೂ ಅನೇಕ ಕಲಾವಿದರು ಗದಗ ಜಿಲ್ಲೆಯಲ್ಲೇ ಹುಟ್ಟಿ ಈ ಕಲಾಕ್ಷೇತ್ರವನ್ನು ಬೆಳಸಿ ಗದಗ ಜಿಲ್ಲೆ ಚಿತ್ರಕಲಾ ಕ್ಷೇತ್ರವನ್ನು ಬಳಸಿ ಗದಗ ಜಿಲ್ಲೆ ಚಿತ್ರಕಲಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡುವಲ್ಲಿ ಪ್ರಮುಖರಾಗಿದ್ದಾರೆ.

---

೧೭. ಪ್ರಕಾಶ ಬಿ.ಬಂಡಿ -ವಜ್ರ ವಿಜಯ -ನೆನಪಿನ ಸಂಚಿಕೆ -೨೦೦೭-೦೮, ಪು-೭೮

ಅಧ್ಯಾಯ - ೩

ಸಿ.ಎನ್.ಪಾಟೀಲರ ಬಾಲ್ಯ ಪರಿಸರ ವಿದ್ಯಾಭ್ಯಾಸ


ವಂಶಾವಳಿ
ತಂದೆ ನಿಂಗನ ಗೌಡ ತಾಯಿ ನಿಂಗಮ್ಮ
ಚನ್ನವೀರಗೌಡ (ಸಿ.ಎನ್.ಪಾಟೀಲ)
ಧ್ಯಾಮನಗೌಡ
ಮಲ್ಲನಗೌಡ
ಗೌರಮ್ಮ
ಶಿವನಗೌಡ
ಸಂಗನಗೌಡ
ಅಕ್ಕಮ್ಮ
ಮುತ್ತಮ್ಮ
ಲಲಿತಕ್ಕ
ದೀಪಾ ಜ್ಯೋತಿ ಸಪ್ನಾ
ಸುಧಾ ಶರಣು ಸಂತೋಷ
ಶಿಪ್ಪಾ ಮಹಾಂತೇಶ
ರೂಪಾ ರವಿ ರಾಜೇಶ್ವರಿ
ಹವ್ಯಾಸಿ ಕಲಾವಿದರು

ಅಧ್ಯಾಯ - ೩

ಸಿ.ಎನ್.ಪಾಟೀಲರ ಬಾಲ್ಯ ಪರಿಸರ ವಿದ್ಯಾಭ್ಯಾಸ

ಗದಗ ಜಿಲ್ಲೆಯು ಸಂಗೀತ, ಸಾಹಿತ್ಯ, ಶಿಲ್ಪ, ನಾಟಕ, ಚಿತ್ರಕಲೆ ಮುಂತಾದ ಕ್ಷೇತ್ರಗಳಲ್ಲಿ ತನ್ನದೆಯಾದ ಕೊಡುಗೆಯನ್ನು ನೀಡಿದೆ. "ಜೊತೆಗೆ ಧಾರ್ಮಿಕತೆ, ಸೌಹಾರ್ದತೆಯ ಹರಿಕಾರ ಡಾ.ತೋಂಟದ ಸಿದ್ಧಲಿಂಗೇಶ್ವರವರ ಧರ್ಮ, ಸಂಸ್ಕೃತಿ, ಸಾಹಿತ್ಯ, ಕ್ಷೇತ್ರಕ್ಕೆ ತಮ್ಮದೇಯಾದ ವಿಶಿಷ್ಟ ಕೊಡುಗೆಯನ್ನು ನೀಡಿರುವ ಶ್ರೀ ವೀರನಾರಾಯಣ ಗದುಗಿನ ಕುಮಾರವ್ಯಾಸ, ಉದಯವಾಗಲಿ ನಮ್ಮ ಕನ್ನಡ ನಾಡು ಎಂದು ಗೀತೆ ಬರೆದ ಕವಿ ಹುಯಿಲಗೋಳ ನಾರಾಯಣರಾವ್‌ರವರು, ಕುಮಾರವ್ಯಾಸ, ಚಾಮರಸ, ನಾಯಸೇನ, ದುರ್ಗಸಿಂಹ, ಸೋಮನಾಥ, ಆದಯ್ಯ, ಮಭಾವಿ ಬಾಲಲೀಲಾ ಮಹಾಂತ ಶಿವಯೋಗಿ, ಮುಂತಾದ ಕವಿ ಕೋಗಿಲೆಗಳ ನೆಲವಿದು."[೧] ಪಾರಂಪರಿಕ ಚೆಲುವನ್ನು ಪ್ರತಿನಿಧಿಸುತ್ತಿರುವ ಲಕ್ಕುಂಡಿ, ಡಂಬಾಳ, ಗದಗ, ಸೂಡಿ, "ಲಕ್ಷೇಶ್ವರಗಳ ಸುಂದರ ಭವ್ಯ ಬೆಟ್ಟ ಸಾಲುಗಳು ಸಂಗೀತ, ಸಾಹಿತ್ಯ, ಚಿತ್ರಕಲೆ, ಶಿಲ್ಪಕಲೆ, ನೃತ್ಯ, ನಾಟಕ, ಜಾನಪದ, ಚಟುವಟಿಕೆಗಳು ಗದುಗಿನಲ್ಲಿ ಇಂದಿಗೂ ಜೀವಂತಿಕೆಯಿಂದ ಇವೆ. ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿರುವ ನಿಸರ್ಗ ಸೊಬಗಿನ ತಾಣ ತಪ್ಪತಗಿರಿ ಜಾಫರಿ ಸಸ್ಯಗಳಿಗಾಗಿ ದೇಶದಲ್ಲೇ ಹೆಸರು ವಾಸಿಯಾಗಿದೆ."[೨] ವ್ಯಾಪಾರೋದ್ದಿಮೆ, ವಾಣಿಜ್ಯ ಕೈಗಾರಿಕೆ ಗುಡಿ ಕೈಗಾರಿಕೆ ಸಹಕಾರ ಹಾಗೂ ಕಾಫಿ ಕ್ಷೇತ್ರಗಳಲ್ಲೂ ಗದಗ ಜಿಲ್ಲೇ ತನ್ನದೇ ಆದ ವಿಶಿಷ್ಠ ಸ್ಥಾನ ಹೊಂದಿದೆ.

"ಶಿಲ್ಪ ಮತ್ತು ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ವಿಶಿಷ್ಟ ರೀತಿಯಾಗಿದೆ. ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಕಾಲದ ದೇಗುಲಗಳು ಜಿಲ್ಲೆಯ ಸಂಸ್ಕೃತಿಯ ಸಂಪತ್ತು ಎನ್ನಿಸಿವೆ. ವೀರನಾರಾಯಣ, ತ್ರಿಕೋಟೇಶ್ವರ, ಸರಸ್ವತಿ ದೇವಾಲಯಗಳು ಲಕ್ಕುಂಡಿಯಲ್ಲಿರುವ ಸೂರ್ಯದೇವಾಲಯ,

---

೧. ಲಕ್ಕುಂಡಿ ಉತ್ಸವ, ೨೦೦೮

೨. ಲಕ್ಕುಂಡಿ ಉತ್ಸವ, ೨೦೦೯

[illegible]

[illegible]

[illegible]

[illegible]

ಕಾಶಿವಿಶ್ವೇಶ್ವರ ದೇವಾಲಯಗಳು, ದಾನಚಿಂತಾಮಣಿ, ಅತ್ತಿಮಬ್ಬೆ ನಿರ್ಮಿಸಿದ ಬ್ರಹ್ಮದೇವಾಲಯ, ಸೂಡಿಯ ಮಲ್ಲಿಕಾರ್ಜುನ ದೇವಾಲಯ, ಸವಡಿ ಶಂಕರನಾರಾಯಣ ದೇವಾಲಯ"[೩] ಶ್ರೀ ಲಕ್ಷ್ಮೇಶ್ವರ ಸೋಮೇಶ್ವರ ದೇವಾಲಯ ಮುಂತಾದವು ಶಿಲ್ಪ ಕಲೆಯ ಸುಂದರ ಸಾಧನೆಗಳಾಗಿದ್ದು ರಾಜ್ಯ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧವಾಗಿವೆ. ಈ ಜಿಲ್ಲೆಯ ನರಗುಂದದ ಬಾಬಾಸಾಹೇಬನ ಅರಮನೆ ಭಿತ್ತಿ ಚಿತ್ರಗಳು ತುಂಬಾ ಮನಮೋಹಕವಾಗಿವೆ.

ಕೆ.ವೆಂಕಟಪ್ಪ ಪ್ರಶಸ್ತಿ ಪುರಸ್ಕೃತ ಶ್ರೀ.ಎಂ.ಎ.ಚೆಟ್ಟಿಯವರು, ಶ್ರೀ.ಟಿ.ಪಿ.ಅಕ್ಕಿ, ಶ್ರೀ.ಶಿವಾನಂದ ಅಕ್ಕಿ, ಶ್ರೀ.ಸಿ.ಟಿ.ರಾಯಕರ್, ಶ್ರೀ ಕಮಾನುಗಾರ, ಶ್ರೀ.ಎನ್.ಎ.ಹರ್ಲಾಪೂರ್, ಶ್ರೀ.ಎಂ.ಆರ್.ಭಾಗವಾನ, ಶ್ರೀ ಎಸ್.ಎಂ.ಶಿರಹಟ್ಟಿ, ಶ್ರೀ.ಜೆ.ಎನ್.ಜಾಡಗೌಡರ ಮುಂತಾದ ಕಲಾವಿದರನ್ನು ಗದಗ ಜಿಲ್ಲೆ ಕ್ಷೇತ್ರಕ್ಕೆ ತನ್ನದೆಯಾದ ವಿಶಿಷ್ಟವಾದ ಕೊಡುಗೆ ನೀಡಿದ ಹಿರಿಯ ಕಲಾವಿದರು. ಈ ಹಿನ್ನಲೆಯಲ್ಲಿ ಚಿತ್ರಕಲಾ ಕಲಾಚಾರ್ಯ, ಶ್ರೀ.ಸಿ.ಎನ್.ಪಾಟೀಲರನ್ನು ಇಲ್ಲಿ ಹೆಸರಿಸಬಹುದು. ಶ್ರೀ ಪಾಟೀಲರು ಅಸಾಮಾನ್ಯ ವಾಕ್ಚಾತುರ್ಯವುಳ್ಳವರು. ಒಂದು ವೇಳೆ ಇವರು ರಾಜಕೀಯ ಕ್ಷೇತ್ರಕ್ಕಿದಿದ್ದರೆ ಇಂದೊಬ್ಬ ಪ್ರಭಾವಿ ಮುಖಂಡರಾಗುತ್ತಿದ್ದರೇನೋ ಆದರೆ ಕಲಾದೇವಿ ಅವರನ್ನು ತನ್ನ ಸೇವೆಗೆ ಸೆಳೆದುಕೊಂಡು ಕನ್ನಡನಾಡಿಗೊಬ್ಬ ಕಲಾವಿದನನ್ನು ನೀಡಿದಳು.


ಪಾಟೀಲರ ಜನನ ಮತ್ತು ಮನೆತನ

"ಶ್ರೀ.ಸಿ.ಎನ್.ಪಾಟೀಲರು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ನಿಟ್ಟೂರು ಗ್ರಾಮದಲ್ಲಿ ೧೯೩೩ರ ಆಗಸ್ಟ್ ೧೬ರಂದು ಜನಿಸಿದರು. ಇವರ ತಂದೆ ನಿಂಗನಗೌಡ ತಾಯಿ ನಿಂಗಮ್ಮ. ಈ ದಂಪತಿಗಳ ಪ್ರೀತಿಯ ಮಗನಾಗಿ ಜನ್ಮ ತಾಳಿದರು. ನಿಂಗನಗೌಡ ಪಾಟೀಲರು ನಿಟ್ಟೂರು ಹಳ್ಳಿಯ ಮುಖ್ಯಸ್ಥರಾಗಿದ್ದು, ೧೨೦ ಎಕರೆ ಜಮೀನಿನ ಒಡೆಯರಾಗಿದ್ದರು. ಆ ಗ್ರಾಮವು ತುಂಬಾ ಚಿಕ್ಕದಾಗಿದ್ದು, ಕೇವಲ ೧೫-೨೦ ಮನೆಗಳಿದ್ದವು. ಅವರು ಊರಿನ ಎಲ್ಲಾ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನೆರವೇರಿಸುತ್ತಿದ್ದರು. ಹೀಗಾಗಿ ಊರಿನ ಜನರಿಗೆ ನೆಚ್ಚಿನವರಾಗಿದ್ದರು. ನಿಂಗನಗೌಡರಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ಹಿರಿಯರಾದವರೇ ಶ್ರೀ.ಸಿ.ಎನ್.ಪಾಟೀಲರು. ಇವರಿಗೆ ಇಬ್ಬರು ತಮ್ಮಂದಿರು, ಮತ್ತು ಒಬ್ಬ ತಂಗಿ. ಶ್ರೀ.ಸಿ.ಎನ್.ಪಾಟೀಲರು ತಮ್ಮ ಬಾಲ್ಯವನ್ನು ನಿಟ್ಟೂರಲ್ಲಿ ಕಳೆದರು. ತಂದೆ ನಿಂಗನಗೌಡರ ತೀರಿಕೊಂಡ ಮೇಲೆ ಶ್ರೀ.ಸಿ.ಎನ್.ಪಾಟೀಲರು ೬ನೇ ವಯಸ್ಸಿನಲ್ಲಿ ಇವರ ಕಿರಿಯ ಅತ್ತೆಯವರಾದ ಶ್ರೀಮತಿ ಲಕ್ಷ್ಮವ್ವ ಜಂಗಮನಿಯವರು ಗದಗಕ್ಕೆ ಕರೆದುಕೊಂಡು ಬಂದರು. ಉಳಿದ ತಮ್ಮಂದಿರು ಅಲ್ಲಿಯೇ ಬಟ್ಟೂರ ಗ್ರಾಮದಲ್ಲಿ ಉಳಿದರು."[೪]

---

೩. ಹ.ರಾ.ಕಿದಿಯೂರು -ನಮ್ಮ ಗದಗ ಬೇಟಗೇರಿ, ೧೯೯೫

೪. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ



ಶ್ರೀ.ಸಿ.ಎನ್.ಪಾಟೀಲರು



ಸಿ.ಎನ್.ಪಾಟೀಲರವರ ಬಣ್ಣದ ಬದುಕಿನ ಮನೆ

ಪಾಟೀಲರ ಬಾಲ್ಯ ಶಿಕ್ಷಣ

ಗದಗಿಗೆ ಬಂದ ನಂತರ ಅತ್ತೆಯವರಾದ ಲಕ್ಷ್ಮವ್ವರವರು ಸಿ.ಎನ್.ಪಾಟೀಲರನ್ನು ಗುಜ್ಜರ ಬಸದಿಯ ಹತ್ತಿರವಿರುವ ಶಾಲೆಯಲ್ಲಿ ಹೆಸರನ್ನು ನೋಂದಾಯಿಸಲಾಯಿತು. ಹೀಗೆ ಸಿ.ಎನ್.ಪಾಟೀಲರು ಪ್ರಾಥಮಿಕ ವಿದ್ಯಾಭ್ಯಾಸ ಪ್ರಾರಂಭಿಸಿದರು. ಸರಾಫ ಗುರುಗಳವರ ನೆಚ್ಚಿನ ಶಿಷ್ಯರಾಗಿ ಮನಗೊಟ್ಟು ಶ್ರೀ.ಸಿ.ಎನ್.ಪಾಟೀಲರು ಅಭ್ಯಾಸ ಮಾಡುತ್ತಿದ್ದರು. "ಬಾಲ್ಯವಸ್ಥೆಯಲ್ಲಿಯೇ ಚಿತ್ರಕಲೆಯ ಗೀಳಿಗಂಟಿಕೊಂಡವರಾಗಿದ್ದರು."[೫] ಸರಾಫ ಗುರುಗಳು ವಿದ್ಯಾಭ್ಯಾಸದ ಜೊತೆಗೆ ಚಿತ್ರಕಲೆಗೆ ಪ್ರೋತ್ಸಾಹ ನೀಡಿದರು. ಇದರಂತೆ ಇತಿಹಾಸ ಹಾಗೂ ಭೂಗೋಳದಲ್ಲಿಯ ಚಿತ್ರಗಳನ್ನು ಬಿಡಿಸುತ್ತಿದ್ದರು. ನಾಲ್ಕನೇ ತರಗತಿಯಲ್ಲಿ ಓದುತ್ತಿರುವಾಗ ಸಿ.ಎನ್.ಪಾಟೀಲರು ಅಂದಿನ ಮುಂಬೈ ಪ್ರಾಂತದ ಶಿಕ್ಷಣ ಸಚಿವರಾಗಿದ್ದ ಸರ್.ಸಿದ್ಧಪ್ಪ ಕಂಬಳಿಯವರು ಶಾಲೆಯನ್ನು ವಿಕ್ಷಿಸಲು ಬಂದಾಗ ಅವರ ಭಾವಚಿತ್ರಣವನ್ನು ರಚಿಸಿ ಅದರಿಂದ ಶಭಾಷ್‌ಗಿರಿಯೊಂದಿಗೆ ಪಾರಿತೋಷಕವನ್ನು ಪಡೆದರು. ತಮ್ಮೊಡನೆ ಬಂದಿದ್ದ ಶಿಕ್ಷಣಾಧಿಕಾರಿಗಳಿಗೆ ಸಿ.ಎನ್.ಪಾಟೀಲರ ಬಗ್ಗೆ ವಿದ್ಯಾಭ್ಯಾಸಕ್ಕೆ ಹೆಚ್ಚು ಕಾಳಜಿ ವಹಿಸುವಂತೆ ಆದೇಶಿಸಿ ಕೈ ತುಂಬಾ ದುಡ್ಡನ್ನು ಕೊಟ್ಟು ಪ್ರೋತ್ಸಾಹಿಸಿದರು. ಈ ಪ್ರಶಂಸೆಯಿಂದ ಉತ್ತೇಜಿತರಾದ ಶ್ರೀ.ಸಿ.ಎನ್.ಪಾಟೀಲರು ನಾನೊಬ್ಬ ಕಲಾವಿದನೇ ಆಗಬೇಕು ಎಂದು ಮನಸ್ಸು ಮತ್ತಷ್ಟು ಗಟ್ಟಿ ಮಾಡಿಕೊಂಡರು. ಇವರ ಹತ್ತನೇಯ ವಯಸ್ಸಿನಲ್ಲಿ ಬಿಡಿಸಿದ ಕೆಲವು ಚಿತ್ರಗಳು ಬೇರೆ ಬೇರೆ ಪಠ್ಯಪುಸ್ತಕಗಳ ಚಿತ್ರಗಳಾಗಿದ್ದರಿಂದ ಧಾರವಾಡ ಜಿಲ್ಲೆಯ ಹಲವಾರು ಕಡೆ ಇವರ ಶಾಲಾ ಗುರುಗಳಿಂದ ಕೊಟ್ಟು ಕಳಿಸಿದರು. ಅವುಗಳನ್ನು ಶಾಲೆಗಳಲ್ಲಿ ಅಂಟಿಸಲಾಗಿತ್ತು. ಯುವಕನ ಪ್ರತಿಭೆಯನ್ನು ಕಂಡು ಹಿತೈಷಿಗಳಾಗಿ ಹಾಗೂ ಸರ್ವೋತ್ತಮ ಬೆಳವಣಿಗೆಗಾಗಿ ಗದುಗಿನ ಗಣ್ಯ ವ್ಯಕ್ತಿಗಳಾದ ಎಳೆಯಲಿ ಶಾಂತವ್ವ ಹಾಗೂ ಬೂಮರಡ್ಡಿ ಬಸಪ್ಪನವರು ತುಂಬಾ ಸಹಕಾರಿಯಾಗಿದ್ದರು. ಸಿ.ಎನ್.ಪಾಟೀಲರು ಪ್ರಾಥಮಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಗದಗಿನ ನಗರಸಭೆ ಪ್ರೌಢಶಾಲೆಯ ಅಲ್ಲಿರುವ ಗುರುಗಳ ಸಹಕಾರದಿಂದ ವಿದ್ಯಾಭ್ಯಾಸದಲ್ಲಿ ಹೆಚ್ಚು ತೊಡಗಿಸಿಕೊಂಡು ಅವರ ಅಭಿಮಾನಕ್ಕೆ ಪಾತ್ರರಾದರು. ನಂತರ ತಮ್ಮ ಮನೆಯ ಹತ್ತಿರವಿರುವ ರಾಚಪ್ಪ ಮಾನ್ವಿಯವರ ಮನೆಯ ಅಟ್ಟದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ರಾಚಪ್ಪನವರು ಸಿ.ಎನ್.ಪಾಟೀಲರಿಗೆ ರಾತ್ರಿ ಪಾಠಗಳನ್ನು ಹೇಳಿಕೊಡುತ್ತಿದ್ದರು. ಅದರಿಂದ ಇವರಿಗೆ ಕನ್ನಡದ ಬಗೆಗೆ ಹೆಚ್ಚು ಆಸಕ್ತಿ ಮೂಡಿತು. ವಾರ್ಷಿಕ ರಜೆಯಲ್ಲಿ ಮರಳಿ ಬಟ್ಟೂರಿಗೆ ಹೋಗುತ್ತಿದ್ದ. ಅಲ್ಲಿ ಬ್ರಹ್ಮ "ಶ್ರೀಪೂಜ್ಯ ಸ್ವಾಮಿಗಳು ಅಶ್ವಮೇಧ ಯಾಗದ ಬಗೆಗೆ ಹೇಳುತ್ತಿದ್ದಂತೆ ಸಿ.ಎನ್.ಪಾಟೀಲರು ಕಂಠಪಾಠ ಮಾಡಿ ಮರುದಿನವೇ ನಾನು ಒಪ್ಪಿಸುತ್ತಿದೆ"[೬] ಎಂದು ಸಿ.ಎನ್.ಪಾಟೀಲರು ಹೇಳುತ್ತಿದ್ದರು. ಇದರಿಂದ ಆಗಲೇ ಕನ್ನಡ

---

೫. ವಿ.ಟಿ.ಕಾಳೆ -ದೃಶ್ಯಕಲೆಯ ಆರಾಧಕರು, ೧೯೯೦, ಪು-೩೫

೬. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

ಸಾಹಿತ್ಯದಲ್ಲಿ ಪ್ರವೀಣತೆಯನ್ನು ಪಡೆಯುತ್ತ ಶ್ರೀಯುತರು ಚಿತ್ರಕಲೆಯ ಅಭಿರುಚಿ ಬೆಳಸಿಕೊಂಡರು. ಹಳ್ಳಿಗಳಲ್ಲಿ ಆಚರಿಸಲಾಗುವ ಹಬ್ಬಗಳು ಇವರಿಗೆ ಒಂದು ರೀತಿಯಲ್ಲಿ ಕಲೆಗಳ ಪ್ರೇರಣೆ ಎಂದು ಹೇಳಬಹುದು. ಮಣ್ಣೆತ್ತಿನ ಅಮವಾಸ್ಯೆ ಮತ್ತು ಗುಳ್ಳವ್ವನ ವಾರ ಬಂತೆಂದರೆ ಎಲ್ಲರ ಮನೆಯಲ್ಲಿ ಸಡಗರ. ಆಗ ಶ್ರೀ.ಸಿ.ಎನ್.ಪಾಟೀಲರಿಗೆ ಎಲ್ಲಿಲ್ಲದ ಆನಂದ ಮತ್ತು ಹಿಗ್ಗು; ಏಕೆಂದರೆ ಓಣಿಯ ಅನೇಕ ಮನೆಗಳಿಗೆ ಮಣ್ಣಿನ ಬಸವಣ್ಣವನ್ನು ಪೂಜೆಗೆಂದು ಇವರೇ ಮಾಡಿ ಕೊಡುತ್ತಿದ್ದರು. "ಗುಳ್ಳವ್ವ ಹಾಗೂ ಬೆಳದಿಂಗಳು ಹಾಕುವ ಸಂದರ್ಭಗಳಲ್ಲಿ ಕಾಮನ ಹಬ್ಬ ಬಂದರೆ ಚಿತ್ರ ಬರೆಯಿಸುವುದು. ಮಾಡುತ್ತಿದ್ದರು. ಇವರಿಗೆ ಇನ್ನೊಂದು ಹವ್ಯಾಸವೆಂದರೆ ಎಲ್ಲಿಯಾದರು ಚಿತ್ರ ಕಂಡರೆ ಸಿನಿಮಾ ಪೋಸ್ಟರ್ ಹಾದಿಯಲ್ಲಿ ಬಿದ್ದ ಕಡ್ಡಿ ಪೆಟ್ಟಿಗೆ ಅದರ ಮೇಲಿನ ಪ್ರಾಣಿ, ಪಕ್ಷಿ, ನಕ್ಷೆ, ಮನುಷ್ಯ, ದೇವರು ಇತ್ಯಾದಿ ಚಿತ್ರಗಳನ್ನು ಸಂಗ್ರಹಿಸಿ ಅದನ್ನು ನೋಡಿ ಮರಳಿ ಚಿತ್ರಿಸುತ್ತಿದ್ದರು. ಚಿತ್ರ ಬಿಡಿಸುವುದರಲ್ಲಿ ಹೆಸರಾಗಿದ್ದರು. ಅನೇಕರು ಪಾಟೀಲರನ್ನು ಹುಡುಕಿಕೊಂಡು ಇವರಿಂದ ಚಿತ್ರ ಬರೆಸಿಕೊಳ್ಳುತ್ತಿದ್ದರು. ಶಾಲೆಯಲ್ಲಿ ಚಿತ್ರಗಳನ್ನು ಬಿಡಿಸುವುದು. ತಮ್ಮ ಗೆಳೆಯರಿಗೆ ಚಿತ್ರಗಳನ್ನು ಬಿಡಿಸಿಕೊಡುವುದು ಹೀಗೆ ಅನೇಕ ಚಿತ್ರಗಳನ್ನು ಸ್ಥಳದಲ್ಲಿಯೇ ಅಚ್ಚುಕಟ್ಟಾಗಿ ತೆಗೆಯುವ ಕಲೆಯನ್ನು ರೂಪಿಸಿಕೊಂಡು ಉತ್ತಮ ಕಲಾವಿದನಾಗಲು ತಮ್ಮನು ತಾವು ಮೈಗೂಡಿಸಿಕೊಂಡರು. ಇವರು ಮೆಟ್ರಿಕ್ ವರ್ಗದಲ್ಲಿದ್ದಾಗ ಕನ್ನಡ ವಿಷಯ ತಪಾಸಣಾ ಅಧಿಕಾರಿಗಳು ವರ್ಗಕ್ಕೆ ಬಂದಾಗ ಯಾರಾದರೊಬ್ಬರು ಕೆಲವು ನುಡಿಗಳನ್ನು ಹೇಳ ತಕ್ಕದು ಎಂದು ಆದೇಶಿಸಿದರು. ಸಿ.ಎನ್.ಪಾಟೀಲರು ಎದ್ದು ನಿಂತು 'ರಾವನಂ ಭೂವನಾಭಿ ರಾವನಂ' ಪದ್ಯವನ್ನು ಹೇಳಲು ಪ್ರಾರಂಭಿಸಿದರು. ಅದನ್ನು ಕೇಳಿ ಸಾಹೇಬರಿಗೆ ಅಚ್ಚರಿಯಾಯಿತು. ಇದು ನಿಮ್ಮ ಪಠ್ಯ ಪುಸ್ತಕದಲ್ಲಿಯೇ ಇಲ್ಲ ಅಂದಾಗ ಕನ್ನಡ ವಿಷಯ ಬೋಧಿಸುವ ಗುರುಗಳು. ಅವನು ೧೨ನೇ ವಯಸ್ಸಿನಲ್ಲಿಯೇ ಮಹಾಭಾರತದ ಅಭ್ಯಾಸ ಸುರುಮಾಡಿರುವವನು ಅದರ ಒಂದು ಸಂಧಿ ರಾಮಾಯಣದ ಬಗೆಗೆ ಇದೆ. ಅದನ್ನು ಪೂರ್ತಿಯಾಗಿ ಹೇಳಬಲ್ಲೆನು ಎಂದಾಗ ಸಾಹೇಬರವರು ತುಂಬಾ ಸಂತೋಷಪಟ್ಟು ಮುಂದಿನ ವರ್ಗಕ್ಕೆ ನಡೆದರು. ಅಲ್ಲಿಂದ ಇಲ್ಲಿಯವರೆಗೆ ಮಹಾ ಕಾವ್ಯಗಳು, ಕಾದಂಬರಿಗಳು ಕಥೆಗಳು, ಕವನಗಳು, ಸುಮಾರು ೧೦೦ಕ್ಕೂ ಹೆಚ್ಚು ಕಂಠ ಪಾಠವಾಗಿತ್ತು"[೨] ಎಂದು ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿಯಿಂದ ತಿಳಿದುಬರುತ್ತದೆ.

"ಹರಿಶ್ಚಂದ್ರ ಕಾವ್ಯ, ರಾಜಶೇಖರ ವಿಳಾಸ, ಮಹಾಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ಚನ್ನಬಸವ ಪುರಾಣ ಇನ್ನೂ ಸಾಕಷ್ಟು ಮಹಾ ಕಾವ್ಯಗಳು, ಕವನಗಳನ್ನು ಸಿ.ಎನ್.ಪಾಟೀಲರು ಕಂಠಪಾಠ ಮಾಡಿದ್ದರು. ಪ್ರಪಂಚ ಕರ್ನಾಟಕ ಬಂಧು ಪತ್ರಿಕೆಗಳಲ್ಲಿ ಪಾಟೀಲರ ಹಲವಾರು ಲೇಖನಗಳು ಪ್ರಕಟಿಸಲ್ಪಟ್ಟಿವೆ. ಪಾಟೀಲರ ಗುರುವರ್ಯರಾದ ಶ್ರೀ.ಕೆ.ಎಚ್.ಜಾಲಿಯವರು ಗುರುವರ್ಯ

---

೨. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

[illegible]

ಟಿ.ಪಿ.ಅಕ್ಕಿಯವರನ್ನು ಕಂಡು ಈ ವಿದ್ಯಾರ್ಥಿಯು ತುಂಬಾ ಚೆನ್ನಾಗಿ ಚಿತ್ರಿಸುತ್ತಾನೆ. ಇವನನ್ನು ಗ್ರೇಡ್ ಪರೀಕ್ಷೆಗೆ ಕೂಡಿಸಬೇಕು ಎಂದು ಹೇಳಿದರು. ಅದಕ್ಕೆ ಶ್ರೀ ಅಕ್ಕಿಯವರು ಪರೀಕ್ಷಾ ಪ್ರವೇಶಕ್ಕೆ ತುಂಬುವ ಕೊನೆಯ ದಿನವಿದು. ಅವನು ಇಲ್ಲಿಯವರೆಗೆ ಅಭ್ಯಾಸಿಸಿಲ್ಲ. ಇಂಥವನನ್ನು ಹೇಗೆ ಕೂಡ್ರಿಸಬೇಕು? ಎಂದರು ಕೊನೆಗೆ ಗುರುಗಳ ಒತ್ತಾಯಕ್ಕೆ ಕಟ್ಟು ಬಿದ್ದು ನನ್ನ ಪರಿಕ್ಷಾ ಪ್ರವೇಶದ ಫಾರ್ಮನ್ನು ತುಂಬಿದರು. ನಾನು ಇಂಟರ್‌ಮಿಡ್‌ಯಟ್ (೨ನೇ ಪರೀಕ್ಷೆ) ಪರೀಕ್ಷೆಯನ್ನು ಪ್ರಥಮ ವರ್ಗದಲ್ಲಿ ಪಾಸಾದೆ."[೮] ಮುಂದೆ ಶ್ರೀ ಅಕ್ಕಿ ಅವರ ಅಭಿಮಾನದ ಶಿಷ್ಯರಾಗಿ ಅವರ ಪಕ್ಕದಲ್ಲಿಯೇ ಕುಳಿತು ಹಲವಾರು ಅತ್ಯಂತ ಶ್ರೇಷ್ಠ ಕೃತಿಗಳನ್ನು ರಚಿಸಿದೆ. ಅವು ಶಾಲೆಯ ವಾರ್ಷಿಕ ಮಹೋತ್ಸವದ ಪುಸ್ತಕದಲ್ಲಿ ಪ್ರಕಟವಾಗಿವೆ. ಅಷ್ಟೇ ಅಲ್ಲ ಮಾನ್ಯ ಸಂಪಾದಕರಾಗಿದ್ದ ಹೊಂಬಳ ಗುರುಗಳ ಮುನ್ನುಡಿಯಲ್ಲಿ ನನ್ನ ಕಲಾಭಿಜ್ಞತೆಯ ಬಗೆಗೆ ಬರೆದಿರುವುದು. ಶ್ಲಾಘನೀಯ ೧೯೪೪ರಲ್ಲಿ 'ಮೆಟ್ರಿಕ್' ಪರೀಕ್ಷೆಯನ್ನು ಪ್ರಥಮ ವರ್ಗದಲ್ಲಿ ಶಾಲೆಗೆ ಪ್ರಥಮರಾಗಿ ಪಾಸಾದರು. ಈ ವಿಷಯ ಪಾಟೀಲರು ಬರೆದಿರುವ ಅಪ್ರಕಟಿತ ಲೇಖನದಲ್ಲಿ ತಿಳಿದುಬರುತ್ತದೆ.

ಶ್ರೀ.ಸಿ.ಎನ್.ಪಾಟೀಲರು ಕೇವಲ ಚಿತ್ರಕಲೆಯಲಷ್ಟೇ ಅಲ್ಲ ಕ್ರಿಡೆಯಲ್ಲಿಯೂ ಸಹ ಆಸಕ್ತರಾಗಿದ್ದರು. ತಮ್ಮ ವಿದ್ಯಾಭ್ಯಾಸದ ಜೊತೆಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟದಲ್ಲಿ ಭಾಗವಹಿಸಿದ್ದರು. ಕ್ರಿಕೇಟ್, ವಾಲಿಬಾಲ್, ಹಾಕಿ, ಫುಟ್‌ಬಾಲ್, ಕಬ್ಬಡಿ, ಖೋ-ಖೋ ಮುಂತಾದ ಆಟಗಳಲ್ಲಿ ಬಹಳ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಹೀಗಾಗಿ ಪಾಟೀಲರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಶ್ರೇಷ್ಠ ಕ್ರೀಡಾಪಟುವೆಂದು ಹೆಸರು ಪಡೆದರು. ಮುಂದೆ ಗದಗನಲ್ಲಿಯೇ ಪ್ರತಿ ವರ್ಷ ಆಲ್‌ಇಂಡಿಯಾ ಫುಟ್‌ಬಾಲ್ ಸ್ಪರ್ಧೆ ನಡೆಯಿತ್ತಾದರೂ. ಅದು ಒಂದೆರಡು ವರ್ಷಗಳಲ್ಲಿ ನಿಂತಿತು. ಮುಂದೆ ಹಾಕಿ ಸ್ಪರ್ಧೆಯೂ ಪ್ರಾರಂಭವಾಯಿತು. ರಾಷ್ಟ್ರದ ಹಲವಾರು ಕಡೆಗಳಿಂದ ಆಟಗಾರರು ಬಂದರು. ಮುಂಬೈ, ಪಂಜಾಬ್, ಪೂನಾ, ಸಿಂಗಾಪೂರ, ನರಗುಂದಗಳ ಕ್ರಿಡಾ ಪಟುಗಳು ಸಹ ಭಾಗಿಯಾಗುತ್ತಿದ್ದರು. "ಆಗ ರಾಷ್ಟ್ರದ ಹಾಕಿ ಟರ್ಮಿನ್ ನೇತಾರ ಶ್ರೀ ಬಲವೀರಸಿಂಗ್‌ರವರಿಗೂ ಉದಾಮ್‌ಸಿಂಗ್ ಅವರೆಲ್ಲರೂ ಗದಗಿಗೆ ಆಗಮಿಸಿದ್ದರು. ನನಗೆ ಶ್ರೀ ಬಲವೀರಸಿಂಗದವರೊಡನೆ ಗಾಢವಾದ ಮೈತ್ರಿಯಾಯಿತೆಂದು"[೯] ಸಿ.ಎಸ್.ಪಾಟೀಲರು ತಮ್ಮ ಹಸ್ತಲಿಖಿತ ಪುಸ್ತಕದಲ್ಲಿ ಒಂದು ಕಡೆ ಹೇಳಿದ್ದಾರೆ.

ರಾಯಲ್ ಏರ್‌ಫೋರ್ಸ್‌ನಲ್ಲಿ ಸೇವೆ

ಸಿ.ಎನ್.ಪಾಟೀಲರು ರಾಯಲ್ ಏರಫೋರ್ಸ್‌ನಲ್ಲಿ ಸೇವೆಸಲ್ಲಿಸುವ ಅವಕಾಶ ಒಂದಾಗಿದ್ದು ಆಕಸ್ಮಿಕವಾಗಿ ಅಂದು ಮಹಾವಿದ್ಯಾಲಯಗಳಲ್ಲಿ ಪ್ರವೇಶಕ್ಕಾಗಿ ಕರ್ನಾಟಕ ಕಾಲೇಜ್, ಲಿಂಗರಾಜ

---

೮. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

೯. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಲೇಖನ

[illegible]

ಕಾಲೇಜುಗಳಿಗೆ ಪ್ರವೇಶ ಪತ್ರ ಸಲ್ಲಿಸಿದೆ. ಎರಡೂ ಕಡೆಯಿಂದ ಪ್ರವೇಶ ಪ್ರಾಪ್ತವಾಗಿತ್ತು. ಆದರೆ ನನ್ನ ಗುರುವಯ್ಯ ಕೆ.ಎಚ್.ಜಾಲಿಯವರು ಆದೇಶದಂತೆ ಲಿಂಗರಾಜ ಕಾಲೇಜಿನಲ್ಲಿ ಪ್ರವೇಶ ಪಡೆದ ಸಿ.ಎನ್.ಪಾಟೀಲರಿಗೆ ಬೆಳಗಾಂವಿಯಲ್ಲಿ ಜಿಟಿ ಜಿಟಿ ಮಳೆ ಹತ್ತಿದ್ದು ಸುಮಾರು ದಿನಗಳುರುಳಿದರೂ ಕಡಿಮೆಯಾಗದೇ ಆ ಹವೆ ತಡೆಯಲು ಆಗಲಿಲ್ಲ. ಚಳಿಜ್ವರ ಬೀಳು ಹತ್ತಿ, ಹೊಟ್ಟೆಯಲ್ಲಿ ಗಂಟು ಬೆಳೆಯಿತು. ಅದು ಕರಗಲು ಕ್ವಿನಾಯುನ್ನೇ ಎಂಬ ಔಷದ ಬೇಕಾಗಿತ್ತು. ಆಗ ೨ನೇಯ ಮಹಾಯುದ್ಧ ನಡೆದಿತ್ತು ಹೊರಗಡೆ ಎಲ್ಲಿಯೂ ಕ್ವಿನಾಯನ್ನೇ ಸಿಗುತ್ತಿರಲಿಲ್ಲ. ಅದು ಸೇನಾ ಪಡೆಗಳಲ್ಲಿ ಮಾತ್ರ ದೊರೆಯುತ್ತಿತ್ತು. ಅದರಿಂದಾಗಿ ಅನಿವಾರ್ಯವಾಗಿ ರಾಯಲ್ ಏರ್‌ಪೋರ್ಸನ್ನು ಸೇರಬೇಕಾಯಿತು. ಬೆಂಗಳೂರು ಹತ್ತಿರವಿರುವ ಈಗಿನ ಜಾಲಹಳ್ಳಿ ನಮ್ಮ ಕ್ಯಾಂಟಿನ್ ಸ್ಥಳವಾಗಿತ್ತು. ಅಲ್ಲಿದ್ದಾಗ ಕಾರ್ಪೋರೇಟ್ ಶ್ರೀ ಚಕ್ರವರ್ತಿ ಅವರ ಗೆಳೆತನವಾಯಿತು. ಅವರು ತಮ್ಮ ಕೊರಡಿಗೆ ಕರೆದುಕೊಂಡು ಹೋದರು ಅಲ್ಲಿ ಹಲವಾರು ಚಿತ್ರಗಳನ್ನು ಕಂಡೇ ಅವರೂ ಚಿತ್ರಕಲಾ ಪ್ರೇಮಿಗಳಾಗಿದ್ದರು. ಅವರಲಿದ್ದ ಚಿತ್ರಗಳನ್ನು ನೋಡಿ ನೊಂದುಕೊಂಡು ನಿಮಗೆ ಇದಕ್ಕಿಂತ ಒಳ್ಳೆಯ ಚಿತ್ರಗಳನ್ನು ಕೊಡಬಲ್ಲೆ ಆದರೆ ನನಗೆ ಬೇಕಾದಾಗ ಬೆಂಗಳೂರಿಗೆ ಹೋಗಿ ಬರುವ ಪರವಾನಿಗೆ ಕೊಡಬೇಕು ಎಂದು ಹೇಳಿದಾಗ ಅವರು ಒಪ್ಪಿಕೊಂಡರು. ನನ್ನ ಓರ್ವ ಗೆಳೆಯ ಕೂರ್ಗದವ ಶ್ರೀ ನಾಣಯ್ಯ ಎಂಬವನಿದ್ದು ಅವನ ಸಹೋದರ ಬೆಂಗಳೂರಿನಲ್ಲಿ ಕಾಲೇಜ್ ಹಾಸ್ಟೆಲ್‌ನಲ್ಲಿ ಇರುತ್ತಿದ್ದ ಹೀಗಾಗಿ ನಮಗೀರ್ವರಿಗೂ ಉಳಿದುಕೊಳ್ಳುವ ಚಿಂತೆಯಿರಲಿಲ್ಲ, ಅವನನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿ ಹಾಸ್ಟೇಲ್‌ನಲ್ಲಿ ಉಳಿದುಕೊಂಡು ಸಾಮಾನುಗಳನ್ನು ಖರೀದಿ ಮಾಡುತ್ತಿದ್ದೆವು. ಇದು ನಮಗೆ ಹೆಚ್ಚು ಅನುಕೂಲವಾಗಿದ್ದುದರಿಂದ ಬೇಕಾದಾಗ ಬೆಂಗಳೂರಿಗೆ ಹೋಗುತ್ತಿದ್ದೆವು. ಅಧಿಕಾರಿಗಳಿಗಾಗಿ ಚಿತ್ರಗಳನ್ನು ರಚಿಸಿದೆ. ಅವನ್ನು ನೋಡಿ ಅವರು ತುಂಬಾ ಸಂತೋಷಪಟ್ಟರು. ಜಾಲಹಳ್ಳಿ ಒಂದು ಚಿಕ್ಕ ಹಳ್ಳಿ ಸುತ್ತಲೂ ಅತ್ಯಂತ ಸುಂದರ ನಿಸರ್ಗ ಅದರಿಂದಾಗಿ ನನಗಾಗಿಯೂ ಕೆಲವು ಚಿತ್ರಗಳನ್ನು ಚಿತ್ರಿಸಿದೆ. ಇದೇ ಸಂದರ್ಭದಲ್ಲಿ ಬ್ರಿಟೀಷರಿಗೆ ಬೇಕಾದ ಅವರಿಗಿಷ್ಟವಾದ ಒಂದು ಭವ್ಯ ಗಾತ್ರದ ಚಿತ್ರವನ್ನು ಚಿತ್ರಿಸಿದೆ. ನಮಗೊಬ್ಬ ಶಿಸ್ತಿನ ಅಧಿಕಾರಿ ಕೆನಡಿಯನ್ ಸಾರ್ಜಂಟ್ ಇದ್ದ. ಅವನು ಕೆಡೆಟ್‌ರಿಗೆ ಪಟಾಂಗಣದಲ್ಲಿಯ ಹುಲ್ಲು ಕೀಳುವುದು, ಕಲ್ಲುಗಳನ್ನು ಆರಿಸುವುದು ಮೊದಲಾದ ಕೆಲಸಗಳಲ್ಲಿ ತೊಡಗಿಸುತ್ತಿದ್ದ ನನ್ನನ್ನು ೨೦ ಕೆಡಿಟರ್ ಮೇಲೆ ಮುಖ್ಯಸ್ಥರಾಗಿ ನೇಮಿಸಿದ್ದ. ನನ್ನ ಕಾರ್ಯ ದೊಡ್ಡ ಕ್ಯಾಂಟಿನಿಂದ, ೨ ಬಕೆಟ್ ಚಹ ತರಿಸುವುದು ಕೆಡೆಟ್‌ಗಳಿಗೆ ಕುಡಿಸುವುದು ಅವರನ್ನು; ಗಸ್ತಿಗೆ ಕಳಿಸುವುದು ಆಗಿತ್ತು. ಅದರಿಂದಾಗಿ ನಾನು ಯಾವಾಗಲೂ ಕೊಠಡಿಯಲ್ಲಿಯೇ ಇರುತ್ತಿದೆ. ಒಮ್ಮೆ ಹಾಗಿದ್ದಾಗ ಕೆಲಸ ಮಾಡುತ್ತಿದ್ದ ಉಳಿದ ಕೆಡಿಟ್‌ರವರು ನನ್ನಡೆಗೆ ಒಂದು ಚಿತ್ರ ನೋಡಿ ಅಪ್ಪಾ ಇಂತಹ ದೊಡ್ಡ ಕಲಾವಿದನಾಗಿದ್ದು ನೀನೇಕೆ ಇಲ್ಲಿಗೆ ಬಂದಿ ಎಂದು ಹೇಳುತ್ತಾ ನಿಂತಿದ್ದರು. ಸಾರ್ಜಂಟ್ ಬಂದ ನೋಡಲಾಗಿ ಪಟಾಂಗಣದಲ್ಲಿ ಯಾರು ಇರಲಿಲ್ಲ ಎಲ್ಲರೂ ನನ್ನ ಭ್ಯಾರಕಿನಲ್ಲಿ ಇದ್ದದ್ದು ತಂದು ನೀರಿನಿಂದ ತುಂಬಿದ ಒಂದು ಬಕೆಟ್

[illegible]

ತಂದ ಎಲ್ಲರ ಮೇಲೆ ನೀರನ್ನು ಸುರವಿದ, ಚಿತ್ರ ಪೂರ್ತಿ ತೊಯ್ದಿತು. ಆದರೆ ಹಾಳಾಗಲಿಲ್ಲ. ಕಾರಣ ಈ ವಿಷಯ ನನ್ನ ಮಿತ್ರ ಅಣ್ಣಯ್ಯನಿಗೆ ಗೊತ್ತಾಯಿತು. ಅವನು ಮೇಲಾಧಿಕಾರಿಗಳವರಿಗೆ ಬರೆಯಲು ಒತ್ತಾಯಿಸಿದ ಅದಕ್ಕೆ ನಾನು ಹೆದರಿ ಮೇಲಾಧಿಕಾರಿಗಳವರಿಗೆ ಬರೆಯಲು ಒಪಲಿಲ್ಲ, ಈ ವಿಷಯ ಮೇಲಧಿಕಾರಿಗಳವರಿಗೆ ಕಳಿಸಿದರು. ಕೆಳಕೋರ್ಟಿನಲ್ಲಿ ವಿಚಾರಣೆ ನಡೆಯಿತು. ನಾನು ಭಯದಿಂದ ಹೆಚ್ಚು ಮಾತಾಡಲಿಲ್ಲ, ಹೊರಗೆ ಬಂದ ಕೂಡಲೇ ನನ್ನ ಮಿತ್ರರು ಚೆನ್ನಾಗಿ ಛೀಮಾರಿ ಹಾಕಿದರು. ಮೇಲಿನ ಕೋರ್ಟಿನಲ್ಲಿ ಚೆನ್ನಾಗಿ ಇದ್ದ ವಿವರವನ್ನು ತಿಳಿಸುವಂತೆ ಒತ್ತಾಯಿಸಿ ಧೈರ್ಯ ತುಂಬಿದರು. ಅಂತು ಮೇಲಿನ ಕೋರ್ಟಿನಲ್ಲಿ ಚೆನ್ನಾಗಿ ಮಾತನಾಡಿದೆ. ಅಲ್ಲದೇ ಚಿತ್ರವನ್ನು ತೋರಿಸಿದೆ. ಚಿತ್ರದಲ್ಲಿ ಜಾರ್ಜರ ಪೋಟೋವನ್ನು ಚಿತ್ರಿಸಲಾಗಿತ್ತು. ಅದನ್ನು ನೋಡಿದ ತಕ್ಷಣ ಅಧಿಕಾರಿಗಳವರು ಎದ್ದು ನಿಂತು ಚಿತ್ರಕ್ಕೆ ನಮಸ್ಕರಿಸಿದರು. ಆದರೆ ನಮ್ಮಲ್ಲಿ ಪೂಜ್ಯ ಬಾಪೂಜಿಯವರ ಚಿತ್ರ ನಮ್ಮ ರಾಷ್ಟ್ರಧ್ವಜ ಕಂಡರೆ ಅದನ್ನು ತುಳಿದು ಮುಂದೆ ಸಾಗಿದರು. ಇದು ನಮ್ಮ ಸ್ಥಿತಿಯಾಗಿದೆ. ಅಂತೂ ಕೇಸು ನನ್ನಂತಾಯಿತು. ಆ ಅಧಿಕಾರಿಯ ಒಳ್ಳೆಯ ವರ್ತನೆಗಾಗಿ ಕೊಡುವ ದುಡ್ಡು ಕೊಡುವುದನ್ನು ತಡೆಯಲಾಯಿತು. ಇದರಿಂದ ನನಗೆ ತುಂಬಾ ಅಂಜಿಕೆಯಾಯಿತು. "ಇದಾದ ಕೆಲದಿನಗಳಲ್ಲಿ ಸುಮಾರು ೩೧ ಚಿತ್ರಗಳನ್ನು ಚಿತ್ರಿಸಿದೆ. ಮೇಲಧಿಕಾರಿಗಳ ಪರಿಚಯವಾದುದರಿಂದ ಅವರನ್ನೇ ಪ್ರದರ್ಶನವನ್ನು ಉದ್ಘಾಟಿಸುವಂತೆ ವಿನಂತಿಸಿಕೊಂಡಾಗ ಅಧಿಕಾರಿಗಳವರು ಒಪ್ಪಿಕೊಂಡು ಪ್ರದರ್ಶನವನ್ನು ಉದ್ಘಾಟನೆ ಮಾಡಿದರು. ಕಲಾಕೃತಿಗಳನ್ನು ವೀಕ್ಷಿಸಿದ ಅವರು ತುಂಬಾ ಪ್ರಾವಿತರಾಗಿ ನೋಡುವ ನೀನೊಬ್ಬ ರಾಷ್ಟ್ರದ ಶ್ರೇಷ್ಠ ಕಲಾವಿದನಾಗಬಲ್ಲೆ ಅದನ್ನು ತ್ಯಜಿಸಿ ಇಲ್ಲಿಗೇಕೆ ಬಂದೆ ನೀನು ಮುಂಬೈ ಕಲಾಶಾಲೆಯಲ್ಲಿ ಪ್ರವೇಶ ಪಡೆದರೆ ನನಗೆ ತುಂಬಾ ಸಂತೋಷ ಏನು ಮಾಡುವೆ ಎಂದು ಕೇಳಿದರು. ಅದಕ್ಕೆ ನಾನು ಒಪ್ಪಿಕೊಂಡೆ ಅವರಿಗೆ ಈ ವಿಷಯವಾಗಿ ಪತ್ರ ಬರೆಯುವುದಾಗಿ ತಿಳಿಸಿದೆ. ಅಧಿಕಾರಿಗಳು ಒಪ್ಪಿ ನನ್ನನ್ನು ಅಂದೇ ಸೇವೆಯಿಂದ ಬಿಡುಗಡೆ ಮಾಡಿದರು ನಾನು ಅಲ್ಲಿಂದ ಗದುಗಿಗೆ ಮರಳಿ ಬಂದೆನು"[೧೦] ಎಂದು ಕಲಾವಿದ ಶ್ರೀ.ಸಿ.ಎನ್.ಪಾಟೀಲರು ಏರ್‌ಫೋರ್ಸ್‌ನಲ್ಲಿ ತಾವಿದ್ದಾಗ ಅಲ್ಲಿ ನಡೆದ ಘಟನೆಯನ್ನು ತಮ್ಮ ಆಡುಭಾಷೆಗಳಲ್ಲಿಯೇ ವಿವರಿಸುತ್ತಾರೆ.

ಮುಂಬೈಯಲ್ಲಿ ಚಿತ್ರಕಲಾ ವ್ಯಾಸಂಗ

ಗದಗಕ್ಕೆ ಬಂದ ನಂತರ ಅಲ್ಲಿಯ ಧಾನಿಗಳ ಸಹಾಯದಿಂದ ತ್ಯಾಗವೀರ, ಸಿರಸಂಗಿ ಲಿಂಗರಾಜ ದೇಸಾಯಿಯವರ ಟ್ರಸ್ಟಿನಿಂದ ಸ್ಕಾಲರ್‌ಶಿಫ್ ಪಡೆದು ಶ್ರೀ.ಟಿ.ಪಿ.ಅಕ್ಕಿಯವರ ಮಾರ್ಗದರ್ಶನದಿಂದ ಮುಂಬೈಯಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತೆರಳುತ್ತಾರೆ.

ಸಿ.ಎನ್.ಪಾಟೀಲರು ೧೯೪೭ರಲ್ಲಿ ಸರ್ ಜೆ.ಜೆ.ಕಲಾ ಶಾಲೆಯ ಡಿ.ಟಿ.ಸಿ ಕಲಿಯುವಾಗ ಪಠ್ಯಕ್ರಮದಲ್ಲಿದ್ದ ವಿಷಯಗಳು

---

೧೦. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

೧. ನಿಸರ್ಗಚಿತ್ರಣ

೨. ಸ್ಮರಣ ಚಿತ್ರಣ

೩. ನಕ್ಷಾ ಚಿತ್ರಣ

೪. ಯಥಾದರ್ಶನ

೫. ವಸ್ತು ಚಿತ್ರಣ

ಈ ಮೇಲಿನ ವಿಷಯಗಳನ್ನು ಪಾಟೀಲರು ಅತ್ಯಂತ ಶ್ರದ್ಧೆಯಿಂದ ಕಲಿಯುತ್ತಿದ್ದರು. ನಿಸರ್ಗ ಚಿತ್ರಣದಲ್ಲಿ ಯಾವುದಾದರೂ ಹೂವಿನ ಟೊಂಗೆಯನ್ನು ಮುಂದೆ ಇಟ್ಟುಕೊಂಡು ಟೊಂಗೆಯ ವಿನ್ಯಾಸದಲ್ಲಿ ಪರಿವರ್ತನೆಗೊಳಿಸಿ ಚಿತ್ರಿಸಬೇಕಿತ್ತು ಸ್ಮರಣಚಿತ್ರವನ್ನು ಚಿತ್ರಿಸುವಾಗ ಮೊದಲು ಪೆನ್ಸಿಲ್ಲಿನಿಂದ ಚಿತ್ರಿಸಿ ನಂತರ ನೆರಳು ಬೆಳಕಿನಿಂದ ಪೂರ್ಣಗೊಳಿಸುವುದಾಗಿತ್ತು. ಆಗಿನ ಪರಿಸರದಲ್ಲಿ ಹೆಚ್ಚಾಗಿ ಪೌರಾಣಿಕ ವಿಷಯವನ್ನು ತೆಗೆದುಕೊಂಡು ಚಿತ್ರಿಸುತ್ತಿದ್ದರು. ನಕ್ಷಾ ಚಿತ್ರಣದಲ್ಲಿ ರೇಖೆಗಳ ಸರಳತೆ, ಕ್ಲಿಷ್ಟತೆ ಮತ್ತು ಚಲನೆಯನ್ನು ತೋರಿಸುತ್ತಿದ್ದರು. ಯಥಾದರ್ಶನ ಇದನ್ನು ಈ ರೀತಿ ಪಠ್ಯಕ್ರಮವಾಗಿದ್ದು, ಎಲ್ಲ ಗುರುವರ್ಯರ ಪ್ರೀತಿಗೆ ಪಾತ್ರರಾದರು. ಮುಖ್ಯವಾಗಿ ಜಗತ್‌ಪ್ರಸಿದ್ಧ ಕಲಾವಿದರಾದ ದಿ.ಜೆ.ಎಮ್.ಅಹಿವಾಸಿ ಅವರ ಅಪಾರ ಕೃಪೆಗೆ ಪಾತ್ರನಾದೆ. ನನ್ನ ಪಾಲಿನ ಗುರುಗಳವರು ದಿ.ವಾಯ್.ಕೆ.ಶುಕ್ಲಾ ಅವರು ನನಗೆ ಸರ್ವ ರೀತಿಯಿಂದ ಸಹಾಯ ಮಾಡುತ್ತಿದ್ದರು ಎಂದು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಅದೇ ವರ್ಷ ವರ್ಗದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಯಾದರು. ಅದೇ ಕಾಲದಲ್ಲಿ ಕನ್ನಡಿಗರಾದ ಪೂಜ್ಯ ಶ್ರೀ ಜಿ.ಎಸ್.ದಂಡಾವತಿಮಠ ಗುರುಗಳವರಿಂದ ನಡೆಸಲ್ಪಡುತ್ತಿದ್ದ ನೂತನ ಕಲಾ ಮಂದಿರದಲ್ಲಿ ಅಭ್ಯಾಸ ಪ್ರಾರಂಭಿಸಿದರು. ಮೊದಲಬಾರಿಗೆ ಲಾಯಿಫ್ ಪೇಂಟಿಂಗ್ -ಮಾಡಿದಾಗ ಅವರಿಗೆ ತೃಪ್ತಿ ಆಗಲಿಲ್ಲ. ಎರಡನೇ ಪೇಂಟಿಂಗ್ ಮಾಡಿದಾಗ ತುಂಬಾ ಸಂತಸ ಪಟ್ಟರು. ಅಲ್ಲದೇ ೨ನೇ ವರ್ಷದ ಪರೀಕ್ಷೆಗೆ ಕೂಡ್ರುವ ಅನುಕೂಲತೆ ಮಾಡಿಕೊಟ್ಟರು. ಮೊದಲನೆಯ ಪರೀಕ್ಷೆಯನ್ನು ರಾಜ್ಯಕ್ಕೆ ಪ್ರಥಮನಾಗಿ ೨ನೇಯ ಪರೀಕ್ಷೆಯನ್ನು ರಾಜ್ಯಕ್ಕೆ ದ್ವಿತೀಯನ್ನಾಗಿ ಪಾಸಾಗಿ ಸರ್ವಗುರುಗಳ ಮೆಚ್ಚುಗೆಗೆ ಪಾತ್ರರಾದರು, ಕಾರಣ ೨ನೇ ವರ್ಷದ ಪರೀಕ್ಷೆಯ ತಯಾರಿಯನ್ನು ಕೇವಲ ೩ ತಿಂಗಳಷ್ಟೇ ಮಾಡಿದ್ದೇ. ನನ್ನ ಗುರುಗಳು ಸ್ಟೀಲ್‌ಲೈಫ್ ಪೇಂಟಿಂಗ್‌ದಲ್ಲಿ ತುಂಬಾ ಪ್ರತಿಭಾನ್ವಿತರು. ಅವರು ಕೇವಲ ೧ಗಂಟೆ ವರ್ಗದಲ್ಲಿದ್ದು ಮುಂದೆ ವರ್ಗದ ಜವಾಬ್ದಾರಿಯನ್ನು ನನಗೆ ಬಿಟ್ಟು ಗುರುಗಳು ಕೂರುವ ಹಾಲಿಗೆ ಹೋಗುತ್ತಿದ್ದರು. ಸದರಿ ವರ್ಗಕ್ಕೆ ನನ್ನನ್ನೇ ಗುರುವಾಗಿಸಲು ಒತ್ತಾಯಿಸಿದರು. ಆದರೆ ನಮ್ಮ ರಾಜ್ಯದಲ್ಲಿ ಕಲೆಯ ಬಗೆಗೆ ಹೆಚ್ಚು ಆಸಕ್ತಿ ಇರಲಿಲ್ಲ. ರಾಜ್ಯದಲ್ಲಿ ಇದ್ದದ್ದು ಒಂದು ಸರಕಾರದ ಶಾಲೆ ಮೈಸೂರಿನಲ್ಲಿ ಮತ್ತೊಂದು ಖಾಸಗಿ ಶಾಲೆ ಧಾರವಾಡದಲ್ಲಿತ್ತು. ನಮ್ಮ ರಾಜ್ಯದಲ್ಲಿ ಕಲಾವಾತಾವರಣ ಸೃಷ್ಟಿಸಲು ಮನೆ ಮಾಡಿದೆ. ಆಗ ಚಿತ್ರಕಲಾ ಶಿಕ್ಷಕರ ತರಬೇತಿ ವಿದ್ಯಾರ್ಥಿಯಾದರು. ನಂತರ ಸದರ ಪರೀಕ್ಷೆಯನ್ನು ಮುಂಬೈ ರಾಜ್ಯಕ್ಕೆ ಪ್ರಥಮ ದರ್ಜೆಯಲ್ಲಿ ಪಾಸಾಗಿ ಮೂರನೇ ವರ್ಷದ ಪೇಂಟಿಂಗ್ ವರ್ಗವನ್ನು ಪ್ರವೇಶ ಪಡೆದೆ.

[illegible]

ಮೂರನೆಯ ವರ್ಷದ ಗುರುವರ್ಯರಾದ ಶ್ರೀ.ಎ.ಎ.ಭೋಸಲೆ ಗುರುಗಳು ನನ್ನನ್ನು ಅತ್ಯಂತ ಆದರದಿಂದ ಬರಮಾಡಿಕೊಂಡರು, ಆ ವರ್ಷದ ಸದರಿ ಪರೀಕ್ಷೆಯಲ್ಲಿ ದ್ವಿತೀಯನಾಗಿ ಪಾಸಾದೆ.”[೧೧]

“ಮುಂಬೈಗೆ ಹೋದ ಪ್ರಾರಂಭದಲ್ಲಿ ಗದುಗಿನಲ್ಲಿ ನಮ್ಮ ಪಕ್ಕದ ಮನೆಯವರು ಮುಂಬೈಯಲ್ಲಿದ್ದರು. ಅವರು ನನಗೆ ತಮ್ಮ ಮನೆಯಲ್ಲಿರಲು ಆಶ್ರಯ ಕೊಟ್ಟರು, ಸುಮಾರು ೬ ತಿಂಗಳ ಕಾಲ ಅವರ ಮನೆಯಲ್ಲಿದ್ದೆ. ನಂತರ ಶ್ರೀಸ್ವಸ್ತಿಕ ಎನ್ನುವರು ತಮ್ಮ ಮನೆಯಲ್ಲಿ ಇರಲು ಹೇಳಿದರು. ಅಷ್ಟರಲ್ಲಿ ಕಲಾಮಂದಿರದ ನಿರ್ದೇಶಕರಾಗಿದ್ದ ಶ್ರೀ.ವ್ಹಿ.ಆರ್.ರಾವ್ ಅವರು ಬ್ರಿಟೀಷರ ಕಾಲದಲ್ಲಿದ್ದ ದೊಡ್ಡ ಬಂಗ್ಲೆಯಲ್ಲಿ ಇರುತ್ತಿದ್ದರು. ಅವರು ನನ್ನ ಮೇಲಿನ ಅಭಿಮಾನದಿಂದ ತಮ್ಮ ಬಂಗ್ಲೆಯಲ್ಲಿಯೇ ಇರಲು ಒಂದು ಖೋಲಿಯನ್ನು ಕೊಟ್ಟರು. ಅಲ್ಲದೇ ಅವರು ನಿತ್ಯ ಮುಂಜಾವಿನ ಸಮಯದಲ್ಲಿ ನಿಸರ್ಗ ಚಿತ್ರಗಳನ್ನು ರಚಿಸಲು ಹೊರಗೆ ಹೋಗುವಾಗ ನನ್ನನ್ನು ಸಹ ಕರೆದುಕೊಂಡು ಹೋಗುತ್ತಿದ್ದರು. ಇದರಿಂದ ನನಗೆ ಎರಡು ಲಾಭಗಳಾದವು. ಅದಕ್ಕಾಗಿ ನಾನು ಅವರೊಡನೆ ನಿಷ್ಠಾವಂತನಾಗಿ ನಡೆದುಕೊಂಡು ಅವರ ಪ್ರೀತಿಗೆ ಪಾತ್ರನಾದೆನು”[೧೨] ಎಂದು ಪಾಟೀಲರು ಅಂದಿನ ದಿನಗಳನ್ನು ನೆನೆಯುತ್ತಾರೆ.

ಸರ್ ಜೆ.ಜೆ.ಕಲಾಶಾಲೆ ಮುಂಬೈನಲ್ಲಿ ಕಲಾ ಅಭ್ಯಾಸವನ್ನು ಪ್ರಾರಂಭಿಸಿದ ಸಿ.ಎನ್.ಪಾಟೀಲರು ತಮ್ಮ ಕಲಾ ಪ್ರತಿಭೆಯಿಂದ ನೆಚ್ಚಿನ ವಿದ್ಯಾರ್ಥಿಯಾಗಿದ್ದರು. ಶ್ರೀ ಜಗನ್ನಾಥ ಅಹಿವಾಸಿ, ಶ್ರೀ.ಎ.ಎ.ಬೋಸ್ಲೆ ಮೊದಲಾದ ಪ್ರತಿಭಾ ಸಂಪನ್ನರೂ ದೇಶದ ಹೆಸರಾಂತ ಕಲಾವಿದರು ಪಾಟೀಲರ ಗುರುಗಳಾಗಿದ್ದರೆಂಬುದೊಂದು ಅವರ ಭಾಗ್ಯ. ಅಹಿವಾಸಿ, ದೋಪೇಶ್ವರಕರ ಅವರು ಭಾರತೀಯ ಚಿತ್ರಕಲಾ ಸಂಪ್ರದಾಯದ ವಾರಸುದಾರರಾಗಿದ್ದಾರೆ. ಶ್ರೀ.ಎ.ಎ.ಬೋಸ್ಲೆ ಅವರು ಪಾಶ್ಚಿಮಾತ್ಯ ಶೈಲಿಯ ವ್ಯಕ್ತಿ ಚಿತ್ರಣ ರಚನೆಯಲ್ಲಿ ಹೆಸರುವಾಸಿಯಾಗಿದ್ದರು. ಸಿ.ಎನ್.ಪಾಟೀಲ ಅವರ ಹಿರಿಯ ಸಮಕಾಲೀನ ಕಲಾವಿದರಲ್ಲಿ ಎಂ.ಎಸ್.ಜೋಶಿ, ದಿ.ಎ.ಎ.ಆಲಮೇಲಕರ, ಕೆ.ಕೆ.ಹೆಬ್ಬಾರ, ಕೆ.ಎಚ್.ಆರ್.ಶಿವಾಕ್ಷ ಚಾಡಾ, ದಿ.ಎಂ.ಆರ್.ಅಚರೇಕರ್ ಮುಂತಾದವರು ವಿಶ್ವವಿಖ್ಯಾತ ಕಲಾವಿದರು ಸಿ.ಎನ್.ಪಾಟೀಲರ ಮೇಲೆ ಪ್ರಭಾವ ಬೀರಿದ ಮಹಾ ಶಕ್ತಿಗಳೆ ಆಗಿದ್ದರು. ಜಲವರ್ಣಚಿತ್ರ ರಚನೆಯಲ್ಲಿ ದಿ. ಅಚರೇಕರ ಹಾಗೂ ಪ್ರಕೃತಿ ಚಿತ್ರಗಳನ್ನು ರಚಿಸುತ್ತಿದ್ದ ಶ್ರೀಯುತರ ಗುರುಗಳಾದ ಡಾ.ವಿ.ಎ.ಧೋಂಡ ಅವರ ಅತ್ಯದ್ಭುತ ಪ್ರಭಾವಶಾಲಿ ಶೈಲಿಯಿಂದ ಉತ್ತೇಜಿತರಾದ ಸಿ.ಎನ್.ಪಾಟೀಲರು ಜಲವರ್ಣ ಚಿತ್ರ ರಚನೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಳ್ಳಲು ಶಕ್ತರಾದರು. ತಮ್ಮ ಗುರುಗಳ ಪ್ರಭಾವದಿಂದ ಪಾಟೀಲರು “ವರ್ಣ ಸಂಯೋಜನೆ”ಯಲ್ಲಿ ಭಾರತೀಯತೆಯನ್ನು ವ್ಯಕ್ತಿ ಚಿತ್ರಣದಲ್ಲಿ ಪಾಶ್ಚಿಮಾತ್ಯ ಶೈಲಿಯನ್ನು “ತಮ್ಮ ತನಕ್ಕೆ” ಅಳವಡಿಸಿಕೊಂಡಿದ್ದರು. ಪಾಟೀಲರು ಅಜಂತಾ ಭಿತ್ತಿ ಚಿತ್ರಗಳು,

---

೧೧. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

೧೨. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

ಮೊಗಲ್, ರಜಪೂತ ಮುಂತಾದ ಭಾರತೀಯ ಕಲಾ ಸಂಪ್ರದಾಯಗಳ ವ್ಯಾಪಕವಾದ ಅಭ್ಯಾಸದಿಂದ ಒಪ್ಪಿ "ಸಿದ್ಧ" ಕಲಾವಿದರೆನಿಸಿಕೊಂಡರು.

ಮುಂಬೈಯಲ್ಲಿ ಸೇವೆ

"ಮೇ ತಿಂಗಳ ರಜೆ ನನಗೆ ತುಂಬಾ ಅನುಕೂಲವಾಗಿತ್ತು. ನಮಗೆ ಏಪ್ರಿಲ್, ಮೇ, ಜೂನ್ ಮೂರು ತಿಂಗಳ ರಜೆಗಳಿರುತ್ತಿದ್ದವು. ಆ ಸಮಯದಲ್ಲಿ ಕೆಲಸಕ್ಕೆಂದು ೫ ಕಡೆಗೆ ಅರ್ಜಿ ಹಾಕಿದ್ದೆ. ಎಲ್ಲ ಕಡೆಯಿಂದ ಕರೆ ಬಂತು. ಅದರಲ್ಲಿ ಪಿಟ್ಲಬಾಕ್ಸ್ ಮೆನ್ಯುಫಾಕ್ಚರಿಂಗ್ ಅಮೇರಿಕನ್ ಕಂಪನಿ ನನಗೆ ಸಮೀಪವಾಗಿತ್ತು. ಆ ಕಂಪನಿಯಲ್ಲಿ ನೌಕರನಾದೆ ಕೆಲಸ ತುಂಬಾ ಕಡಿಮೆ, ಕಂಪನಿಗಳ ಬೇಡಿಕೆಯನ್ನು ಪಡೆಯುವಷ್ಟೇ ನನ್ನ ಕಾರ್ಯ ಉಳಿದ ಸಮಯವನ್ನು ತಾವೇ ಕೆಲಸಮಾಡುವ ಮಶಿನ್‌ಗಳನ್ನು ನೋಡುವುದಷ್ಟೇ ನನ್ನ ಕೆಲಸವಾಗಿತ್ತು. ಸದರಿ ಕಂಪನಿಯಲ್ಲಿ ಬೆರಳಚ್ಚುಗಾರ ಕನ್ನಡಿಗನಿದ್ದ ಹೀಗಾಗಿ ನಾವು ಮಾತನಾಡುತ್ತ ಕೂಡ್ರುತ್ತಿದ್ದೇವು. ಒಂದು ಯಂತ್ರದಿಂದ ಮತ್ತೊಂದಕ್ಕೆ ಪಟ್ಟಾದ ಜೋಡಣೆ ಇದ್ದುದರಿಂದ ತುಂಬಾ ಕಡಿಮೆ ಕೆಲಸಗಾರರಿದ್ದರು. ಪಟ್ಟಾದ ಮೇಲಿಂದ ಬಂದು ಬೀಳುವ ಸಾಮಾನುಗಳನ್ನು ತೆಗೆದು ಒಟ್ಟುವುದಷ್ಟೆ ಕೆಲಸವಾಗಿತ್ತು."[೧೩] ಇದು ಒಂದು ವರ್ಷದ ಕಥೆಯಾದರೆ ಮರುವರ್ಷದಲ್ಲಿ ರಾಜ್ಯ ಸರಕಾರದ ಪಡಿತರ ಅಂಗಡಿಗಳ ಸುಪರ್‌ವಾಯ್ಝರ್‌ನಾಗಿ ಸೇರಿಕೊಂಡೆ. ಒಂದು ವರ್ಷ ಬರ್ಮಾಶಿಲ್ ಕಂಪನಿಯ ನೌಕರನಾದೆ. ಹೀಗೆ ದುಡಿಯುತ್ತ ನನ್ನ ಖರ್ಚನ್ನು ನಿಭಾಯಿಸುತ್ತಿದೆ ಎಂದು ಪಾಟೀಲರು ಒಂದು ಕಡೆ ಬರೆಯುತ್ತಾರೆ. ಜೆ.ಜೆ.ಕಲಾಶಾಲೆಯಲ್ಲಿ ಸಿ.ಎನ್.ಪಾಟೀಲರು ತಮ್ಮ ಸೃಜನಶೀಲ ಪ್ರತಿಭೆಯಿಂದ ೧೯೪೯ರಲ್ಲಿ ಉನ್ನತ ಕಲಾ ವ್ಯಾಸಂಗದ ಅಡ್ವಾನ್ಸ್ ಪರೀಕ್ಷೆಯನ್ನು ಚಿತ್ರಕಲಾ ಪರೀಕ್ಷೆಯನ್ನು ರಾಜ್ಯಕ್ಕೆ ಪ್ರಥಮ ರ್‍ಯಾಂಕ್‌ನಲ್ಲಿ ಪಾಸಾಗಿದ್ದಾರೆ. ಅಲ್ಲಿಯೂ ಇವರ ಪ್ರತಿಭೆಯನ್ನು ನೋಡಿ ಅಲ್ಲಿನ ಆಡಳಿತ ಮಂಡಳಿ ಜೆ.ಜೆ. ಕಲಾಶಾಲೆಯಲ್ಲಿ ಕಲಾ ಶಿಕ್ಷಕರಾಗಲು ಆಹ್ವಾನ ನೀಡಿದ್ದಾರೆ.

ಇವೆಲ್ಲದರ ನಡುವೆ ಶ್ರೀ.ಸಿ.ಎನ್.ಪಾಟೀಲರು, ಟಿ.ಸಿ.ಎಚ್. ಹಾಗೂ ಕನ್ನಡ ಸಾಹಿತ್ಯ ರತ್ನ ಹಿಂದಿ ರಾಷ್ಟ್ರಭಾಷೆ ಪರೀಕ್ಷೆಗಳಲ್ಲಿ ಉಚ್ಚ ಶ್ರೇಣಿಯಲ್ಲಿ ಇವರು ಜಲವರ್ಣ ಚಿತ್ರ ರಚನೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ಹೀಗೆ ಈ ಅಧ್ಯಯದಲ್ಲಿ ಶ್ರೀ.ಸಿ.ಎನ್.ಪಾಟೀಲರ ಬಾಲ್ಯ ಪರಿಸರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕಲಾಶಿಕ್ಷಣ, ಪ್ರೇರಣೆ ಕುರಿತು ಚರ್ಚಿಸಲಾಗಿದೆ.

೧೩. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

[illegible]

ಅಧ್ಯಾಯ - ೪

ಸಿ.ಎನ್. ಪಾಟೀಲರ ವೃತ್ತಿಜೀವನ

ಅಧ್ಯಾಯ - ೪

ಸಿ.ಎನ್. ಪಾಟೀಲರ ವೃತ್ತಿಜೀವನ

"ಭಾರತೀಯ ಚಿತ್ರಕಲೆಗೆ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನವಿದೆ. ಸಾವಿರಾರು ವರ್ಷಗಳ ವೈವಿಧ್ಯಮಯ ಸಂಸ್ಕೃತಿಯ ನಾಗರಿಕತೆ ಮತ್ತು ಪರಂಪರೆ ಹೊಂದಿದ ನೆಲವಿದು ಭಾರತ, ಹೀಗಾಗಿ ಇಲ್ಲಿಯ ಕಲೆಗೆ ಹತ್ತು ಹಲವು ಮುಖಗಳು. ಈ ಪರಂಪರೆ ಆದಿಮಾನವನಿಂದ ಆರಂಭಗೊಂಡು ಇಂದಿನ ಆಧುನಿಕ ಮನುಷ್ಯನವರೆಗೂ ಹಾಕಿಕೊಂಡಿದೆ. ಉನ್ನತ ಕಲಾವಂತಿಕೆ ಭಾರತೀಯ ಕಲೆಯ ಮೂಲ ಗುಣ ವಿಭಿನ್ನ ಧರ್ಮ ನಡವಳಿಕೆ ಆಚರಣೆ ಕಲೆಯನ್ನು ಶ್ರೀಮಂತಗೊಳಿಸಿವೆ. ಬಹುಶಃ ಇಲ್ಲಿರುವಷ್ಟು ಸಂಕೀರ್ಣವಾದ ವೈವಿಧ್ಯಮಯ ಬದುಕು, ರೂಢಿ, ಜಗತ್ತಿನಲ್ಲಿ ಹಿನ್ನೆಲೆಯೂ ಸಿಗದು. ಅದಕ್ಕೆ ಇಲ್ಲಿಯ ಪ್ರಾಚೀನ ಕಲೆಯು ಇಂದಿನ ಆಧುನಿಕ ಕಲೆಯವರೆಗೆ ಹಲವು ಶೈಲಿ, ತಂತ್ರ, ಸಿದ್ಧಾಂತಗಳನ್ನು ಒಳಗೊಂಡು ಬೆಳೆಯುತ್ತ ಬಂದಿರುವುದನ್ನು ನಾವು ಗಮನಿಸಬಹುದು.

ಕೆಲವು ಕಲಾವಿದರು ಪಾಶ್ಚಾತ್ಯ ಸಿದ್ಧಾಂತಗಳಿಗೆ ಜೋತುಬಿದ್ದು ಆ ನೆಲೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರೆ. ಇನ್ನೂ ಹಲವರು ಭಾರತೀಯತ್ವದ ದೇಶಿ ಸೊಗಡನ್ನು ಬೆಳೆಸಿಕೊಂಡರು. ಮತ್ತೊಂದು ಕಲಾವರ್ಗವು ಎರಡರ ಅಧ್ಯಯನದ ಸಮನ್ವಯ ಸಾಧಿಸಿ ಹೊಸ ಹೊಸ ಆಲೋಚನೆ, ಚಿಂತನೆಯನ್ನು ತಮ್ಮ ಕಲೆಯ ಅಭಿವ್ಯಕ್ತಿಯ ಮೂಲಕ ಪ್ರಕಟಿಸುತ್ತ ಖ್ಯಾತಿ ಪಡೆಯಿತು. ಅಷ್ಟೇಯಾಕೆ ಗ್ರಾಮೀಣ ಬದುಕನ್ನು ಚಿತ್ರಿಸುತ್ತ ಅಲ್ಲಿಯ ಜಾತ್ರೆ, ಅರ್ಚನೆ, ನಂಬಿಕೆಯ ಜನಪದೀಯ ಅಂಶಗಳನ್ನು ಕಲೆಗೆ ಪ್ರಯೋಗವಾಗಿ ಬಳಸಿದವರೂ ಇದ್ದಾರೆ. ಈ ಬಗೆಯ ವಿಷಯ ಎತ್ತಿಕೊಂಡು ವಾಸ್ತವ ನೆಲೆಯಲ್ಲಿ ಅಭಿವ್ಯಕ್ತಿ ಸಾಧಿಸಿ, ನಾವಿನ್ಯತೆ ಮತ್ತು ಪ್ರಯೋಗಶೀಲ ಗುಣಗಳಿಂದ ಗಮನಾರ್ಹ ಕೃತಿಗಳನ್ನು ರಚಿಸಿದವರ"[೧] ಸಾಲಿಗೆ ಕರ್ನಾಟಕದ ಗದಗ ಜಿಲ್ಲೆಯ ಹಿರಿಯ ಕಲಾವಿದರಾದ ಸಿ.ಎನ್.ಪಾಟೀಲರು ಸೇರುತ್ತಾರೆ.

---

೧. ಪ್ರೊ.ವಿ.ಜಿ.ಅಂದಾನಿ, ವಿ.ಕೆ.ಹುಬಳಿ -ಕಲಾವಿದರ ಪರಿಚಯ ಪುಸ್ತಕ, ಪು-೧

[illegible]

[illegible]

[illegible]

[illegible]

[illegible]



ಸಿ.ಎನ್.ಪಾಟೀಲರು ಗೌರವ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ವಿಜಯಕಲಾ ಮಂದಿರ



ವಿಜಯ ಕಲಾ ಮಂದಿರ




ಸಿ.ಎನ್.ಪಾಟೀಲರು ಚಿತ್ರಕಲಾ ಶಿಕ್ಷಕರಾಗಿ ಸೇವೆಸಲ್ಲಿಸಿದ ಪ್ರೌಢಶಾಲೆ



ಮಾಡಲ್ ಪ್ರೌಢಶಾಲೆಯ ಸಿಬ್ಬಂದಿಯೊಂದಿಗೆ ಸಿ.ಎನ್.ಪಾಟೀಲರು



ಮಾಡಲ್ ಪ್ರೌಢಶಾಲೆಯ ವಿದ್ಯಾರ್ಥಿ ಬಳಗದೊಂದಿಗೆ ಸಿ.ಎನ್.ಪಾಟೀಲರು



ಸ್ಕೌಟ್ ಮತ್ತು ಗೈಡ ಕೆಡೆಟ್‌ರೊಂದಿಗೆ ಸಿ.ಎನ್.ಪಾಟೀಲರು ಅರಸಿಕೇರೆ



ಗದಗ ಮುನ್ಸಿಪಲ್ ಪ್ರೌಢಶಾಲೆಯ ಆಡಳಿತಗಾರರೊಂದಿಗೆ ಸಿ.ಎನ್.ಪಾಟೀಲರು



ಗಣ್ಯ ವ್ಯಕ್ತಿಗಳೊಂದಿಗೆ ಸಿ.ಎನ್.ಪಾಟೀಲರು

ಸಿ.ಎನ್.ಪಾಟೀಲರು ಚಿತ್ರಕಲಾವಿದರಾಗಿ, ಉತ್ತಮ ವಾಗ್ಮಿಯಾಗಿ, ನಾಟಕಕಾರಾಗಿಯೂ ಚಿರಪರಿಚಿತರಾದಷ್ಟೇ ತಮ್ಮ ವೃತ್ತಿ ಬದುಕಿನಲ್ಲೂ ತಮ್ಮ ಆದರ್ಶ, ನಿಸ್ವಾರ್ಥದಿಂದ ಚಿತ್ರಕಲಾ ಶಿಕ್ಷಕರಾಗಿಯೂ ಪ್ರಸಿದ್ಧಿಯನ್ನು ಪಡೆದಿರುವರು. ಒಬ್ಬ ಕಲಾವಿದನು ತನ್ನ ಚಿತ್ರ ರಚನೆಯಲ್ಲಿ ತನ್ಮಯತೆಯನ್ನು ಕಾಪಾಡಿಕೊಂಡು ಉತ್ತಮ ಕೃತಿಯು ಹುಟ್ಟುವಂತೆ, ಅಷ್ಟೇ ಗಾಢವಾದ ತಲ್ಲೀನತೆ ಶಿಕ್ಷಕ ವೃತ್ತಿಯಲ್ಲಿ ಇರಬೇಕಾಗುತ್ತದೆ. ಕಾರಣ ಒಂದು ಕೃತಿಯು ಕೇವಲ ಒಂದು ಚಿತ್ರಪಟವಲ್ಲ. ಅದು ಸಂಪೂರ್ಣ ರಚಿತವಾದ ನಂತರ ಅದರಿಂದ ಸಮಾಜದಲ್ಲಿ ಯಾವ ರೀತಿ ಪ್ರಭಾವಕ್ಕೆ ಒಳಗಾಗುತ್ತದೆ. ಅದರ ಒಳಿತು ಕೆಡಕೇನು ಎಂಬ ಚಿಂತನೆಗೆ ಅಣಿಯಾಗುತ್ತದೆ. ಇದರಲ್ಲಿ ಕಲಾವಿದನ ಜವಾಬ್ದಾರಿ ಹೆಚ್ಚಿರುತ್ತದೆ. ಅಂತೆಯೇ ಒಬ್ಬ ಶಿಕ್ಷಕನ ಜವಾಬ್ದಾರಿಯು ಅಷ್ಟೇ ಇರುತ್ತದೆ. ಉತ್ತಮ ಪ್ರಜೆಯಾಗಲು ಅದರಿಂದ ಸಮಾಜಕ್ಕೆ ದೇಶಕ್ಕೆ ಒಳಿತನ್ನು ನೀಡಬೇಕಾದರೆ ಒಬ್ಬ ಶಿಕ್ಷಕನ ಪಾತ್ರ ಮಹತ್ವ ಪಡೆಯುತ್ತದೆ. ಈ ದೃಷ್ಟಿಯಲ್ಲಿ ಒಬ್ಬ ಆದರ್ಶ ಶಿಕ್ಷಕನಾಗಿ ಸಿ.ಎನ್.ಪಾಟೀಲರು ಆದರ್ಶವಾದವುಗಳೆಲ್ಲವನ್ನು ಮೈಗೂಡಿಸಿಕೊಂಡಿರುವುದು ತಿಳಿದುಬರುವುದು.

ಗೌರವ ಪ್ರಾಚಾರ್ಯರಾಗಿ ಸೇವೆ: ೧೯೪೭

"ಸಾವಿರದ ಒಂಬೈನೂರ ನಲವತ್ತೇಳು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಿ ಬ್ರಿಟೀಷ್ ಸರಕಾರ ಮರಳಿ ತಮ್ಮ ದೇಶಕ್ಕೆ ಹೋದ ಕಾಲ ಭಾರತದೆಲ್ಲೆಡೆ ಸಂಭ್ರಮ, ಅದೇ ವರುಷವೇ ಸಿ.ಎನ್.ಪಾಟೀಲ ಅವರಿಗೆ ಉತ್ತರ ಕರ್ನಾಟಕದ ಪ್ರತಿಷ್ಠಿತ ಕರ್ನಾಟಕ ಲಿಂಗಾಯಿತ ಎಜ್ಯುಕೇಶನ್ ಸೊಸೈಟಿಯ ಸ್ಕಾಲರ್‌ಶಿಪ್ ದೊರೆತಿತ್ತು. ಅದೇ ಪಾಟೀಲರ ಕಲಾಭ್ಯಾಸಕ್ಕೆ ಆಧಾರವಾಗಿತ್ತು. ಇವರ ಸ್ನೇಹಿತ ಕಮಾನುಗಾರ ಮಾತ್ರ ಬಹು ಕಷ್ಟದ ದಿನಗಳಲ್ಲಿ ಮುಂಬೈಯಲ್ಲಿದ್ದು "ಡ್ರಾಯಿಂಗ್ ಶಿಕ್ಷಕ" ತರಬೇತಿಯನ್ನು ಪಾಸು ಮಾಡಿಕೊಂಡರು, ಸಿ.ಎನ್.ಪಾಟೀಲರು ೧೯೪೯ರಲ್ಲಿ ಉಚ್ಚಕಲಾ ತರಗತಿಯ ಅಡ್ವಾನ್ಸ್ ಡ್ರಾಯಿಂಗ್ ಮತ್ತು ಡಿ.ಟಿ.ಸಿ. ಪರೀಕ್ಷೆಯನ್ನು ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಮುಂಬೈ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದು ಪಾಸಾದಾಗ ಅಲ್ಲಿರುವ ಮುಖ್ಯಸ್ಥರು ಪಾಟೀಲರನ್ನು ಅದೇ ಕಲಾಶಾಲೆಯಲ್ಲಿ ಕಲಾ ಶಿಕ್ಷಕರಾಗಲು ಆಹ್ವಾನ ನೀಡಿದರು. ಪಾಟೀಲರು ಅದನ್ನು ನಯವಾಗಿ ತಿರಸ್ಕರಿಸಿದರು ಎಂದು ಈ ಹಿಂದೆಯೇ ಹೇಳಿದೆಯಾದರೂ ಇದರಲ್ಲಿ ಪಾಟೀಲರಿಗೆ ತಮ್ಮ ತಾಯಿನಾಡಿನ ಬಗ್ಗೆ ಇರುವ ಕಾಳಜಿಯನ್ನು ತಿಳಿಯಬಹುದಾಗಿದೆ. ಹಾಗಾಗಿ ಪಾಟೀಲರು ಶಿಕ್ಷಣಮುಗಿಸಿ ೧೯೫೦ರಲ್ಲಿ ಗದಗಕ್ಕೆ ಬಂದರು. ಇದರಿಂದ ಅಕ್ಕಿಯವರ ಆಸೆಗೆ ಬಲ ಬಂದಿತು. ಅಕ್ಕಿಯವರು ಸಿ.ಎನ್.ಪಾಟೀಲರನ್ನು ವಿಜಯ ಕಲಾಮಂದಿರದ ಗೌರವ ಪ್ರಾಂಶುಪಾಲರನ್ನಾಗಿ ಮಾಡಿ ಎ.ಆಯ್.ಕಮಾನುಗಾರ ಅವರನ್ನು ಶಿಕ್ಷಕ ಸಿಬ್ಬಂದಿಯಲ್ಲಿ ಸೇರ್ಪಡೆ ಮಾಡಿಕೊಂಡರು. ಅವರಿಬ್ಬರ ಜೀವನ ನಿರ್ವಹಣೆಗೆ ಗದುಗಿನಲ್ಲಿ ಹೊಸದಾಗಿ ಶ್ರಿ.ಸಿ.ಎನ್.ಪಾಟೀಲರು ಪ್ರಾರಂಭಿಸಿದ್ದ ಮಾಡೆಲ್ ಹೈಸ್ಕೂಲಿನಲ್ಲಿ ಸಿ.ಎನ್.ಪಾಟೀಲ ಅವರನ್ನು ಗದುಗಿನ ಮುನಸಿಫಲ್ ಸ್ಕೂಲ್ ಬೋರ್ಡ್‌ನವರು ನಡೆಸುತ್ತಿದ್ದ ಹತ್ತಾರು ಪ್ರಾಥಮಿಕ ಶಾಲೆಗಳಲ್ಲಿ

ಎ.ಆಯ್.ಕಾಮಾನುಗಾರ ಅವರನ್ನು ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಲು ಅಕ್ಕಿಯವರು ಅನುವು ಮಾಡಿಕೊಟ್ಟರು."[೨]

ಕೆಲವು ವಿದ್ಯಾರ್ಥಿಗಳು ಈ ಕಲಾಶಾಲೆಗೆ ಸೇರ್ಪಡೆಯಾದರು ಈ ಗುಂಪಿನಲ್ಲಿ ಡಂಬಳ, ಮೇರವಾಡೆ, ವೆಂಕಣ್ಣಗುಡಿ, ಕೆ.ಪಿ.ರಾಘುಪ್ಪನವರ, ವಿ.ಟಿ.ಕಾಳೆ, ಅವರು ಪ್ರಮುಖರಾಗಿದ್ದರು. ಮೇರವಾಡೆಯವರನ್ನು ಹೊರತುಪಡಿಸಿ ಇನ್ನುಳಿದವರೆಲ್ಲ ಸ್ಥಿತಿವಂತರಾಗಿದ್ದರು. "ಅವರ ಅಭ್ಯಾಸಕ್ಕೆ ಬೇಕಾಗುವ ಡ್ರಾಯಿಂಗ್ ಕಾಗದ, ಬಣ್ಣ, ಬ್ರಶ್, ಡ್ರಾಯಿಂಗ್ ಬೋರ್ಡ್, ಪೆನ್ಸಿಲ್, ರಬ್ಬರ್, ಡ್ರಾಯಿಂಗ್ ಪೆನ್ನು ಮೊದಲಾದವುಗಳನ್ನು ಅಕ್ಕಿಯವರೇ ಒದಗಿಸಿಕೊಡುವ ಸ್ಥಿತಿಯೊಂದಿಗೆ ಕೆಲವರಿಗೆ ಮುಂಬಯಿಗೆ ಹೋಗಿ ಬರುವ ಹಣದ ವ್ಯವಸ್ಥೆಯನ್ನು ಮಾಡಬೇಕಾಗುತ್ತಿತ್ತು. ಮುಂಬೈ ಗದುಗಿನ ಹುಡುಗರಿಗೆ ಬಹುದೂರ ಬಹು ದೊಡ್ಡ ಪಟ್ಟಣ, ಹೊಸ ಸಂಸ್ಕೃತಿ, ಹೊಸ ಜನಾಂಗ, ಟ್ರಾಮು, ಸಿಟಿ ಬಸ್ಸುಗಳಿಂದ ಸದಾ ಗಿಜಿಗುಟ್ಟುವ ಜನಜಂಗುಳಿ, ಸೈಕಲ್, ಮೋಟರ್‌ಗಳಿಂದ ಕಿವಿಗಡಚಿಕ್ಕುವ ಶಬ್ದಗಳೆಲ್ಲ ಅವರಿಗೆ ಹೊಸವು ಪರೀಕ್ಷೆಗೆಂದು ಮುಂಬೈಯಿಗೆ ಹೋಗುವ ಈ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಮುಂಬಯಿ ಅನುಭವವಿರುವ ಸಿ.ಎನ್.ಪಾಟೀಲ ಮತ್ತು ಕಮಾನುಗಾರ ಅವರನ್ನು ಅಕ್ಕಿಯವರು ಈ ವಿದ್ಯಾರ್ಥಿಗಳೊಂದಿಗೆ ಅವರ ಪರೀಕ್ಷೆ ಮುಗಿಯುವವರೆಗೂ ಅವರ ಜೊತೆಯಾಗಿರಲು ಕಳಿಸಿಕೊಡುತ್ತಿದ್ದರು. ಮುಂಬಯಿಯ ವಸತಿ ಗೃಹದಲ್ಲಿ ಉಳಿದುಕೊಂಡು ಹದಿನೈದು ಇಪ್ಪತ್ತು ದಿನಗಳವರೆಗೆ ಅಲ್ಲಿರುವುದು ಹೆಚ್ಚಿನ ಖರ್ಚಿಗೆ ದಾರಿಯಾಗಿತ್ತು. ಅದಕ್ಕಾಗಿ ಅಕ್ಕಿಯವರು ಮುಂಬೈಯ ಆಗಿನ ವಿಕ್ಟೋರಿಯಾ ಟರ್ಮಿನೆಸ್ ರೈಲ್ವೇ ನಿಲ್ದಾಣದ ಎದುರನಲ್ಲಿರುವ ಗಾಂಧಿ ಮೈಧಾನದ ಸ್ಕಾಟ್ ಕಟ್ಟಡವೊಂದರಲ್ಲಿ ಪುಕ್ಕಟೆಯಾಗಿ ಆ ವಿದ್ಯಾರ್ಥಿಗಳಿಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡುತ್ತಿದ್ದರು. ಇದರಿಂದಾಗಿ ಗದುಗಿನ ಬಡ ಕಲಾಭ್ಯಾಸಿಗಳು ಸುಸೂತ್ರವಾಗಿ ತಮ್ಮ ಪರೀಕ್ಷೆಗಳನ್ನು ಮುಂಬೈಯಲ್ಲಿದ್ದು ಪೂರೈಸುತ್ತಿದ್ದರು. ವ್ಹಿ.ಟಿ.ಕಾಳೆ. ಮತ್ತಿಬ್ಬರು ವಿದ್ಯಾರ್ಥಿಗಳನ್ನು ಸ್ಕೌಟ್‌ಮಾಸ್ಟರ್ ತರಬೇತಿಗಾಗಿ ಗದುಗಿನ ಪಕ್ಕದಲ್ಲಿರುವ ಮಲ್ಲಸಮುದ್ರದಲ್ಲಿ ಏರ್ಪಡಿಸಿದ್ದ ಸ್ಕೌಟ್ ಮಾಸ್ಟರ್ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳುವ ವ್ಯವಸ್ಥೆಯನ್ನು ಅಕ್ಕಿಯವರು ಮಾಡಿಕೊಟ್ಟಿದ್ದರು. ಮುಂಬೈಯ ಶ್ರೀ ಕೇಳ್ಕರ್ ಅವರಿಂದ ತರಬೇತಿ ಪಡೆದ ಶ್ರೀ.ವಿ.ಟಿ.ಕಾಳೆ ಮತ್ತಿತ್ತರರು ಮುಂಬರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿರುತ್ತಿದ್ದರು. ಇದೆಲ್ಲ ಮುಂಬಯಿಯಲ್ಲಿ ಕೆಲವೇ ದಿನಗಳು ಖರ್ಚಿಲ್ಲದೆ ವಾಸಮಾಡುವ ವ್ಯವಸ್ಥೆಯಾಗಿತ್ತು."[೩]

---

೨. ವಿ.ಟಿ.ಕಾಳೆ -ವಜ್ರ ವಿಜಯ-ನೆನಪಿನ ಸಂಚಿಕೆ, ಪು-೧೮-೧೯

೩. ವಿ.ಟಿ.ಕಾಳೆ -ವಜ್ರ ವಿಜಯ-ನೆನಪಿನ ಸಂಚಿಕೆ, ಪು-೧೯-೨೦

"ವಿದ್ಯಾರ್ಥಿಗಳ ಸಂಖ್ಯೆ ನಾಲ್ಕರಿಂದ ಆರಕ್ಕೆ ಆರರಿಂದ ಎಂಟಕ್ಕೆ ಏರತೊಡಗಿತು. ಉಚ್ಚ ಕಲಾಶಿಕ್ಷಣದ ಪ್ರಾರಂಭಿಕ ಹಂತದಿಂದಲೇ ಅಂದರೆ ಎಲೆಮಂಟರಿ ಡ್ರಾಯಿಂಗ್ ಮತ್ತು ಪೇಂಟಿಂಗ್ ತರಗತಿಯಿಂದಲೇ ಡಿಝೈನ್, ಸ್ಟಿಲ್‌ಲೈಫ್, ಪರ್ಸ್ಪೆಕ್ಟಿವ್, ಲೈಫ್ (ಭಾವಚಿತ್ರ) ಪ್ರತಿಮೆಗಳ ಅಭ್ಯಾಸ ಮೊದಲಾದ ವಿಷಯಗಳ ಅಭ್ಯಾಸ ಕಡ್ಡಾಯವಾಗಿತ್ತು ಅಲ್ಲದೇ ಆ ಎಲ್ಲ ವಿಷಯಗಳೂ ಪರೀಕ್ಷಾ ವಿಷಯಗಳಾಗಿರುತ್ತಿದ್ದವು. ಪರ್ಸ್ಪೇಕ್ಟಿವ್ ವಿಷಯವನ್ನು ಸಿ.ಎನ್.ಪಾಟೀಲ ಅವರೂ ಹೇಳಿಕೊಡುತ್ತಿದ್ದರು. ಲೈಫ್‌ಸ್ಟಡಿ ಅಥವಾ ಎದುರಿಗೆ ಜೀವಂತ ವ್ಯಕ್ತಿಗಳನ್ನು ಕುಳ್ಳಿರಿಸಿ ಅವರ ಭಾವ ಚಿತ್ರವನ್ನು ರಚಿಸುವ ಅಭ್ಯಾಸಕ್ಕಾಗಿ ಪುರುಷ ಮಾಡೆಲ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತಿದ್ದರು. ಆದರೆ ಸ್ತ್ರೀ ಮಾಡೆಲ್‌ಗಾಗಿ ಬಹಳ ಕಷ್ಟಸಾಧ್ಯದಿಂದ ಸ್ತ್ರೀಯರನ್ನು ಕರೆದುಕೊಂಡು ಬರಬೇಕಾಗುತ್ತಿತ್ತು. ಹಾಗೆ ಸ್ತ್ರೀಯರನ್ನು ಕರದುಕೊಂಡು ಬರಬೇಕಾಗುತ್ತಿತ್ತು. ಹಾಗೆ ಸ್ತ್ರೀಯರನ್ನು ಕರೆಯಲು ಹೋದ ವಿದ್ಯಾರ್ಥಿಗಳು ಅವರಿಂದ ಬೈಗಳನ್ನೋ ಹೊಡೆತಗಳನ್ನೇ ತಿಂದು ಬರಬೇಕಾಗುತ್ತಿತ್ತು."[೪] "ನಿಮ್ಮೆದುರಿಗೆ ನಾ ಕುಂತು ಪೋಟೋ ತೇಗ್ಸಿಕೋ ಬೇಕ? ಹ್ಯಾಂಗ ಕಾಣ್ತೇನಿ ನಿಮ್ಮ ಕಣ್ಣಾಗ ನಾನು?ಇನ್ನೊಂದ್ಸಲಈ ಹೀಂಗ ಕರಿಯಾಕ ಬಂದ್ರ ನಿಮ್ಮ ಕಾಲಗಣತೀನ ಮುರದ ಕಳಸ್ತೀನಿ"- ಎಂದು ದಬಾಯಿನೆ ಕಳಿಸಿಬಿಡುತ್ತಿದ್ದರು. "ಅದಕ್ಕೆ ಕಾರಣವಿಲ್ಲದಿಲ್ಲ, ಕೇವಲ ವ್ಯಾಪಾರಿ ಕೇಂದ್ರವಾಗಿದ್ದ ಅಂದಿನ ಗದುಗಿನ ಜನತೆಗೆ ಕಲಾ ಸಂಸ್ಕೃತಿ, ಕಲಾಶಿಕ್ಷಣ, ಕಲಾಭ್ಯಾಸಗಳು ಪರಿಚಯವೇ ಇರಲಿಲ್ಲ. ಬಹುದಿನಗಳ ನಂತರ ಒಬ್ಬ ಲಂಬಾಣಿ ಹೆಣ್ಣು ಮಗಳು ಧೈರ್ಯದಿಂದ ಮುಂದೆ ಬಂದಳು. ಅವಳನ್ನೇ ಬೇರೆ ಬೇರೆ ವೇಷಗಳನ್ನು ತೊಡಿಸಿ ಅಭ್ಯಾಸ ಮಾಡಬೇಕಾಯಿತು. ಈ ವೇಳೆಯಲ್ಲಿ ಲಂಬಾಣಿಯ ಲೈಫ್‌ಸ್ಟಡಿ ಪ್ರಾತ್ಯಕ್ಷಿಕತೆಯನ್ನು ಮಾಡುತ್ತಿದ್ದವರು ಖ್ಯಾತ ಕಲಾವಿದರಾದ ಶ್ರೀ.ಎಂ.ಎ.ಚೆಟ್ಟಿ ಮತ್ತು ಶ್ರೀ ಪಾಟೀಲರಾಗಿದ್ದರು. ಈ ವಿಷಯ ಬಹಿರಂಗಗೊಂಡು ಕಲಾ ಸಂಸ್ಕೃತಿಯ ಅರಿವಿಲ್ಲದ ಕೆಲವರು ಕಲಾಮಂದಿರದ ನೀತಿ ನಡಾವಳಿ ಸರಿಯಿಲ್ಲ, ಕೂಲಿ ಮಾಡುವ ಹೆಣ್ಣು ಮಕ್ಕಳನ್ನು ಪುಸಲಾಯಿಸಿ ಕರೆದುಕೊಂಡು ಹೋಗಿ ಅವರನ್ನು ಎದುರಿಗೆ ಕುಳ್ಳಿರಿಸಿ ಅವರ ಪೋಟೋ ಕೈಯಿಂದ ಬಿಡಿಸುತ್ತಾರೆ. ಕುಳ್ಳರಿಸಿ ಅವರ ಪೋಟೋ ಕೈಯಿಂದ ಬಿಡಿಸುತ್ತಾರೆ. ಇದೆಂಥ ನೀತಿ? ಅಕ್ಕಿಯವರು ಇಂಥ ಹೇಯ ಕೆಲಸಕ್ಕೆ ತರುಣರನ್ನು ತೊಡಗಿಸಿ ಗದುಗಿನ ಸಂಸ್ಕೃತಿಯನ್ನು ಹಾಳುಮಾಡುತ್ತಿದ್ದಾರೆ"- ಎಂದು ಆಡಿಕೊಂಡರು. ಅವಹೇಳನವನ್ನು ಮಾಡಿಕೊಂಡರು. ಇದನ್ನು ತಿಳಿದ ಅಕ್ಕಿಯವರ ಕೆಲವರು ಸಹೋದ್ಯೋಗಿಗಳು ಅಕ್ಕಿಯವರ ನೀವು ಕಲಾಮಂದಿರ ಮಾಡಿ ನಿಮ್ಮ ಹೆಸರಿಗೆಕಳಂಕ ತಂದುಕೊಳ್ಳುತ್ತಿದ್ದೀರಿ, ಸುಮ್ಮನೇ ಈ ಕಲಾ ಸಾಲೀನ ಮುಟ್ಟಿ ತಣ್ಣಗೆ ನಿಶ್ಚಿಂತೆಯಾಗಿ ಡ್ರಾಯಿಂಗ್ ಮಾಸ್ತರ ಕೆಲಸ ಮಾಡಿಕೊಂಡು ಹೋಗ್ರಿ"- ಎಂದು ಉಪದೇಶಗಳನ್ನು ನೀಡಿದರು.

---

೪. ವಿ.ಟಿ.ಕಾಳೆ -ವಜ್ರ ವಿಜಯ-ನೆನಪಿನ ಸಂಚಿಕೆ, ಪು-೧೯-೨೦

ಯಾವುದೇ ಮಾತು ಕೇಳದೆ ದಾರಿಯಲ್ಲಿ ಬರುವ ಅಡೆ-ತಡೆಗಳನ್ನು ಅಪವಾದ ನಿಂದೆಗಳನ್ನು ಸಹಿಸಿಕೊಂಡಲ್ಲದೇ ಕಲಾಶಾಲೆಯಂಥ ಒಂದು ದೇವ ಮಂದಿರವನ್ನು ಕಟ್ಟುವುದೂ ಹೇಗೆ ಸಾಧ್ಯ? ಎಂದು ತೀರುಗೇಟು ನೀಡಿದ ಶ್ರೀ.ಟಿ.ಪಿ.ಅಕ್ಕಿಯವರು ಗದಗು ಆಗಿನ ಧಾರವಾಡ ಜಿಲ್ಲೆಯ ಒಂದು ತಾಲೂಕಿನ ಸ್ಥಳವಾಗಿತ್ತು. ಕಾರಣ ಇಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಧಾರವಾಡ ಜಿಲ್ಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಿದ್ದ. ಶ್ರೀ ಕೊಪ್ಪೀಕರ, ಶ್ರೀ.ಮ.ಗು.ಹಂದ್ರಾಳ ತೇರಗಾಂವಕರ ಮೊದಲಾದವರು ಅಕ್ಕಿಯವರ ಸಾಹಸವನ್ನು ಮೆಚ್ಚಿಕೊಂಡು ಅವರ ಕಲಾ ಶಾಲೆಯ ಅಭಿವೃದ್ಧಿಗಾಗಿ ಬೆಂಬಲಿಗರಾಗಿ ನಿಂತರು. ಸರಕಾರದ ಸರ್ವಸವಲತ್ತುಗಳೂ ಅಕ್ಕಿಯವರಿಗೆ ದೊರೆಯುವಂತೆ ಮುತುವರ್ಜಿ ವಹಿಸಿದರು."[೫]

"ಈ ವೇಳೆಗೆ ೧೯೫೨ರಲ್ಲಿ ವಿ.ಟಿ.ಕಾಳೆ ಅವರು ತಮ್ಮ ನಾಲ್ಕನೇ ವರ್ಷದ ಅಂದರೆ ಅಡ್ವಾನ್ಸ್ ಪೇಂಟಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಯುಕ್ತ ಕಲಾ ಶಾಲೆಯ ಶಿಕ್ಷಕ ಸಿಬ್ಬಂದಿಗೆ ಸೇರಿಕೊಂಡರು. ಅಕ್ಕಿಯವರು ತಮ್ಮ ಸಿಬ್ಬಂದಿಯ ಗಾತ್ರವನ್ನು ಹೆಚ್ಚಿಸಿದರು. ಸಿ.ಎನ್.ಪಾಟೀಲರು ಪ್ರಿನ್ಸಿಪಾಲರಾಗಿಯೂ ಶ್ರೀಎಂ.ಎ.ಚೆಟ್ಟಿಯವರು ಉಪಪ್ರಿನ್ಸಿಪಾಲರಾಗಿಯೂ ನೇಮಕಗೊಂಡರಲ್ಲದೇ ಶ್ರೀ.ವಿ.ಟಿ.ಕಾಳೆ, ಶ್ರೀ.ಎ.ಆಯ್.ಕಾಮಾನುಗಾರ, ಶ್ರೀ.ಸಿ.ಟಿ.ರಾಯ್ಕರ ಅವರ ಸಹ ಶಿಕ್ಷಕರಾಗಿ ನೇಮಕಗೊಂಡರು. ಈ ಎಲ್ಲ ಹುದ್ದೆಗಳಿಗೂ ನಿರ್ದಿಷ್ಟವಾದ ಸಂಬಳ ರಹಿತ ಹುದ್ದೆಗಳಾಗಿದ್ದವು. ಅಕ್ಕಿಯವರ ತ್ಯಾಗ ಮನೋಭಾವಕ್ಕೆ ಮನಸೋತು ಅವರ ಅಭಿಮಾನಿಗಳಾಗಿ ಸೇವೆ ಸಲ್ಲಿಸತೊಡಗಿದ್ದರು. ವಿದ್ಯಾರ್ಥಿಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆಯತೊಡಗಿತು. ಈ ಮೊದಲೇ ೧೯೩೫ರಲ್ಲಿ ಶ್ರೀ.ಡಿ.ವಿ.ಹಾಲಭಾವಿ ಅವರು ಧಾರವಾಡದಲ್ಲಿ ಒಂದು ಕಲಾ ಶಾಲೆಯನ್ನು ಸ್ಥಾಪಿಸಿದ್ದರಾದರೂ ಗದುಗಿನ ವಿಜಯ ಕಲಾಮಂದಿರದ ಸ್ಥಾಪನೆಯ ಆರೇಳು ವರುಷಗಳವರೆಗೆ ಉತ್ತರ ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಣದ ಜಾಗೃತಿಯಾಗಿರಲಿಲ್ಲವೆಂದೇ ಹೇಳಬೇಕು"[೬] ಎಂದು ವಿ.ಟಿ.ಕಾಳೆಯವರು ಹೇಳಿದ್ದಾರೆ.

ಸಿ.ಎನ್.ಪಾಟೀಲರು ೧೯೫೦ರಿಂದ ೧೯೬೪ರವರೆಗೆ ಗೌರವ ಪ್ರಾಶುಂಪಾಲರಾಗಿ ನಿಷ್ಠೆಯಿಂದ ನಿರಾಳವಾಗಿ ತಮ್ಮ ಸೇವೆಯನ್ನು ಸಲ್ಲಿಸಿದರು.

ಪ್ರೌಢಶಾಲೆ ಶಿಕ್ಷಕರಾಗಿ: ಸಿ.ಎನ್.ಪಾಟೀಲರು

ಗೌರವ ಪ್ರಾಚಾರ್ಯರಾಗಿ "ಸೇವೆ ಸಲ್ಲಿಸುತ್ತ ಸಿ.ಎನ್.ಪಾಟೀಲರು ನಿರ್ಮಿಸಿದ ಗದಗ ಮಾಡೆಲ್ ಹೈಸ್ಕೂಲ್‌ನಲ್ಲಿ ೧೯೫೨ರಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಪ್ರಾರಂಭಿಸಿದರು."[೭] ಅಲ್ಲಿನ ಸಹ ಶಿಕ್ಷಕರಲ್ಲಿ ಉತ್ತಮ ಸಂಬಂಧ ನಿರ್ಮಿಸಿಕೊಂಡಿದ್ದರು. ಸಹದ್ಯೋಗಿಗಳು ಕೂಡಾ ಪಾಟೀಲರ ಕಲಾ ಹಿರಿಮೆಯನ್ನು ಕಂಡು ಪ್ರೋತ್ಸಾಹಿಸಿರುವುದು ತಿಳಿದು ಬರುತ್ತದೆ. "ಪ್ರೌಢಶಾಲಾ ಹಂತದಲ್ಲಿ ಬರುವ ಗ್ರೇಡ್ ಪರೀಕ್ಷೆಗೆ

---

೫. ವಿ.ಟಿ.ಕಾಳೆ -ವಜ್ರ ವಿಜಯ-ನೆನಪಿನ ಸಂಚಿಕೆ, ಪು-೨೧

೬. ವಿ.ಟಿ.ಕಾಳೆ -ವಜ್ರ ವಿಜಯ-ನೆನಪಿನ ಸಂಚಿಕೆ, ಪು-೨೧

೭. ಡಾ.ಆಯ್.ಎಮ್.ಮಾಸೀದ, ಜ್ಯೋತಿರ್ಗಮಯ -ಸುವರ್ಣ ಮಹೋತ್ಸವ ಸಂಚಿಕೆ, ೧೯೯೬

ಪ್ರತಿಯೊಂದು ವರ್ಗದ ಎಲ್ಲ ವಿದ್ಯಾರ್ಥಿಗಳನ್ನು ಕೂಡುವಂತೆ ಪ್ರೇರೇಪಿಸುತ್ತಿದ್ದರು. ಅಲ್ಲದೆ ಆ ಗ್ರೇಡ್ ಪರೀಕ್ಷೆ ತಯಾರಿಗೆ ಶಾಲಾ ಅವಧಿ ಮುಗಿದ ನಂತರ ವಿಶೇಷ ಕ್ಲಾಸ್ ತೆಗೆದುಕೊಳ್ಳುತ್ತಿರುವುದು ಶಿಷ್ಯವರ್ಗದಿಂದ ತಿಳಿದು ಬರುತ್ತದೆ. ಅಂಥ ವಿಶೇಷ ಕ್ಲಾಸ್‌ಗಳು ಕೇವಲ ಕಾಟಾಚಾರದಂತೆ ಇರಲಿಲ್ಲ. ಪ್ರತಿಯೊಂದು ವಿದ್ಯಾರ್ಥಿಗಳ ವೈಯಕ್ತಿಕ ಕುಂದುಕೊರತೆಗಳನ್ನು ಆಲಿಸಿ, ಧೈರ್ಯ ತುಂಬುತ್ತಿದ್ದರು. ಅವರಿಗೆ ಆರ್ಥಿಕ ತೊಂದರೆ ಇದ್ದರೆ ಅದನ್ನು ಪೂರೈಸುತ್ತಿದ್ದರಿಂದ ಎಲ್ಲಾ ವಿದ್ಯಾರ್ಥಿಗಳು ಮನಸ್ಸಿನಲ್ಲಿ ಯಾವ ಒತ್ತಡವಿಲ್ಲದೆ ತುಂಬು ಮನಸ್ಸಿನಿಂದ ಚಿತ್ರಕಲೆಯನ್ನು ಶ್ರೀಯುತರಿಂದ ಪಡೆಯುತ್ತಿದ್ದರು. ಸ್ವತಃ ಉತ್ತಮ ಕಲಾವಿದರುಗಳಾದ ಪಾಟೀಲರು ಕಲಾ ಅಭ್ಯಾಸದಲ್ಲಿ ತೊಡಗಿದವರ ಮನಸ್ಸು ಯಾವ ಗೊಂದಲವಿಲ್ಲದೆ ಹೋದರೆ ಉತ್ತಮ ಪರಿಣಾಮ ಬೀರುವುದೆಂದು ಅರಿತವರಾಗಿದ್ದರು."[೮] ಈ ಬೋಧನಾ ಪದ್ಧತಿಯನ್ನು ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಂಡಿರುವುದು ತಿಳಿದು ಬರುತ್ತದೆ.

ಕಲಾವಿದರು ತಮ್ಮ ವೃತ್ತಿ ಜೀವನದಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡಿದ್ದರು. "ಮಾಡೆಲ್ ಹೈಸ್ಕೂಲಿನ ಬೇರೆ ವಿಷಯಗಳಾದ ಕನ್ನಡ ಗಣಿತ, ವಿಜ್ಞಾನ, ಭೂಗೋಳ, ಹಿಂದಿ ವಿಷಯಗಳನ್ನು ಹೇಳಿರುವುದು."[೯] ಅವರು ಸ್ವತಹ ಬರೆದ ಅಪ್ರಕಟಿತ ಹಸ್ತಪ್ರತಿಯಿಂದ ತಿಳಿದು ಬರುತ್ತದೆ. "ಶ್ರೀಯುತರು ಪ್ರತಿಭಾಸಂಪನ್ನರು ಆಗಿದ್ದರು. ವಿದ್ಯಾರ್ಥಿಗಳನ್ನು ಬಹುಬೇಗ ತಮ್ಮಲ್ಲಿ ಆಕರ್ಷಿಸುವಂತೆ ಮಾಡುತ್ತಿದ್ದರು. ಹಾಗೇ ಬಂದ ವಿದ್ಯಾರ್ಥಿಗಳ ಕುಂದುಕೊರತೆಯನ್ನು ಕೇಳಿ ಅವರಲ್ಲಿ ಪರಸ್ಥಳದಿಂದ ಬಂದ ಬಡ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಮಾಡುತ್ತಿದ್ದರು. ಅಲ್ಲದೆ ಕಲಾ ಸಾಮಾಗ್ರಿಗಳನ್ನು ಖರೀದಿಸಲು ಹಣದ ವ್ಯವಸ್ಥೆ ಮಾಡಿರುವುದು ತಿಳಿದುಬರುತ್ತದೆ. ಸಿ.ಎನ್.ಪಾಟೀಲರ ಈ ಉದಾರ ನೀತಿಯಿಂದ ವಿದ್ಯಾರ್ಥಿಗಳು ಚಿತ್ರಕಲಾ ಅಭ್ಯಾಸದಲ್ಲಿ ಉತ್ತಮ ಪರಿಣಾಮ ಕಂಡುಕೊಂಡಿರುವುದು ಕಲಾ ಕ್ಷೇತ್ರ ಬೆಳವಣಿಗೆಗೆ ಒಂದು ಉತ್ತಮ ಉದಾಹರಣೆ ಆಗಿದೆ."[೧೦]

ಶ್ರೀಯುತರು ಮಾಡೆಲ್ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದಾಗಲೂ, ತಮ್ಮ ಕೃತಿರಚನೆ ಕೆಲಸವನ್ನು ನಿರಂತರವಾಗಿ ಮಾಡುತ್ತಲೇ ಇದ್ದರು. ಅವರು ತಮ್ಮ ಬಾಲ್ಯ ಜೀವನವನ್ನು ಅವರ ದೊಡ್ಡ ಅತ್ತೆ ಅಂದರೆ ತಮ್ಮ ಪತ್ನಿಯ ದೊಡ್ಡಮ್ಮಳಾದ ಲಕ್ಷ್ಮವ್ವ ಜಂಗಮನಿಯವರ ಮನೆಯಲ್ಲಿಯೇ ಕಳೆದರು. ಮದುವೆಯ ನಂತರವು ಅವರ ಮನೆಯಲ್ಲಿಯೇ ವಾಸವಾಗಿದ್ದರು. ಆ ಮನೆಯು ತುಂಬಾ ಚಿಕ್ಕದಾಗಿತ್ತು. ಅವರಿಗೆ ಕೃತಿ ರಚನೆ, ವಿದ್ಯಾರ್ಥಿಗಳಿಗೆ ವಿಶೇಷ ಕ್ಲಾಸ್ ತೆಗೆದುಕೊಳ್ಳಲು ತುಂಬಾ ತೊಂದರೆ ಆಗುತ್ತಿತ್ತು. ಕಾರಣ ಗದಗ ಶಹರ ಬಸವೇಶ್ವರ ನಗರದ ಶ್ರಿ ವೀರಭದ್ರೇಶ್ವರ ದೇವಸ್ಥಾನದ ಸುತ್ತಲೂ ರೂಂಗಳಿದ್ದವು.

---

೮. ಡಾ.ಯೋಗೇಶನ್ ಸಂದರ್ಶನ -೧೫.೦೭.೨೦೦೯

೯. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ

೧೦. ಡಾ.ಯೋಗೇಶನ್ ಸಂದರ್ಶನ -೧೯.೦೭.೨೦೦೯

[illegible]

ಆದರಲ್ಲಿ ಒಂದನ್ನು ತಮ್ಮ ಕಲಾಕೃತಿ ರಚನೆ ಹಾಗೂ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ವರ್ಗಗಳನ್ನು ತೆಗೆದುಕೊಳ್ಳಲು ಪಡೆದುಕೊಂಡಿದ್ದರು. "ಯಾವುದೇ ರೀತಿಯಿಂದ ಹಣದ ಆಸೆಯಿಂದ ವರ್ಗಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಶ್ರೀಯುತರ ವೃತ್ತಿ ಜೀವನದಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲೆಯ ವಿಶೇಷ ವರ್ಗಗಳನ್ನು ತೆಗೆದುಕೊಳ್ಳುತ್ತಿದ್ದರು. ಗದಗ ಶಹರದಲ್ಲಿಯೇ ಹೆಸರು ವಾಸಿ ಆಗಿದ್ದರು. ಶಾಲಾ ಅವಧಿಯಲ್ಲಿ ತೆಗೆದುಕೊಂಡ ಕ್ಲಾಸಿನಷ್ಟೇ ಕಾಳಜಿಯನ್ನು ವಿಶೇಷ ತರಬೇತಿ ವರ್ಗ ತೆಗೆದುಕೊಂಡಾಗಲೂ ಅಷ್ಟೇ ಒತ್ತು ಕೊಡುತ್ತಿದ್ದುದು ಒಂದು ಹೆಮ್ಮೆಯ ವಿಷಯವೆನಿಸುತ್ತದೆ. ಅವರ ಚಿತ್ರಕಲೆಯ ಬಗ್ಗೆ ಇರುವ ಕಾಳಜಿ ತೋರಿಸುವಂಥದ್ದಾಗಿದೆ."[೧೧]

ಸಿ.ಎನ್.ಪಾಟೀಲರು ತಮ್ಮ ವೃತ್ತಿ ಜೀವನವನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸಿ ಪ್ರೌಢಶಾಲೆಯಲ್ಲಿ ತಮ್ಮದೇ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದರು. ಪ್ರೌಢ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ಹೊರತು ಪಡಿಸಿ ಉಳಿದ ವಿಷಯದ ಶಿಕ್ಷಣವೇ ಚಟುವಟಿಕೆಗೆ ಪ್ರಾಮುಖ್ಯತೆ ಇರುವುದು ಸಾಮಾನ್ಯ ಆದರೆ ಶ್ರೀಯುತರು ತಮ್ಮ ಶಾಲೆಯಲ್ಲಿ ತಮ್ಮ ಕಲೆ, ಬೋಧನಾ ಪದ್ಧತಿಯಿಂದ ಪ್ರಮುಖರೆನಿಸಿದ್ದರು. ೧೯೫೨ರಿಂದ ೧೯೭೮ರವರೆಗೆ ಗದುಗಿನ ಮಾಡೆಲ್ ಹೈಸ್ಕೂಲ್‌ನಲ್ಲಿ ಚಿತ್ರಕಲಾ ಶಿಕ್ಷಕರಾಗಿ ನಿರ್ವಹಿಸಿ ಕಾರ್ಯ ತಮ್ಮ ಸೇವಾವಧಿಯುದ್ದಕ್ಕೂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದವರಾಗಿದ್ದಾರೆಂದು ಹೇಳಲು ಸಂತೋಷವಾಗುತ್ತದೆ.

ಸಿ.ಎನ್.ಪಾಟೀಲರವರ ವ್ಯಕ್ತಿತ್ವ ಮತ್ತು ಹವ್ಯಾಸ

ತಮ್ಮ ಬದುಕಿನಲ್ಲಿ ಒಳ್ಳೆಯ ಹವ್ಯಾಸಗಳನ್ನು ಇಟ್ಟುಕೊಂಡು ಬಂದವರು "ಸಿ.ಎನ್.ಪಾಟೀಲರವರು. ತಮ್ಮ ಬದುಕಿನಲ್ಲಿ ಪಾಲಿಸಿಕೊಂಡು ಒಂದು ಶಿಸ್ತು ಅಚ್ಚುಕಟ್ಟುತನ ನೈತಿಕ ಹಾಗೂ ನಿರ್ಮಲತೆ "ಶಿಸ್ತಿಲ್ಲದ ಸಂಸಾರ ಸುಂದರವಾಗುವುದಿಲ್ಲ. ಅಚ್ಚುಕಟ್ಟುತನವಿಲ್ಲದಿದ್ದರೆ ಜೀವನ ಅಸ್ತವ್ಯಸ್ತವಾಗುತ್ತದೆ ಎಂಬ ಮಾತನ್ನು ಬದುಕಿನುದ್ದಕ್ಕೂ ಅಳವಡಿಸಿಕೊಂಡು ಬಂದವರು ಯಾವುದೇ ಕೆಲಸವಾಗಿರಲಿ ಅದನ್ನು ನಿಷ್ಠೆಯಿಂದ ಮಾಡಬೇಕು. ಇದೇ ರೀತಿಯಾಗಿ ತಮ್ಮ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ, ಧೈರ್ಯ, ಹಾಗೂ ಶಿಸ್ತನ್ನು ಕೂಡಾ ಕಲಿಸಿದವರಾಗಿದ್ದಾರೆ. ಇವರು ಉಡಿಗೆ ಅಷ್ಟೇ ನೀಟಾಗಿ ಶುಭವಾಗಿರುತ್ತಿದ್ದವು. ಅವರು ಧರಿಸುವಂತಹ ಬಟ್ಟೆಗಳು ದೇಸಿಯತೆಯಿಂದ ಕೂಡಿರುತ್ತಿದ್ದವು. ಶರ್ಟ್, ಬಿಳಿಪಾಯಿಜಾಮ್ ಮನೆಯಿಂದ ಹೊರಗಡೆ ಹೊರಟರು ಎಂದರೆ ಇಸ್ತ್ರಿ ಮಾಡಿದ ಶರ್ಟ್, ಪೈಜಾಮ್ ಕೋಟ್ ಧರಿಸುತ್ತಿದ್ದರು. ಗದಗುನಲ್ಲಿಯೇ ಚಿತ್ರಕಲೆಯ ಜೊತೆಗೆ ಉತ್ತಮ ಸಾಹಿತಿಕಾರರು ಮಾತುಗಾರರು ಉತ್ತಮ ಶಿಕ್ಷಕರರ ಹಾಗೂ ಭಾಷಣಕಾರರಾಗಿ ಗುರುತಿಸಿಕೊಂಡವರು. ಗದಗ ಜಿಲ್ಲೆಯಲ್ಲಿ ಯಾವುದೇ ಕಾರ್ಯಕ್ರಮ; ಎಲ್ಲೆ ನಡೆದರು ಉತ್ತಮ ಭಾಷಣಕಾರರಾಗಿದ್ದ ಸಿ.ಎನ್.ಪಾಟೀಲರಿಗೆ ಆಮಂತ್ರಿಸುತ್ತಿದ್ದರು. ಕನ್ನಡ ಭಾಷೆ

೧೧. ಶ್ರೀ.ಎಮ್.ವಿ.ಕುಂಬಾರ ಸಂದರ್ಶನ -೧೯.೦೭.೨೦೦೯

ಅಲ್ಲದೆ ಇಂಗ್ಲೀಷ್ ಭಾಷೆಯಲ್ಲೂ ಕೂಡಾ ಪ್ರಭುತ್ವವನ್ನು ಹೊಂದಿದ್ದರು."[೧೨] ಇದರ ಜೊತೆಗೆ ನಾಟಕ ದೊಡ್ಡಾಟ, ಕಬ್ಬಡಿ, ಆಟಗಳಲ್ಲಿ ಅಳವಡಿಸಿಕೊಂಡವರಾಗಿದ್ದರು, ತಮ್ಮ ಮನೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ಅನ್ನದಾತರಾಗಿದ್ದರು. ಇವರ ಶ್ರೀಮತಿಯವರ ಸಹಕಾರವನ್ನೂ ಇರುವುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ. ನನಗೆ ನೈತಿಕ, ಧೈಯ, ಸ್ಫೂರ್ತಿ, ನೀಡಿದ್ದವರು, "ಗುರುವರ್ಯ ನನ್ನ ತಂದೆ ಸಿ.ಎನ್.ಪಾಟೀಲರು ನಾನು ಇತಿಹಾಸ ಕಲಿಬೇಕೆಂದು ಗುರುಗಳಲ್ಲಿ ಹೇಳಿದಾಗ ಬೇಡಾ ನೀನು ಕನ್ನಡ ವಿಷಯ ಕಲಿಯೆಂದು, ಮಾರ್ಗದರ್ಶನ ನೀಡಿದರು. ಅದರಂತೆ ಕನ್ನಡ ಎಂ.ಎ.ಮಾಡಿದೆ, ಸೊಂಡೂರು ಘೋರ್ಪಡೆ ಮಹಾರಾಜರ ಕಾಲೇಜಿನಲ್ಲಿ ಶಿಕ್ಷಕರ ಹುದ್ದೆಗೆ ಪ್ರಕಟಿಸಲಾಗಿತ್ತು. ಅದೇ ಸಮಯದಲ್ಲಿ ನನಗೆ ರೈಲ್ವೆಯ ಟೀಕೆಟನ್ನು ತೆಗೆಸಿ, ಹೋಗುವ ಬರುವ ಖರ್ಚನ್ನು ಕೊಟ್ಟು ಕಳಿಸಿದರು. ಅದರಲ್ಲಿ ನನ್ನನ್ನು ಆಯ್ಕೆ ಮಾಡಿದರು. ಇದಕ್ಕೆಲ್ಲ ಮೂಲ ಕಾರಣಿಕರ್ತರು ನನ್ನ ಗುರುವರ್ಯ ಸಿ.ಎನ್.ಪಾಟೀಲರು" ಎಂದು ಇವರ ಆತ್ಮೀಯ ವಿದ್ಯಾರ್ಥಿಯಾಗಿದ್ದ ಡಾ.ಯೋಗೇಶನ್ ಕುಂದಗೋಳರವರು ಹೇಳುತ್ತಾರೆ.

ಇದರಂತೆ ಸಿ.ಎನ್.ಪಾಟೀಲರ ವಿದ್ಯಾರ್ಥಿಗಳಾದ ಕುಂಬಾರ, ಉಮಚಗಿ ಶ್ರೀ ಎನ್.ಎ.ಹರ್ಲಾಪೂರ, ಶ್ರೀ.ಬಿ.ಎ.ಪಾಟೀಲರು ಅವರು ವಿದ್ಯಾರ್ಥಿ ದೆಸೆಯಲ್ಲಿ ಕಲಿಸಿದ ನೈತಿಕತೆ ಗೌರವ ಶಿಸ್ತು ಇಂದಿಗೂ ನಾವು ಪಾಲಿಸುತ್ತ ಬಂದಿದ್ದೇವೆ ಎಂದು ಹೇಳಿದರು.

ಶ್ರೇಷ್ಠ ಕಲಾವಿದರಾಗಿ ಸಿ.ಎನ್.ಪಾಟೀಲರು

ಸಿ.ಎನ್.ಪಾಟೀಲರ ಕಲಾಕೃತಿಗಳ ಸಂಖ್ಯೆ ಸಾವಿರಕ್ಕೂ ಹೆಚ್ಚು ಮಿಕ್ಕಿದ್ದು, ಅವುಗಳಲ್ಲಿ "ಕರ್ನಾಟಕ ರಾಜರಾಜೇಶ್ವರಿ ಭೂವನೇಶ್ವರಿ ದೇವಿಯ ಚಿತ್ರ ಅಂದಿನ ಮೈಸೂರು ರಾಜ್ಯದ ಮಾನ್ಯ ಸಚಿವರೂ, ಕರ್ನಾಟಕ ಏಕೀಕರಣ ಹೋರಾಟದ ಅಧ್ವರ್ಯಗಳೂ ಆದ ದಿ.ದೊಡ್ಡಮೇಟಿ ಅಂದಾನಪ್ಪನವರ ಆದೇಶದ ಮೇರೆಗೆ ಭವ್ಯಗಾತ್ರದಲ್ಲಿ ಚಿತ್ರಿತವಾಗಿದ್ದು, ಎಲ್ಲ ಕನ್ನಡಿಗರಿಂದ ಮೆಚ್ಚುಗೆ ಪಡೆದ ಚಿತ್ರವಾಗಿದೆ. ಅವರು ಚಿತ್ರಿಸಿದ ರಾಗಮಾಲಾ ಚಿತ್ರಗಳಲ್ಲಿ "ಶ್ರೀರಾಗ" ಚಿತ್ರವು ಮೈಸೂರು ದಸರಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನವನ್ನು ತಂದುಕೊಟ್ಟ ಕಲಾಕೃತಿಯಾಗಿದೆ. ಪುರುಷರಾಗವೆಂದೇ ಪರಿಗಣೆಸಲ್ಪಟ್ಟ ಶ್ರೀ ರಾಗವನ್ನು ಸ್ತ್ರೀ ರಾಗವೆಂದು ಚಿತ್ರಿಸಿದ ಪಾಟೀಲರ ಕಲ್ಪನೆ ಮನೋಜ್ಞವಾಗಿದೆ. ಚೇತೋಹಾರಿಯೂ ಆಗಿದೆ. ಸಿ.ಎನ್.ಪಾಟೀಲರ ಒಂದೊಂದು ಕಲಾಕೃತಿಗಳು ವೈಶಿಷ್ಟ್ಯಪೂರ್ಣವಾದ ಕಲಾಕೃತಿಗಳಾಗಿದ್ದು, ಸಿ.ಎನ್.ಪಾಟೀಲರ ಅವರ ಕಲ್ಪನಾ ವಿಲಾಸದ ವೈವಿಧ್ಯತೆಗೆ ಕನ್ನಡಿಗಳಾಗಿವೆ. ಗದಗ ಬೇಟಗೇರಿ ನಗರಸಭಾ ಭವನದಲ್ಲಿರುವ ಒಟ್ಟು ೧೬ಚಿತ್ರಗಳಲ್ಲಿ ಶ್ರೀಯುತರ ೯ ಚಿತ್ರಗಳು ಭವನವನ್ನು ಅಲಂಕರಿಸಿದ್ದವು. ಅದರಲ್ಲಿ ಈಗ ಉಳಿದದ್ದು ಕೇವಲ ೭ ಕಲಾಕೃತಿಗಳು ಮಾತ್ರ. ಅಲ್ಲದೇ, ದಿಲ್ಲಿ, ಕಲ್ಕತ್ತಾ, ಮುಂಬಯಿ, ಮೈಸೂರು, ಬೆಂಗಳೂರು, ಧರ್ಮಸ್ಥಳ, ದಾವಣಗೆರೆ, ಚಿತ್ರದುರ್ಗ, ವಿಜಾಪುರ, ಧಾರವಾಡಗಳಲ್ಲದೇ ಹೊರರಾಷ್ಟ್ರವಾದ ಅಮೇರಿಕಾ, ಕೆನಡಾ ಮುಂತಾದ ಪರರಾಷ್ಟ್ರಗಳಲ್ಲಿಯೂ

---

೧೨. ಡಾ.ಯೋಗೇಶನ್ ಸಂದರ್ಶನ -೧೯.೦೭.೨೦೦೯

[illegible]

ಸಿ.ಎನ್.ಪಾಟೀಲರವರ ಕಲಾಕೃತಿಗಳು ಕಲಾ ಪ್ರೇಮಿಗಳು, ವಿಖ್ಯಾತ ವ್ಯಕ್ತಿಗಳ ಸಂಗ್ರಹಗಳಲ್ಲಿ ಸೇರಿ ಹೋಗಿವೆ. ಸಿ.ಎನ್.ಪಾಟೀಲರು ತೈಲವರ್ಣ, ಜಲವರ್ಣ, ಪೇಸ್ಟಲ್, ಪೋಸ್ಟರ್ ಕಲರ್ಸ, ಪೆನ್ಸಿಲ್, ಪೆನ್ನು ಇಂಕ್, ಹೀಗೆ ಹತ್ತಾರು ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸುವಲ್ಲಿ ಪ್ರಾವೀಣ್ಯತೆಯನ್ನು ಪಡೆದವರಾಗಿದ್ದಾರೆ. ಒಮ್ಮೆ ಮಾತ್ರ ನೋಡಿದ ವ್ಯಕ್ತಿ ಭಾವಚಿತ್ರವನ್ನು ಕೇವಲ ೫-೬ ನಿಮಿಷಗಳಲ್ಲಿ ನೆನಪು ಮಾತ್ರದಿಂದಲೇ ತದ್ರೂಪವಾಗಿ ಚಿತ್ರಿಸುವ ಶ್ರೀಯುತರ ಕೈಚಳಕದ ವೈಖರಿ ವಿಸ್ಮಯಕರವಾಗಿದೆ. ಡಾ.ರಾಧಾಕೃಷ್ಣನ್, ಕೆ.ಹನುಮಂತಯ್ಯ, ಧರ್ಮವೀರ, ರಾಣಾಪ್ರತಾಪಸಿಂಗ್, ರವೀಂದ್ರನಾಥ ಠಾಗೋರ, ವಿಶ್ವೇಶ್ವರಯ್ಯ ಮುಂತಾದ ರಾಷ್ಟ್ರನಾಯಕರ ಭಾವಚಿತ್ರಗಳನ್ನು ರಚಿಸಿದ್ದಾರೆ. ಈ ಕಲಾಕೃತಿಗಳು ಸಾರ್ವಜನಿಕರ ಮನ್ನಣೆಗಳಿಸಿದವುಗಳಾಗಿವೆ."[೧೩] ಸಮಾಜ, ಸುಧಾರಕ, ಜಗಜ್ಯೋತಿ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧಲಿಂಗಸ್ವಾಮಿಗಳು, ಗಾನಯೋಗಿ ಡಾ.ಪಂಡಿತ ಪುಟ್ಟರಾಜಗವಾಯಿಗಳ ಮುಂತಾದ ಶಿವಶರಣರ ಜೀವನ ಚರಿತ್ರೆಯನ್ನು ರೂಪಿಸುವ ಅಸಂಖ್ಯಾ ಕಲಾಕೃತಿಗಳನ್ನು ರಚಿಸಿದ ಕೀರ್ತಿ ಸಿ.ಎನ್.ಪಾಟೀಲರದು. ಭಾರತೀಯ ಸಾಂಪ್ರದಾಯಿಕ ಚಿತ್ರಕಲಾ ಶೈಲಿಯಲ್ಲಿಯೇ ತಮ್ಮ ಜೀವನವನ್ನು ನಡೆಸಿಕೊಂಡು ಬಂದ ಸಿ.ಎನ್.ಪಾಟೀಲರು "ನವ್ಯ ಕಲೆ" ತಿರಸ್ಕರಿಸುವುದಿಲ್ಲ "ಕಲೆಗೆ ಹೊಸ ತಿರವು ಬೇಕೆ ಬೇಕು, ಅದಕ್ಕಿರುವ ಚೌಕ್ಕಟ್ಟನ್ನು ಕಲಾವಿದ ಮೀರಿ ವರ್ತಿಸಬಾರದು" ಎಂಬ ಮನೋಭಾವನೆಯನ್ನು ಹೊಂದಿದ ಸಿ.ಎನ್.ಪಾಟೀಲರು ನವ್ಯ ಶೈಲಿಯಲ್ಲಿ ಕಲಾಕೃತಿಗಳ ರಚನೆಯನ್ನು ಮಾಡಿದ್ದಾರೆ.

"ಸಿ.ಎನ್.ಪಾಟೀಲರ ಈ ತಪ್ಪಸ್ಸು ನಾಡಿನ ಮಠಮಾನ್ಯಗಳಿಂದ ಅವರಿಗೆ ಅನೇಕ ಬಿರುದುಗಳನ್ನು ತಂದಿವೆ. ರಾಜ್ಯದ ಪಠ್ಯಪುಸ್ತಕ ರಚನಾ ಸಮಿತಿಯ ಚಿತ್ರಕಲಾ ವಿಭಾಗದ ಸದಸ್ಯರಾಗಿ ಪಠ್ಯಪುಸ್ತಕ ಸಮಿತಿಯ ರಾಜ್ಯಮಟ್ಟದ ಸಮ್ಮೇಳನದ ಕಲಾ ವಿಭಾಗದ ಸದಸ್ಯರಾಗಿ, ರಾಜ್ಯದ ಪಠ್ಯ ಪುಸ್ತಕಗಳ ಆಕರ್ಷಣೆಗೆ ಹಲವಾರು ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ಸೇವೆ ಸಲ್ಲಿಸಿದ್ದಾರೆ. ಸಿ.ಎನ್.ಪಾಟೀಲರು ಮೈಸೂರು ದಸರಾ ಕಲಾ ಪ್ರದರ್ಶನ ಸಮಿತಿಯ ಸದಸ್ಯರಾಗಿ, ಧಾರವಾಡದ ಕರ್ನಾಟಕದ ಆರ್ಟ್ ಸೊಸೈಟಿ, ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು ಮುಂತಾದ ಸಂಘ-ಸಂಸ್ಥೆಗಳ ಸದಸ್ಯರಾಗಿ, ಪದಾಧಿಕಾರಿಯಾಗಿ, ಸೇವೆಯನ್ನು ಸಲ್ಲಿಸಿದ್ದಾರೆ. ಅಲ್ಲದೆ ಗದಗ್ ವಿಭಾಗದ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿದ್ದಾಗ ಅವರಿಂದ ಸಂಘಟಿತವಾದ ಕಲಾ ಪ್ರದರ್ಶನ ೬೦ ಸಾವಿರ ಜನರಿಂದ ವೀಕ್ಷಿಸಲ್ಪಟ್ಟು ಜನಾಧರಣೀಯ ವಿಕ್ರಮವನ್ನೇ ಸ್ಥಾಪಿಸಿತು.

ಸಾಹಿತ್ಯರತ್ನ ಪದವೀಧರರಾದ ಸಿ.ಎನ್.ಪಾಟೀಲರು ಕಲೆಯ ಬಗೆಗೆ ಹಲವಾರು ಲೇಖನಗಳನ್ನು ಬರೆದಿರುವರಲ್ಲದೇ ಎರಡು ನೂರಕ್ಕೂ ಮಿಕ್ಕ ಕಲೆಯ ವಿಷಯವಾಗಿ ಉಪನ್ಯಾಸಗಳನ್ನು ನೀಡಿದ್ದಾರೆ."[೧೪]

---

೧೩. ವಿ.ಟಿ.ಕಾಳೆ, ದೃಶ್ಯಕಲೆಯ ಆರಾಧಕರು -೧೯೯೦

೧೪. ಎಮ್.ಎ.ಹರ್ಲಾಪೂರ ಸಂದರ್ಶನ -೦೪.೦೬.೨೦೦೯

[illegible]

ಸಿ.ಎನ್.ಪಾಟೀಲರ ನಾಟಕಗಳು

"ಕಲಾಚಾರ್ಯ ಸಿ.ಎನ್.ಪಾಟೀಲ್‌ರು ಅಭಿನಂದನಾ ಸಮಾರಂಭದ ಅಂಗವಾಗಿ ಇವರು ವ್ಯಕ್ತಿಯಲ್ಲಿಯ ನಾಟಕ ಬರೆಯಲು ತೊಡಗಿದರು. ಶ್ರೀಯುತರು ನಾಟಕ ರಂಗದಲ್ಲಿಯೂ ಕೃಷ್ಣನ ಪಾತ್ರ ಮಾಡಿದವರು. ಚಿಕ್ಕಮ್ಮ, ರಾಷ್ಟ್ರವೀರ, ನಾಗರಿಕ, ಶಾಂತಿ ಸಾಮ್ರಾಟ ಮೊದಲಾದ ನಾಟಕಗಳನ್ನು ನಿರ್ದೇಶಿಸಿದ್ದರು. ಸಿ.ಎನ್.ಪಾಟೀಲರು ಇವರು ವಿಜಯಕಲಾಮಂದಿರದಲ್ಲಿ ಇದ್ದಾಗ ಈ ಶಾಲೆಯ ಕಟ್ಟಡಕ್ಕಾಗಿ ದುಡ್ಡನ್ನು ಕೂಡಿಸಬೇಕಾಗಿತ್ತು. ಆಗ ಇವರು ರಾಷ್ಟ್ರವೀರ ನಾಟಕವನ್ನು ರಚಿಸಿ ಅದಕ್ಕೆ ಮಾನ್ಯ ಸರಕಾರದಿಂದ ಐದು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಪಡೆದರು. ಈ ನಾಟಕವನ್ನು ಪಾಟೀಲರೇ ನಿರ್ದೇಶಿಸಿದರು. ಅಲ್ಲದೇ ಇದರಲ್ಲಿ ಮುಖ್ಯ ಪಾತ್ರಧಾರಿಯಾಗಿಯೂ ಈ ನಾಟಕವನ್ನು ನೂರಾರು ಪ್ರಯೋಗಗಳನ್ನು ಮಾಡಿದರು."[೧೫] ಅಲ್ಲದೆ ಮೈಸೂರು ದಸರಾದಲ್ಲಿ ಪ್ರದರ್ಶನದಲ್ಲಿಯೂ ಅಭಿನಯಿಸಲ್ಪಟ್ಟಿತು. ಮಾನ್ಯ ಮಂತ್ರಿಯವರು ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಹಿಟ್ ಲಾರ್ಡ್ ಸಿಪ್, ದಿ.ಹೊಂಜೀ, ಗೌಡರವರು ಅರ್ಧಗಂಟೆ ಈ ನಾಟಕವನ್ನು ನೋಡಿ ಛಪ್ಪಿಕೊಂಡರು. ಈ ನಾಟಕವನ್ನು ರಾಜ್ಯದಲ್ಲೆಡೆಯೂ ಅಭಿನಯಿಸುವಂತಿರಬೇಕು ಎಂದು ಇವರು ನುಡಿದರು ಇವರು ಸಿ.ಎನ್.ಪಾಟೀಲರನ್ನು ಗೌರವಿಸಿದರು.

"ಕಲಾಚಾರ್ಯ ಶ್ರೀಯುತರು ನಾಟಕ ರಂಗದಲ್ಲಿಯೂ ಕೃಷಿ ಮಾಡಿದವರು. ಸಿ.ಎನ್.ಅವರು ಅಣ್ಣ ತಮ್ಮ, ಟಿಪ್ಪುಸುಲ್ತಾನ್, ದಸರ, ಬೂದಿ ಮುಚ್ಚಿದ ಕೆಂಡಸ ಮಾಂಗಲ್ಯ ಭಾಗ್ಯ, ಮತ್ತು ಗುರು ಕಾಣಿಕೆ ಮೊದಲಾದ ನಾಟಕಗಳಲ್ಲಿ ಪ್ರಧಾನ ಪಾತ್ರ ವಹಿಸಿದವರು. ಸಿ.ಎನ್.ಪಾಟೀಲರು ಜಗಜ್ಯೋತಿ ಬಸವೇಶ್ವರ ನಾಟಕವನ್ನು ನಿರ್ದೇಶಿಸಿದಲ್ಲದೆ ಅದರಲ್ಲಿ ಬಿಜ್ಜಳನ ಪಾತ್ರ ವಹಿಸಿದರು. ರಕ್ತಗತವಾಗಿರುವ ಈ ಕಲೆಯಿಂದಾಗಿ ಅವರು ಈಗಲೂ ತಮ್ಮ ಭಾವನಾ ಸಾಮರ್ಥ್ಯ ಮರೆದಿದ್ದಾರೆ."[೧೬]

"ಸಿ.ಎನ್.ಪಾಟೀಲರು ಇವರು ನಾಟಕದಲ್ಲಿ ನಾಟ್ಯ ಕಲೆಯ ಹುಚ್ಚಿನಿಂದಾಗಿ ಪ್ರತಿವಾರದ ನಂತರ ಇವರು ರಾಯಲ್ ಏರಪೋರ್ಸ್ ಹೌಸ್‌ದಲ್ಲಿ ಜಗತ್ ಪ್ರಸಿದ್ಧ ಶ್ರೇಷ್ಠ ಮಟ್ಟದವರಾಗಿದ್ದರು. ದಿ.ಶ್ರೀ.ಪೃಥ್ವಿರಾಜ ಕಪೂರವರೂ ನಟಿಸುತ್ತಿದ್ದರು. ಶಕುಂತಲಾ ಪುರಾಣ, ದಿವಾರ ಹಾಗೂ ಗದ್ದಾರ ನಾಟಕಗಳನ್ನು ಇವರು ವೀಕ್ಷಿಸುತ್ತಿದ್ದರು. ಆವಾಗ ದಿ.ಕಪೂರರವರ ನಾಟಕ ಕಂಪನಿಯ ಲೈಟಮೆನರಾಗಿದ್ದರು. ಅವರು ಮಿತ್ರತ್ವ ಹಾಗೂ ಪಾವನ ದಿ ಪೃಥ್ವಿರಾಜರವರ ಅಭಿನಯದಿಂದ ತುಂಬಾ ಪ್ರಭಾವಿತನಾದೆ ಎಂದು ಹೇಳುತ್ತಾರೆ."[೧೭]

---

೧೫. ವಿ.ಟಿ.ಕಾಳೆ, ದೃಶ್ಯಕಲೆಯ ಆರಾಧಕರು -೧೯೯೦

೧೬. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ ಲೇಖನ

೧೭. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ ಲೇಖನ

ಸಿ.ಎನ್.ಪಾಟೀಲರವರ ನಾಟಕದಲ್ಲಿ ಬಹಳ ಜನ ಮಾತುಗಾರರಲ್ಲಿ ಕನ್ನಡಿಗರು ಸಾಕಷ್ಟು ಜನರಿದ್ದರು. ಅವರನ್ನು ಒಂದೇ ವೇದಿಕೆಯ ಮೇಲೆ ತಂದು ಅವರಲ್ಲಿ ನಾಟ್ಯ ಕಲೆಯ ಕೆಚ್ಚನ್ನುಂಟು ಮಾಡಿ ಕನ್ನಡಿಗರ ಸಂಘವನ್ನು ಸ್ಥಾಪಿಸಿದರು. ಸಿ.ಎನ್.ಪಾಟೀಲರು ಕನ್ನಡಿಗರ ಸಹಕಾರದಿಂದ ಕುರುಕ್ಷೇತ್ರ ನಾಟಕವನ್ನು ನಿರ್ದೇಶಿಸಿದರು. ದಾವೋದರ ನಾಟ್ಯ ಸಂಗದ ಸಂಚಾಲಕರನಾಗಿದ್ದರು ಅಭಿನಯಿಸಲಾಯಿತು. ಮತ್ತು ಮುಖ್ಯಪಾತ್ರಧಾರಿಯಾಗಿದ್ದರು. ಇವರ ಅಭಿನಯವು ಸರ್ವರ ಆಧಾರ ಅಭಿಮಾನಕ್ಕೆ ಪಾತ್ರವಾಯಿತು. ಮುಂದೆ ಇವರು ಅಮೇರಿಕನ್ ಉತ್ಪಾದನಾ ಸಂಸ್ಥೆಯ ನೌಕರನಾಗಿದ್ದಾಗಲೂ ಸಹ ಇವರು ಹೇಮರೆಡ್ಡಿ ಮಲ್ಲಮ್ಮ ನಾಟಕವನ್ನು ಅಭಿನಯಿಸಿದರು. ಮುಂದೆ ಇವರು ಬಡನತದ ಭೂತ, ಪ್ರಪಂಚ ಪರೀಕ್ಷೆ ಮುಂತಾದ ನಾಟಕಗಳ ನಿರ್ದೇಶಕನಾಗಿ ಮುಖ್ಯ ನಟನಾಗಿ ರಂಗಭೂಮಿಗೆ ತಂದೆಯಾದರು. ಸಿ.ಎನ್.ಪಾಟೀಲರು.

ಇವರು ಅದೇ ಅವಧಿಯಲ್ಲಿ ಸಂಸಾರ ನೌಕೆ ಚಲನಚಿತ್ರದಲ್ಲಿ ಮಾದುವಿನ ಪಾತ್ರಧಾರಿಯಾಗಿದ್ದ ಸಿ.ಎಂ.ಮಾದವರಾಜ ಅವರು ಮೈತ್ರಿಯಿಂದಾಗಿ ಸದರ ನಾಟಕದಲ್ಲಿಯೂ ಸಹ ಅಭಿನಯಿಸಿದ್ದರು. ಧಾರವಾಢ ನಾಬೂಲಿಯ ಉಪನಿರ್ದೇಶಕರಾಗಿದ್ದಾಗ ಎ.ಇ.ನಟೇಶನವರ ಮಿತ್ರನಾಗಿದ್ದ ನಾನು ಅವರ ಅಭಿಮತದಂತೆ. ಇವರ ಶಾಂತಿ ಸಾಮ್ರಾಟ ದೊಡ್ಡಾಟವನ್ನು ರಚಿಸಿದರು. ಸದರಿ ದೊಡ್ಡಾಟವನ್ನು ರಚಿಸಿದರು. ಈ ದೊಡ್ಡಾಟವು ಬಾನೂಲಿ ಮೂಲಕ ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಅಲಂಕಾರ ಸಮಿತಿಯ ಚೇರಮನ್ ಹಾಗೂ ವಚನ ಸಂಗೀತ ಗೋಷ್ಠಿಯ ನಿರ್ಣಾಯಕನಾಗಿ ಕಾರ್ಯ ಮಾಡಿದ್ದಾರೆ. ಇವರು ಅದೇ ಸಮಯ ದಿ. ಪೂಜ್ಯ ಜಗದ್ಗುರುಗಳವರ ಅಣತೆಯಂತೆ ಕೇವಲ ಹನ್ನೊಂದು ದಿವಸಗಳಲ್ಲಿ ಕಲ್ಯಾಣ ಕ್ರಾಂತಿ ನಾಟಕದ ನಿದೇರ್ಶಕನಾಗಿ ಮುಖ್ಯ ಪಾತ್ರಧಾರಿಯಾಗಿ ಅಭಿನಯಿಸಿದ್ದಾರೆ ಸಿ.ಎನ್.ಪಾಟೀಲರು.

"ಕಲಾಚಾರ್ಯ ಸಿ.ಎನ್.ಪಾಟೀಲರು ಕೇವಲ ಕಲಾವಿದರಾಗಿರದೆ. ದೊಡ್ಡಾಟವನ್ನು ಬರೆದಿರುತ್ತಾರೆ. ಇವರು ದೊಡ್ಡಾಟದಲ್ಲಿ ಕೃಷ್ಣನ ಪಾತ್ರವನ್ನು ಮಾಡಿದ್ದಾರೆ. ಮುಂದೆ ಇವರು ಗುರುವಾಗಿಸಿಕೊಂಡವರು ಅಲ್ಲದೇ ಗುಬ್ಬಿ ವೀರಣ್ಣ ಪ್ರಶಸ್ತಿಗಳನ್ನು ಪಡೆದರು. ಶ್ರೀ.ಎಚ್.ಎನ್.ಹೂಗಾರರು ತಾವು ಬರೆದ ನಾಟಕಗಳ ಪ್ರಥಮ ಪಠಣ ನನ್ನ ಮುಂದೆಯಾಗುತ್ತಿತ್ತು. ಇವರ ಪಾತ್ರಗಳ ವೈವಿಧ್ಯತೆಗಾಗಿ ಅವರಿಗೆ ಓದಲು ರಾವ್‌ಬಾಹಾದ್ದೂರರವರು ರಚಿಸಿದ ರಾಮಾಯಣ ನನ್ನ ಮಿತ್ರರಾಗಿದ್ದವು. ತ.ರಾ.ಸು.ಅವರಿಗೆ ಹಂಸಗೀತೆ, ರಕ್ತರಾತ್ರಿ, ಕಂಬನಿಯ ಕವಲು, ಮೊದಲಾದ ಕಾಂದಬರಿಗಳನ್ನು ಅಲ್ಲದೇ ಇವರ ಅಳಿಯ ಶ್ರೀ ದೇವೇಂದ್ರ ಕುಮಾರ ಸಾವರಿಗೆ ಸಹಕಾರ ಕೊಟ್ಟು ಇವರಿಗೆ ಪ್ರೋತ್ಸಾಹಿಸುತ್ತಿದ್ದರು."[೧೮]

---

೧೮. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ ಲೇಖನ



ದೇಹಲಿಯ ಲಲಿತಕಲಾ ಅಕಾಡೆಮಿ ಅಧ್ಯಕ್ಷರಿಂದ ಸನ್ಮಾನ



ದೆಹಲಿ ಲಲಿತಕಲಾ ಅಕಾಡೆಮಿ ನಡೆಸಿದ ಆರ್ಟ್ ಮತ್ತು ಕ್ರಾಫ್ಟ್ ಶಿಬಿರದಲ್ಲಿ
ಸಿ.ಎನ್.ಪಾಟೀಲರು



ಜೆ.ಎನ್.ಕಲಾಶಾಲೆಯಲ್ಲಿ ಸಿ.ಎನ್.ಪಾಟೀಲರ ಪ್ರಾತ್ಯಕ್ಷಿಕೆ



ಭಾಷಣದಲ್ಲಿ ನಿರತರಾದ ಸಿ.ಎನ್.ಪಾಟೀಲರು



ಮಕ್ಕಳ ಚಿತ್ರಕಲೆಯನ್ನು ವೀಕ್ಷಿಸುತ್ತಿರುವ ಸಿ.ಎನ್.ಪಾಟೀಲರು

"ಇವರ ಜೀವನದಲ್ಲಿ ಇನ್ನೊಂದು ವಿಷಯ ಎಂದರೆ ಇವರ ತಂದೆಯವರ ಮಿತ್ರರಾದ ಕಲ್ಲೂರ ನಿಂಗಪ್ಪನವರು ಗೊಂಬೆಯಾಟ ಕಲಿತರು. ಇವರಲ್ಲಿ ಸಹ ಮುಖ್ಯ ಕಾರ್ಯಕರ್ತನಾಗಿದ್ದನು. ಇವರು ಇಂತಹ ನಾಟ್ಯರಂಗ ದೊಡ್ಡಾಟ ಗೊಂಬೆಯಾಟ, ಮೊದಲಾದವುಗಳನ್ನು ಮಾಡುತ್ತಿದ್ದರು. ವಿಷ್ಣು ವಿಜ್ಞಾಪನೆಯಂತೆ ಹಲವಾರು ನಾಟಕಗಳನ್ನು ಬರೆದಿದ್ದಾರೆ. ಇವರ ಹೆಚ್ಚಿನ ಆಸಕ್ತಿ ದೊಡ್ಡಾಟಗಳ ಬಗೆಗೆ ಇರುವುದರಿಂದ ಅದನ್ನು ಜನಪ್ರಿಯಗೊಳಿಸಿದ್ದರು. ಆಗ ಈಗಿರುವ ದೊಡ್ಡಾಟಗಳು ೬-೭ ತಾಸಿನವು ಇರುತ್ತಿದ್ದವು. ಅವುಗಳಲ್ಲಿಯೇ ಅಪೇಕ್ಷಿಸಿದ ಭಾಗಗಳನ್ನು ಹಾಗೂ ಪಾತ್ರಧಾರಿಯವರು ತಮ್ಮ ತಮ್ಮ ಪಾತ್ರಗಳ ಪರಿಚಯವನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಇವರು ಸ್ತ್ರೀ ಪಾತ್ರಧಾರಿಯನ್ನು ಕುಣಿತಕ್ಕೂ ಕೂಡಾ ಹೊಸ ರೂಪವನ್ನು ಕೊಂಚ ಮಟ್ಟಿಗೆ ಮಾರ್ಪಾಡು ಮಾಡಲಾಗಿದೆ. ದೊಡ್ಡಾಟಗಳು ರಾತ್ರಿ ೯ ಘಂಟೆಗೆ ಪ್ರಾರಂಭವಾಗಿ ೧೨ ಘಂಟೆಗೆ ಮುಗಿಯುತ್ತಿತ್ತು. ಈಗ ಇದನ್ನು ತಿದ್ದುಪಡಿ ಮಾಡಲಾಗಿದೆ. ಇತ್ತಿತ್ತಲಾಗ ಜನರು ಪೂರ್ಣ ರಾತ್ರಿ ಕೂಡಲಾರರು. ಜನರಿಗೆ ಅಲ್ಪ ಸಮಯದಲ್ಲಿಯೇ ಮನರಂಜಿಸಬೇಕಾತ್ತಿತ್ತು."[೧೯] ಇದು ಈಗ ಮಿತಿಯಾಗಿದೆ. ಇವರು ಅತ್ಯಂತ ಜನಪ್ರಿಯನಾದ ಸಿ.ಎನ್.ಪಾಟೀಲರು ಹಳ್ಳಿಯಿಂದ ದಿಲ್ಲಿಯವರೆಗಿನ ೮೧ ಸನ್ಮಾನಗಳಿಗೆ ಪಾತ್ರರಾಗಿರುತ್ತಾರೆ.

ಇವರ ಬಗ್ಗೆ ಬರೆಯಲು ಇನ್ನೂ ಸಾಕಷ್ಟು ವಿಷಯಗಳು ಉಂಟು. ಅಷ್ಟೇ ಅಲ್ಲಾ ಅವರು ನಾಟಕ ರಂಗಭೂಮಿಗೆ ಸಲ್ಲಿಸಿದ ಪಕ್ಷಿನೋಟವನ್ನು ಇಷ್ಟಕ್ಕೇನೆ ಪೂರ್ಣ ವಿರಾಮವನ್ನಿಟ್ಟಿರುತ್ತಾರೆ. ಇವರ ಸಾಹಿತ್ಯ ಜಾನಪದ ಸಾಹಿತ್ಯ ಸೇವೆಯನ್ನು ಮಾಡಿರುತ್ತಾರೆ.

ಸಿ.ಎನ್.ಪಾಟೀಲರ ಕಲಾ ಚಟುವಟಿಕೆಗಳು

ಕಲಾವಿದನು ತನ್ನ ಕ್ಷೇತ್ರದಲ್ಲಿ ತನ್ನ ಆತ್ಮಸಂತೋಷಕ್ಕೋ ಅಥವಾ ಇತರರನ್ನು ಸಂತೋಷಗೊಳಿಸುವುದಕ್ಕೋ ತನ್ನನ್ನು ತಾನು ತೊಡಗಿಸಿಕೊಂಡು ತಾನು ಬೆಳೆಯುತ್ತಾ ತನ್ನ ಕ್ಷೇತ್ರವನ್ನು ಬೆಳೆಸುತ್ತಾ ಸಾಗುತ್ತಿರುತ್ತಾನೆ. ತಾನು ತುಳಿದ ಆ ಕ್ಷೇತ್ರವು ತನ್ನ ಹಿಂಬಾಲಿಸುವವರಿಗೆ ಮಾರ್ಗಸೂಚಿಯಾಗಿ ಕಲಾಕ್ಷೇತ್ರದ ಬೆಳವಣಿಗೆಗೆ ಕಾರಣವಾಗುತ್ತದೆ.

ಚಿತ್ರಕಲಾ ಚಟುವಟಿಕೆಗಳು ನಾಗರಿಕತೆಯ ಬೆಳವಣಿಗೆಗೆ ತುಂಬಾ ಸಹಕಾರಿಯಾದುದಾಗಿವೆ. ನಾಗರಿಕ ಜೀವನ ಆರಂಭದ ಕಾಲದ ಗುಹಾಂತರ ಚಿತ್ರಗಳಿಂದ ಧರ್ಮದ ಬೆಳವಣಿಗೆಯ ಸಂದರ್ಭದಲ್ಲಿನ ಧಾರ್ಮಿಕ ಚಿತ್ರಗಳವರೆಗೆ ಮತ್ತು ಅರಮನೆ, ದೇವಾಲಯಗಳ ಒಳಾಂಗಣ ಹಾಗೂ ಹೊರಾಂಗಣಗಳು ಚಿತ್ರಕಲೆಯಿಂದ ಅಲಂಕೃತಗೊಂಡಿವೆ. ಇವು ಸಮಾಜಕ್ಕೆ ಅತ್ಯಂತ ಅವಶ್ಯವಾದಂತವುಗಳಾಗಿ ಬೆಳೆದು ನಿಲ್ಲುತ್ತವೆ. ಆಧುನಿಕ ಕಾಲದಲ್ಲಿ ಹುಟ್ಟಿಕೊಂಡ ಕ್ಯಾಮರಾ ಹಾಗೂ ಔದ್ಯೋಗಿಕರಣಗಳ ಕಾರಣಗಳಿಂದಾಗಿ ಕಲಾವಿದನು ಸ್ವಲ್ಪ ಮಟ್ಟಿಗೆ ಸಮಾಜ ವರ್ಗದವರಿಂದ ನಿರ್ಲಕ್ಷ್ಯಕ್ಕೊಳಗಾದರೂ ಮರುಭೂಮಿಯಲ್ಲಿನ

---

೧೯. ಸಿ.ಎನ್.ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿ ಲೇಖನ

ಓಯಾಸಿಸ್‌ನಂತೆ ಮರುಹುಟ್ಟು ಪಡೆದದ್ದನ್ನು ಕಾಣಸಿಗುತ್ತದೆ. ಆ ಹೊತ್ತಿಗಾಗಲೇ ಕಲಾವಿದರುಗಳ ವರ್ಗವು ಒಂದು ಪ್ರತ್ಯೇಕ ಸ್ಥಾನಮಾನ ಪಡೆದು ಸಾಮಾಜಿಕ ಜವಾಬ್ದಾರಿಗಳನ್ನು ತೀರಿಸಲು ಕಲಾ ಚಟುವಟಿಕೆಗಳು, ಕಲಾಪ್ರದರ್ಶನಗಳು, ಕಾರ್ಯಾಗಾರಗಳು ಹುಟ್ಟಿಕೊಂಡು ಸಮಾಜದಲ್ಲಿನ ರಾಜಕೀಯ ಸ್ಥಿತಿಗಳನ್ನು ಜನಜೀವನದ ಆಗು ಹೋಗುಗಳನ್ನು ಚಿತ್ರಕಲೆ ಮುಖಾಂತರ ಸಮಾಜಕ್ಕೆ ತೋರ್ಪಡಿಸುವಿಕೆಯು ತುಂಬಾ ಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ.

ಈ ಮಾರ್ಗದಲ್ಲಿ ಕಲಾ ಚಟುವಟಿಕೆಗಳು ಸಮಾಜದ ಪ್ರತಿಯೊಂದು ವರ್ಗದ ಸ್ಪಂದನೆಗಳನ್ನು ಮನುಷ್ಯನ ಅವಶ್ಯಕತೆಗಳ ವಿವರಗಳನ್ನು ಸಕಾಲಕ್ಕೆ ಯೋಗ್ಯವಾಗಿ ನೀಡುತ್ತಾ ಸಮಾಜದ ಬೆಳವಣಿಗೆಯಲ್ಲಿ ಒಂದು ಅತ್ಯಂತ ಪ್ರಮುಖವಾದ ಮಾಧ್ಯಮದ ಭಾಗವಾಗಿ ಬೆಳೆದಿದೆ. ಪ್ರಸ್ತುತ ಸಂದರ್ಭದಲ್ಲಿ ಸಿ.ಎನ್.ಪಾಟೀಲವರು ತಮ್ಮ ಕಲಾ ಚಟುವಟಿಕೆಗಳಿಂದ ಹಾಗೂ ಕಲಾಕೃತಿಗಳ ಸಂದೇಶದಿಂದ ಸಮಾಜದ ಬೆಳವಣಿಗೆಗೂ ಕಾರಣರಾಗಿದ್ದಾರೆ ಎಂದು ಹೇಳಬಹುದು.

ದಿ.ಸಿ.ಎನ್.ಪಾಟೀಲರವರು ನಾಡಿನ ಹಿರಿಯ ಕಲಾವಿದರಾಗಿ ಹಲವಾರು ಕಲಾ ಚಟುವಟಿಕೆಗಳಲ್ಲಿ ಭಾಗವಹಿಸಿರುತ್ತಾರೆ. ಏಕವ್ಯಕ್ತಿ ಹಾಗೂ ಸಮೂಹ ಪ್ರದರ್ಶನಗಳು ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ಆಯೋಜಿಸಿರುವ ಪ್ರದರ್ಶನ, ಕಾರ್ಯಗಾರಗಳು ಹಾಗೂ ಸ್ಥಳೀಯ ಸಂಘ ಸಂಸ್ಥೆಯವರು ಪ್ರಾಯೋಜಿಸುವ ಕಾರ್ಯಗಳಲ್ಲಿ ಭಾಗವಹಿಸಿದ್ದಾರೆ. ಕಲಾವಿದರು ನಿಸ್ವಾರ್ಥದಿಂದ ತಮ್ಮ ಕಲಾ ಚಟುವಟಿಕೆಯಲ್ಲಿ ತೊಡಗುತ್ತಿದ್ದರೆ. ಇವರ ಕಲಾ ಪ್ರವೀಣತೆಯನ್ನು ಗುರ್ತಿಸಿ ಬೆಳೆಸಿದ್ದು ಹಲವಾರು ಸಂಘ ಸಂಸ್ಥೆ ಹಾಗೂ ಮಠಮಾನ್ಯರು. ಕಲಾವಿದ ಪಾಟೀಲರ ಕಲಾ ಚಟುವಟಿಕೆಗಳ ದಾಖಲಾತಿಯನ್ನು ಮತ್ತು ಪರಿಚಯ ಪತ್ರದಿಂದ ಸಂಗ್ರಹಿಸಿ ಅಧ್ಯಯನ ಮಾಡುವಾಗ ಸಿಕ್ಕ ಮಾಹಿತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಸಿ.ಎನ್.ಪಾಟೀಲರು ತಮ್ಮ ೧೦ನೇ ತರಗತಿ ಪಠ್ಯಪುಸ್ತಕದಲ್ಲಿರುವ ಚಿತ್ರಗಳ ರಚನೆಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ೧೨ನೇ ತರಗತಿ ಆಗಿನ ಮುಂಬೈ ರಾಜ್ಯದ ಮಾನ್ಯ ಶಿಕ್ಷಣ ಮಂತ್ರಿಗಳಾಗಿದ್ದ ಎನ್.ಟಿ.ಕಂಬಳಿ ಅವರ ಭಾವಚಿತ್ರ ರಚನೆ ಮಾಡಿರುವುದು ಇದರಿಂದ ಪ್ರಶಂಸೆಗೆ ಪಾತ್ರರಾಗಿ ಜೊತೆಗೆ ಪಾರಿತೋಷಕವನ್ನು ಪಡೆದಿರುವುದು ತಿಳಿದುಬರುತ್ತದೆ. ಇದಲ್ಲದೇ ಗದುಗಿನ ವಿಜಯ ನಾಟ್ಯ ಸಂಘದ ಹಾಗೂ ಕಲಾಮಂದಿರಗಳ ಕಾರ್ಯದರ್ಶಿಯಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ದೆಹಲಿಯಲ್ಲಿ ಅಂತರರಾಷ್ಟ್ರೀಯ ಮಕ್ಕಳ ಕಲಾ ಪ್ರದರ್ಶನದ ವೀಕ್ಷಣೆಗಾಗಿ ಕರ್ನಾಟಕ ಸರಕಾರದ ಆದೇಶ ಮೇರೆಗೆ ದಿಲ್ಲಿಗೆ ಹೋಗಿಬಂದಿರುವುದು ತಿಳಿದುಬರುತ್ತದೆ. ಹಾಗೂ ಪಂಚವಾರ್ಷಿಕ ಯೋಜನೆ ಅಂಗವಾಗಿ ಬೃಹತ್ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ದಿ.ಶ್ರೀ.ಅನ್ನದಾನಪ್ಪ ದೊಡ್ಡಮೇಟಿ ಅವರ ಆದೇಶದ ಮೇರೆಗೆ ಶ್ರೀ ರಾಜರಾಜೇಶ್ವರಿ ಭುವನೇಶ್ವರಿಯ ಬೃಹತ್‌ಗಾತ್ರದ ತೈಲವರ್ಣದಲ್ಲಿ ಚಿತ್ರ ರಚಿಸಿ ಪ್ರಸಿದ್ಧಿ

[illegible]

ಪಡೆದರು. ಅದಕ್ಕಾಗಿ ಗೌರವ ಸನ್ಮಾನಗಳು ಅವರಿಗೆ ಸಂದವು. ಅಲ್ಲದೇ ಈ ಕಾರಣದಿಂದ ರಾಷ್ಟ್ರದ ಸ್ವತಂತ್ರದ ಹೋರಾಟದಲ್ಲಿ ಭಾಗವಹಿಸಿ ಸ್ವಾತಂತ್ರ್ಯ ಯೋಧರಾಗಿ ರೂಪುಗೊಂಡಿದ್ದು ತಿಳಿದುಬರುತ್ತದೆ.

ಭಾರತದ ಅಂದಿನ ರಾಷ್ಟ್ರಪತಿಗಳಾಗಿದ ದಿ.ಶ್ರೀ.ರಾಧಾಕೃಷ್ಣನ್‌ರವರು ಹುಬ್ಬಳ್ಳಿಯ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಿದ್ದರು. ಕೇವಲ ಐದು ನಿಮಿಷಗಳಲ್ಲಿ ಶ್ರೀರಾಧಾಕೃಷ್ಣರವರ ಭಾವಚಿತ್ರ ರಚಿಸಿ ಜನಮನ್ನಣೆ ಪಡೆದರು. ಅದೇ ವೇದಿಕೆಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ನಿವೃತ್ತರಾದ ಶ್ರೀ ರೋಬೆಲೋ ಅವರು ಹಾಗೂ ಪೂಜ್ಯರೊಬ್ಬರಿಂದ ಗೌರವ ಸನ್ಮಾನಗೊಂಡಿದ್ದಾರೆ. ಪೂಜ್ಯರು ಆ ಭಾವಚಿತ್ರಕ್ಕೆ ಸಹಿ ಮಾಡಿ ಪುರಸ್ಕರಿಸಿರುತ್ತಾರೆ.

ಶ್ರೀಯುತರು ಮುಂಬೈನಲ್ಲಿದ್ದಾಗ ನೃತ್ಯ, ನಟನೆ, ಭಾಷಣ ಜೊತೆಗೆ ಕ್ರೀಡಾ ಹವ್ಯಾಸವನ್ನು ಬೆಳೆಸಿಕೊಂಡಿದ್ದರಿಂದ ಚಿತ್ರಕಲಾ ಅಭ್ಯಾಸದ ಬಿಡುವಿನಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಪ್ರಸಿದ್ಧಿ ಪಡೆದ ಶ್ರೀ ಉದಯಶಂಕರ್, ಪದ್ಮಿನಿ ರಾಗಿಣಿ, ವೈಜಯಂತಿ ಮಾಲಾ ಇವರುಗಳ ನೃತ್ಯಗಳಿಂದ ಪುಳಕಿತಗೊಂಡು ಅವರನ್ನು ಪರಿಚಯಿಸಿಕೊಂಡರು. ಸಿ.ಎನ್.ಪಾಟೀಲರ ಕಲಾಕೃತಿಗಳನ್ನು ನೋಡಿದ ದಿಗ್ಗಜರು ಮನಸಾರೆ ಕೊಂಡಾಡಿದರು. ಶ್ರೀಯುತರು ಅವರುಗಳಿಗೆ ತಮ್ಮಲ್ಲಿರುವ ಕಲಾಕೃತಿಗಳನ್ನು ಕಾಣಿಕೆಯಾಗಿ ಕೊಟ್ಟರು. ಇದರಿಂದ ಸಂತೋಷಗೊಂಡ ಆ ಕಲಾವಿದರು. ಸಿ.ಎನ್.ಪಾಟೀಲರ ಕಲಾಕೃತಿಗಳ ಅಭಿಮಾನಿಗಳಾಗಿದ್ದರು. ಈ ಸಂಬಂಧ ಬಹಳ ವರ್ಷಗಳವರೆಗೆ ಇರುವುದು ತಿಳಿದು ಬರುತ್ತದೆ. ಭಾರತದ ಹಾಕಿ ಟೀಮ್‌ನ ಮುಖ್ಯಸ್ಥರಾಗಿದ್ದ ಶ್ರೀ ಬಲಬೀರ್ ಸಿಂಗ್ ಇವರು ಪಂಜಾಬ್ ಪೊಲೀಸ್ ಆಟಗಾರರೊಂದಿಗೆ ಗದುಗಿಗೆ ಆಗಮಿಸಿದ್ದರು. ಆ ಸಂದರ್ಭದಲ್ಲಿ ಶ್ರೀಯುತರು ಅವರಿಗೆ ಒಂದು ಕಲಾಕೃತಿಯನ್ನು ಕಾಣಿಕೆಯಾಗಿ ಕೊಟ್ಟರು. ಅದು ಈಶ್ವರನ ಭಾವಚಿತ್ರವಾಗಿತ್ತು. ಶ್ರೀ ಬಲಬೀರ್‌ಸಿಂಗ್‌ರಿಂದ ಇನ್ನೂ ಹಲವಾರು ಆಟಗಾರರು ಹಾಗೂ ಫುಟ್‌ಬಾಲ್ ಆಟಗಾರರಾದ ಶ್ರೀಪರಬ್, ಶ್ರೀವಾಪನವರು ಪಾಟೀಲರ ಕಲಾಕೃತಿಗಳನ್ನು ಪ್ರೀತಿಸುವವರಾಗಿದ್ದರು. ಅವರಿಗೂ ವಸಂತ ಋತು ಎಂಬ ಕಲಾಕೃತಿಯನ್ನು ಕೊಡಮಾಡಿ ಅವರ ಪ್ರೀತಿಗೆ ಪಾತ್ರರಾಗಿದ್ದಾರೆ.

ಸಿ.ಎನ್.ಪಾಟೀಲರು ಸ್ಕೌಟ್ ಹಾಗೂ ಗೈಡ್ಸ್‌ನ ಗದಗ ಜಿಲ್ಲಾ ಉಪನಿರ್ದೇಶಕರಾಗಿದ್ದಾಗ ಅಂತರಾಷ್ಟ್ರೀಯ ಸ್ಕೌಟ್ ಹಾಗೂ ಗೈಡ್ಸ್ ಸಂಸ್ಥಾಪಕರಾಗಿದ್ದ ಲಾರ್ಡ್ ಹಾಗೂ ಲೇಡಿ ಬೆಡೆನ್ ಪಾವೆಲ್ ಇವರ ಭಾವಚಿತ್ರವನ್ನು ಸ್ಕೌಟ್ ಕ್ಯಾಂಪ್‌ನಲ್ಲಿಯೇ ರಚಿಸಿದ್ದರು. ಇದು ತುಂಬಾ ಆಕರ್ಷಕವಾಗಿತ್ತೆಂಬುದು ಅವರ ಸ್ವಬರಹದಿಂದ ತಿಳಿದು ಬರುತ್ತದೆ. ಇದನ್ನು ಕೇಂದ್ರ ಸಂಸ್ಥೆಯ ಚೀಫ್ ಕಮೀಷನರ್ ಆಗಿದ್ದ ಶ್ರೀಮತಿ ಮುಜಂದಾರ್ ಅವರಿಗೆ ಅರ್ಪಿಸಿದ್ದರು. ಈ ಕಲಾಕೃತಿಯು ದಿಲ್ಲಿಯಲ್ಲಿನ ಖಾಸಗಿ ಸಂಗ್ರಹದಲ್ಲಿದೆ. ಲೇಡಿ ಬೇಡನ್ ಪಾವೆಲ್‌ರ ಮೊಮ್ಮಗಳು ದಿಲ್ಲಿಗೆ ಬಂದ ಸಂದರ್ಭದಲ್ಲಿ ಶ್ರೀಯುತರು ಅರ್ಪಿಸಿದ ಕಲಾಕೃತಿಗಳನ್ನು ನೋಡಿ ತುಂಬ ಹರ್ಷಗೊಂಡು ಇನ್ನು ಹಲವಾರು ಕೃತಿಗಳನ್ನು ಸಿ.ಎನ್.ಪಾಟೀಲರವರಿಂದ ರಚಿಸಿಕೊಂಡು ಇಂಗ್ಲೇಂಡಿಗೆ ತೆಗೆದುಕೊಂಡು ಹೋಗಿರುವುದು ಕಲಾವಿದರ ಸ್ವಬರಹದಿಂದ ತಿಳಿದು ಬರುತ್ತದೆ.

ಶ್ರೀಯುತರ ಕಲಾಸೇವೆಯನ್ನು ಕಂಡು ದಿನಾಂಕ ೮.೩.೨೦೦೬ರಂದು ಗದಗ ಜಿಲ್ಲಾಧಿಕಾರಿಗಳ ಆಜ್ಞೆಯ ಮೇರೆಗೆ ಗದುಗಿನ ಅಸಿಸ್ಟಂಟ್ ಕಮೀಷನರ್ ಹಾಗೂ ಬಿ.ಎಡ್.ಮಹಾವಿದ್ಯಾಲಯದ ಪ್ರಾಂಶುಪಾಲರು, ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ.ಕೆ.ಬಿ.ತಳಗೇರಿಯವರು ದೈಹಿಕವಾಗಿ ಅಸ್ವಸ್ಥವ್ಯಸ್ತರಾಗಿದ್ದ ಸಿ.ಎನ್.ಪಾಟೀಲರಿಗೆ ಅವರ ಮನೆಯಲ್ಲಿಯೇ ಸನ್ಮಾನ ಮಾಡಿ ಕಲಾವಿದರನ್ನು ಗೌರವಿಸಿದರು. ಅದಲ್ಲದೇ ಶ್ರೀ ಅಡವೀಂದ್ರ ಮಹಾಸ್ವಾಮಿಗಳವರ ಮಠದಲ್ಲಿ ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರಿಂದ ಸನ್ಮಾನ ಗೌರವ ಪಡೆದುಕೊಂಡರು. ಅದೇ ರೀತಿ ಡಾ.ಪುಟ್ಟರಾಜ ಗವಾಯಿಗಳವರ ೯೩ನೇ ಜಯಂತ್ಯೋತ್ಸವದಲ್ಲಿ ಪೂ.ಶ್ರೀ.ಅನ್ನದಾನೇಶ್ವರ ಸ್ವಾಮಿಗಳು ಮುಂಡರಗಿ, ಇವರಿಂದ ಸನ್ಮಾನ ಗೌರವವನ್ನು ಸ್ವೀಕರಿಸಿದ್ದಾರೆ. ಕಲಾವಿದರು ನಾಲ್ವತ್ತೈದಕ್ಕೂ ಹೆಚ್ಚು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಇಪ್ಪತ್ತೈದಕ್ಕೂ ಹೆಚ್ಚು ಸಮೂಹ ಪ್ರದರ್ಶನ, ಹೀಗೆ ನೂರಾರು ಪ್ರದರ್ಶನಗಳನ್ನು ತಮ್ಮ ನೇತೃತ್ವದಲ್ಲಿ ಮಾಡಿಸಿರುವರು.

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ದಿ.ಕೆಂಗಲ್ ಹನುಮಂತಯ್ಯ, ಶ್ರೀ.ಎಸ್.ನಿಜಲಿಂಗಪ್ಪ, ಶ್ರೀ ವಿರೇಂದ್ರ ಪಾಟೀಲ, ಕಡಿದಾಳ ಮಂಜಪ್ಪ, ಮೈಸೂರಿನ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರು, ಧರ್ಮಸ್ಥಳ ಶ್ರೀ.ಡಿ.ವೀರೇಂದ್ರ ಹೆಗಡೆ ಹಾಗೂ ದಿ.ಶ್ರೀ.ಅಣ್ಣಾರಾವ ಗುಣಮುಖಿ ಮುಂತಾದ ಮಹನೀಯರ ಭಾವಚಿತ್ರ ಬಿಡಿಸಿ ಅರ್ಪಿಸಿದ್ದಾರೆ. ಇದರಿಂದ ಗಣ್ಯಮಾನ್ಯರು ಇವರ ಕಲಾ ನೈಪುಣ್ಯತೆಯನ್ನು ಹಾಡಿ ಹೊಗಳಿದ್ದಾರೆ. ಇಂತಹ ಸನ್ಮಾನವು ಒಬ್ಬ ಕಲಾವಿದನ ಪರಿಶ್ರಮಕ್ಕೆ ಸಿಕ್ಕ ಗೌರವವು ಅತ್ಯಂತ ಹೆಮ್ಮೆ ಪಡುವ ಸಂಗತಿ. ಇಂತಹದೇ ಭಾವಚಿತ್ರಗಳನ್ನು ದಿ.ದ.ರಾ.ಬೇಂದ್ರೆ, ದಿ.ಶಿವರಾಮ ಕಾರಂತ ಮೊದಲಾದ ಗಣ್ಯರಿಗೂ ಚಿತ್ರಿಸಿಕೊಟ್ಟು ತಮ್ಮ ಕಲಾ ಪ್ರೌಢಿಮೆ ಮೆರಗುಗೊಳಿಸಿದ್ದು ತಿಳಿದುಬರುತ್ತದೆ.

ಶಿವರಾಮ ಕಾರಂತರ, ದಿ.ಅ.ನ.ಕೃಷ್ಣರಾಯ ಮೊದಲಾದ ಮಹನೀಯರ ಜೊತೆಯಲ್ಲಿ ಮೈಸೂರ ದಸರಾ ಪ್ರದರ್ಶನ ಚಿತ್ರಕಲಾ ವಿಭಾಗದ ನಿರ್ಣಾಯಕರಾಗಿ ಭಾಗವಹಿಸಿದರು. ಅದಲ್ಲದೆ ರಾಜ್ಯದ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನದ ನಿರ್ಣಾಯಕ ಸಮಿತಿಯ ಸದಸ್ಯರಾಗಿ ಸಿ.ಎನ್.ಪಾಟೀಲರು ಸೇವೆ ಗೈದಿದ್ದಾರೆ. ಪ್ರೌಢಶಾಲಾ ಶಿಕ್ಷಣ ಹಂತದಲ್ಲಿ ಬರುವ ಹೈಯರ್ ಗ್ರೇಡ್ ಪರೀಕ್ಷೆಗಳ ಹಾಗೂ ಉಚ್ಚ ಚಿತ್ರಕಲಾ ಪರೀಕ್ಷೆಗಳ ಮುಖ್ಯ ನಿರ್ಣಾಯಕರಾಗಿಯೂ ಕೂಡಾ ಸೇವೆ ಸಲ್ಲಿಸಿದ್ದಾರೆ. ಮೈಸೂರು, ಬೆಂಗಳೂರುಗಳಲ್ಲಿ ನಡೆದ ಚಿತ್ರಕಲಾ ಸಮ್ಮೇಳನಗಳಲ್ಲಿ ನಾಡಿನ ಏಕೈಕ ಪ್ರತಿನಿಧಿಯಾಗಿ ಸಿ.ಎನ್. ಪಾಟೀಲರು ಆಯ್ಕೆಯಾದರು. ಅಲ್ಲದೆ ಲಲಿತಕಲಾ ಅಕಾಡೆಮಿಯಿಂದ ಬೆಂಗಳೂರು, ಐಹೊಳೆಗಳಲ್ಲಿ ನಡೆದ ಕಲಾ ಶಿಬಿರಗಳ ಮಾರ್ಗದರ್ಶಕರಾಗಿದ್ದರು. ಕಲಾವಿದರು ಚಿತ್ರಕಲೆಯ ಪೌಢಿಮೆ ಎಷ್ಟಿತ್ತೋ ಅಷ್ಟೇ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದರು.

[illegible]

ಇವರು ಚಿತ್ರಕಲೆ ವಿಷಯವಾಗಲಿ, ಗಣಿತ, ವಿಜ್ಞಾನ ವಿಷಯವಾಗಲಿ ಹಾಗೂ ದೇಶ ಸೇವೆಯ ವಿಷಯವಾಗಲಿ ಎಲ್ಲ ವಿಷಯವನ್ನು ತಮ್ಮ ಭಾಷಣ ಪ್ರಭಾವದಿಂದ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿ ಮಾಡುತ್ತಿದ್ದರು. ಧಾರವಾಡ ಆಕಾಶವಾಣಿ ಬಾನುಲಿ ಕೇಂದ್ರದಲ್ಲಿ ಏರ್ಪಡಿಸಿದ ಸಪ್ತಾಹದಲ್ಲಿ ನಾಡಿನ ಕಲಾವಿದರ ಪ್ರತಿನಿಧಿಯಾಗಿ ಸೇವೆಯನ್ನು ಮಾಡಿದವರಾಗಿದ್ದಾರೆ.

ವಿಜಾಪುರದಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಆಶ್ರಯದಲ್ಲಿ ಶ್ರೀ ಸಿದ್ಧೇಶ್ವರ ಕಲಾ ಮಂದಿರದ ಸ್ಥಾಪನೆಯೊಂದಿಗೆ ನಿರ್ದೇಶಕರಾಗಿ ಸಿ.ಎನ್.ಪಾಟೀಲರು ಸೇವೆ ಸಲ್ಲಿಸಿದ್ದಾರೆ. ಮತ್ತು ಅಲ್ಲಿಯೇ ಪರೀಕ್ಷಾ ಕೇಂದ್ರ ಪಡೆಯಲು ಇವರ ಶ್ರಮವೇ ಕಾರಣವಾಯಿತು. ಗದಗಿನ ವಿಜಯ ಕಲಾಮಾಂದಿರದ ಪ್ರಾಚಾರ್ಯರಾಗಿದ್ದಾಗ ಸಿ.ಎನ್.ಪಾಟೀಲರು ಅನೇಕ ವಿದ್ಯಾರ್ಥಿಗಳಿಗೆ ಉತ್ತಮ ಕಲಾವಿದರಾಗಲು ಪ್ರೋತ್ಸಾಹಿಸಿದ್ದಾರೆ. ನಾಡಿನಾದ್ಯಂತ ಇವರ ಶಿಷ್ಯವರ್ಗವು ಬೆಳೆದುಕೊಂಡು ಕಲಾ ಸೇವೆಯನ್ನು ಮಾಡುತ್ತಿರುವುದು ಕಾಣಸಿಗುತ್ತದೆ.

ಈ ಮೊದಲಿದ್ದ ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯವೆಂದು ೧೯೭೨-೭೩ರಲ್ಲಿ ನಾಮಕರಣೋತ್ಸವದ ಕಾಲದಲ್ಲಿ ಈ ಕಲಾವಿದರು ಶ್ರೀ ಭುವನೇಶ್ವರಿಯ ಭವ್ಯ ಚಿತ್ರದ ರಚನೆಗಾಗಿ ಮೈಸೂರಿನ ಮಹಾರಾಜರಾದ ದಿ.ಜಯಚಾಮರಾಜೇಂದ್ರ ಒಡೆಯರು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ದಿ.ಡಿ.ದೇವರಾಜ ಅರಸ ಮತ್ತು ಉತ್ತರ ಕರ್ನಾಟಕದ ಪ್ರಭಾವಿ ನಾಯಕರೂ ಸಚಿವರಾದ ಶ್ರೀ.ಕೆ.ಎಚ್.ಪಾಟೀಲ ಮುಂತಾದವರ ನೇತೃತ್ವದಲ್ಲಿ ಸನ್ಮಾನ ಗೌರವ ಪ್ರಾಪ್ತವಾಯಿತು. ಇದೇ ಸಂದರ್ಭದಲ್ಲಿ ಗದಗ ನಾಗರಿಕ ವತಿಯಿಂದ ಗೌರವ ಪಡೆದುಕೊಂಡರು. ಗದಗದಲ್ಲಿ ಜರುಗಿದ ೪೭ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಿ.ಎನ್.ಪಾಟೀಲರು ಏರ್ಪಡಿಸಿದ ಭವ್ಯ ಕಲಾ ಪ್ರದರ್ಶನಕ್ಕಾಗಿ ಸುವರ್ಣ ಪದಕ ಪಡೆದುಕೊಂಡರು. ಇಂತಹ ಮಹನೀಯರಿಂದ ಸನ್ಮಾನ ಪಡೆದು ಉನ್ನತ ಸಂಘ ಸಂಸ್ಥೆಯ ವತಿಯಿಂದ ಕಲಾಪ್ರದರ್ಶನ ಏರ್ಪಡಿಸಿ ಕಲಾ ಪ್ರಚಾರಕ್ಕೆ ದುಡಿದ ಅಗ್ರಶ್ರೇಯಾಂಕಿತ ಕಲಾವಿದರೆಂದು ಸಿ.ಎನ್.ಪಾಟೀಲರು ಗುರುತಿಸಲ್ಪಟ್ಟಿದ್ದಾರೆ.

ಗದಗ ವಿಭಾಗದ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಸಿ.ಎನ್.ಪಾಟೀಲರು ಸೇವೆ ಸಲ್ಲಿಸಿದ್ದಾರೆ. ಕಲೆಯ ಕುರಿತು ಹಲವಾರು ಲೇಖನಗಳು ಬರೆದಿರುವುದಲ್ಲದೇ ಕಲೆಯನ್ನು ಕುರಿತು ಇನ್ನೂರಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ. ಸಿ.ಎನ್.ಪಾಟೀಲರ ಕಲಾ ಚಟುವಟಿಕೆಗಳನ್ನು ಗಮನಿಸಿದ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯು ಅವರನ್ನು ದಿಲ್ಲಿಯ "ಶಂಕರ್ಸ ವೀಕ್ಲಿ" ಪತ್ರಿಕೆಯವರು ನಡೆಸುತ್ತಿದ್ದ ಅಂತರಾಷ್ಟ್ರೀಯ ಮಕ್ಕಳ ಚಿತ್ರಕಲಾ ಕೃತಿಗಳು ಹಾಗೂ ಪ್ರದರ್ಶನಗಳನ್ನು ವೀಕ್ಷಿಸಿ ಅದರ ಸವಿಸ್ತಾರ ವರದಿಯನ್ನು ಒಪ್ಪಿಸುವಂತೆ ನಿರ್ದೇಶಿಸಿ ದಿಲ್ಲಿಗೆ ಕಳಿಸಿತ್ತು. ಹೀಗೆ ರಾಜ್ಯದ ಚಿತ್ರಕಲೆ, ಚಿತ್ರಕಲಾ ಶಿಕ್ಷಣಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟು ಸಿ.ಎನ್.ಪಾಟೀಲ ಅವರನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೮೧-೮೨ನೇ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿತಲ್ಲದೇ

೧೯೮೬ರಲ್ಲಿ ಭಾರತ ಸೇನಾನಿ ಬ್ರಿಟೀಷರ ವಿರುದ್ಧ ದಂಗೆ ಹೂಡಿದ ನರಗುಂದ ಬಾಬಾ ಸಾಹೇಬನ ಅರಮನೆಯಲ್ಲಿನ ಪ್ರಾಚೀನ ಭಿತ್ತಿಚಿತ್ರಗಳ ಪ್ರತಿಕೃತಿಗಳನ್ನು ಚಿತ್ರಿಸಿದ್ದಾರೆ.

ಸಿ.ಎನ್.ಪಾಟೀಲರ ಕಲಾ ಚಟುವಟಿಕೆಗಳು ಬರಿ ಚಿತ್ರಕಲಾ ಪ್ರದರ್ಶನ, ಕೃತಿ ರಚನೆಯಲ್ಲಿ ಭಾಗವಹಿಸುವಿಕೆಗೆ ಮಾತ್ರ ಸೀಮಿತಗೊಳ್ಳದೇ ನಾಡಿನ ಕಲಾಕ್ಷೇತ್ರದ ಸಂರಕ್ಷಣೆ, ಮುಂಬರುವ ಕಲಾವಿದರುಗಳಿಗೆ ನೀಡಿದ ಮಾರ್ಗದರ್ಶನ, ಬತ್ತುತ್ತಿರುವ ನೀರನ್ನು ಹೊಸ ನೀರಿನ ಸೆಲೆಯಂತೆ ಸುಮಾರ್ಗ ತೋರಿಸಿಕೊಟ್ಟಿದ್ದಾರೆ. ಹಲವಾರು ಕಲಾ ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿದರಲ್ಲದೇ ಅದರಿಂದ ಸಾವಿರಾರು ಕಲಾವಿದರುಗಳು ಸೃಷ್ಟಿಸುವಂತೆ ಮಾಡಿ ಕಲಾ ಕ್ಷೇತ್ರವನ್ನು ನಿರಂತರ ಬೆಳೆಯುವಂತೆ ಮಾಡಿರುವರು.

ಸಿ.ಎನ್.ಪಾಟೀಲರು ಪ್ರೌಢಶಾಲಾ ಶಿಕ್ಷಕರಾಗಿ ನಿವೃತ್ತರಾದನಂತರ ಚಿತ್ರಕಲಾ ಕ್ಷೇತ್ರವಲ್ಲದೇ ಇನ್ನೂ ಹಲವಾರು ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ಅವಿಶ್ರಾಂತವಾಗಿ ನೀಡಿರುವುದು ಕಂಡುಬರುತ್ತದೆ. ಬಡ ವಿದ್ಯಾರ್ಥಿಗಳಿಗೆ ಇವರು ಪ್ರತ್ಯೇಕ ಕೊಠಡಿ ಕಟ್ಟಿಸಿ ವಿದ್ಯೆ, ವಸತಿ ನೀಡಿರುವುದಲ್ಲದೆ ರಾಷ್ಟ್ರದ ಉತ್ತರ ಭಾಗದಲ್ಲಿ ಬರಗಾಲ ಬಿದ್ದಾಗ ಅವರಿಗೆ ಬಟ್ಟೆ, ಶಾಲು, ಜಮಖಾನಗಳನ್ನು ಕೊಟ್ಟುಕಳಿಸಿರುವುದು ಅವರ ಸಮಾಜದಲ್ಲಿನ ಆಗು ಹೋಗುಗಳ ಬಗ್ಗೆ ಅವರಿಗಿದ್ದ ಕಾಳಜಿ ಎಷ್ಟೆಂದು ತಿಳಿದುಬರುತ್ತದೆ. ಶ್ರೀಯುತರು ಸಹೃದಯರು, ಪರರ ದುಃಖದಲ್ಲಿ ಭಾಗಿಗಳಾಗಿ ತಮ್ಮ ಹೃದಯವಂತಿಕೆ ತೋರಿಸಿರುವುದು ಹೆಮ್ಮೆಯ ಸಂಗತಿ.

ಚಿತ್ರಕಲೆಯಲ್ಲಿ ಪ್ರಸಿದ್ಧಿ ಪಡೆದಷ್ಟೇ ಭಾಷಣ ಕಲೆಯಲ್ಲಿಯೂ ನಿಷ್ಣಾಂತರಾಗಿದ್ದಂತೆ ಬೋಧನೆಯಲ್ಲಿಯೂ ಅಷ್ಟೇ ಪರಿಣಿತಿಯನ್ನು ಸಿ.ಎನ್.ಪಾಟೀಲರು ಪಡೆದವರಾಗಿರುವರು. ಮಹಾಕವಿ ಪಂಪನಿಂದ ಪ್ರಸ್ತುತ ಕವಿಗಳ ಪದ್ಯಗಳನ್ನು ಕಂಠಪಾಠ ಮಾಡುವಷ್ಟು ಪ್ರತಿಭೆ ಇವರದಾಗಿದೆ. ಅಂತೆಯೇ ಕಲಾ ಅಧ್ಯಯನದ ಎಮ್.ಎ.ವರ್ಗದ ವಿದ್ಯಾರ್ಥಿಗಳೂ ಸಹ ಇವರಲ್ಲಿ ಮಾಹಿತಿಯನ್ನು ಪಡೆದುಕೊಂಡು ಹೋಗುತ್ತಿದ್ದರು. ಗದುಗಿನ ಮಾಡೆಲ್ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದಾಗ ಚಿತ್ರಕಲೆ ಅಲ್ಲದೆ ಉಳಿದ ವಿಷಯದಲ್ಲೂ ಭೋಧನೆ ಇವರದಾಗಿತ್ತು. ಕನ್ನಡವನ್ನು ನಿರರ್ಗಳವಾಗಿ ಮಾತನಾಡುವ ಹಿರಿಮೆ ಇವರದಾಗಿತ್ತು. ವಿಜಯ ಕಲಾಮಂದಿರದಲ್ಲಿ ಸಿ.ಎನ್.ಪಾಟೀಲರು ಎ.ಎಮ್.ಜಿಡಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವದಲ್ಲಿ ವಿಶೇಷ ವರ್ಗಗಳನ್ನು ತೆಗೆದುಕೊಂಡು ಬೋಧಿಸುತ್ತಿದ್ದರು. ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರಾಗಿದ್ದುಕೊಂಡು ಎ.ಎಂ.ಜಿಡಿ ವಿದ್ಯಾರ್ಥಿಗಳಿಗೆ ಬೋಧಿಸುವುದು ಅವರ ಕಲಾ ಹಿರಿಮೆ ಕಾಣಸಿಗುತ್ತದೆ. ಮಾಡೆಲ್ ಪ್ರೌಢಶಾಲೆಯಲ್ಲಿ ಪ್ರತಿ ವರ್ಷದಂತೆ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಧಾರವಾಡ ಜಿಲ್ಲಾ ಶಿಕ್ಷಣಾಧಿಕಾರಿಗಳು ಶ್ರೀಮತಿ ದೇವಾಂಗ ಮಠ ಅವರು ಆ ಕಾರ್ಯಕ್ರಮದಲ್ಲಿ ನಡೆದ ಸಿ.ಎನ್.ಪಾಟೀಲರ ಕಲೆ, ನಾಡು, ನುಡಿ ಕುರಿತು ಭಾಷಣವನ್ನು ಕೇಳಿ ಪಾಟೀಲರನ್ನು ಕೇಳಿದರು. "ನೀವು ಶ್ರೇಷ್ಠ ಭಾಷಣಕಾರರು, ನಿವೇಕೆ ಈ ಚಿತ್ರಕಲಾ ಶಿಕ್ಷಕ ಹುದ್ದೆಗೆ ಬಂದಿರಿ" ಎಂದು ಕೇಳಿದಾಗ ಆಗ ಸಿ.ಎನ್.ಪಾಟೀಲರು "ಚಿಕ್ಕದಾಗಿರುವುದನ್ನು ಹಿರಿದಾಗಿಸುವುದರಲ್ಲಿ

[illegible]

ಹಿರಿಮೆ ಇದೆ" ಎಂದರು. ಈ ಮಾತನ್ನು ಕೇಳಿದ ಶಿಕ್ಷಣಾಧಿಕಾರಿಗಳು ಆಶ್ಚರ್ಯ ಚಕಿತರಾದರು. ಕಲಾವಿದರು ಅಷ್ಟೊಂದು ಉತ್ತಮ ವಾಗ್ಮಿಗಳು ಹಾಗೂ ಕಲಾಭಿಮಾನಿಗಳು ಆಗಿದ್ದರು.

ಸಿ.ಎನ್.ಪಾಟೀಲರ ಕಲೆಯ ಬಗೆಗಿನ ಆಳವಾದ ಅಭ್ಯಾಸವನ್ನು ತಿಳಿದುಕೊಂಡಿದ್ದ ದಾವಣಗೇರಿಯ ಸರ್ಕಾರಿ ಚಿತ್ರಕಲಾ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಹಿರೇಗೌಡರ ಕಲಾವಿದರನ್ನು ಒಂದು ವರ್ಷದವರೆಗೆ ಸದರೆ ಕಾಲೇಜಿನ ಸಂದರ್ಶನ ಪ್ರಾಧ್ಯಾಪಕರಾಗಿ ನಿರ್ವಹಿಸುವಂತೆ ಕೇಳಿದ್ದಕ್ಕೆ ಒಪ್ಪಿಕೊಂಡು ಅಲ್ಲಿಯ ವಿದ್ಯಾರ್ಥಿಗಳಿಗೆ ತಮ್ಮ ಕಲಾ ವಿಷಯವನ್ನು ಸಮಗ್ರವಾಗಿ ತಿಳಿಸಿರುವ ಸಂಗತಿ ತಿಳಿದುಬರುತ್ತದೆ.

೧೯೫೦ರಲ್ಲಿ ಕಾರವಾರದಲ್ಲಿ ಕಲಾ ಪ್ರದರ್ಶನವನ್ನು ಸಿ.ಎನ್.ಪಾಟೀಲರು ಏರ್ಪಡಿಸಿದ್ದರು. ಈ ಪ್ರದರ್ಶನದ ಉದ್ಘಾಟನೆಯನ್ನು ಫಿಶರ ಸುಪರಿಂಟೆಂಡೆಂಟ ಶ್ರೀ ಕಲ್ಯಾಣಿ ನೇತೃತ್ವದಲ್ಲಿ ಮುಂಬೈ ರಾಜ್ಯದ ಸರ್ಕಾರದ ಮುಖ್ಯ ಕಾರ್ಯದರ್ಶಿಯಾದ ಶ್ರೀತಯಾಬ್ಜಿ ಅವರಿಂದ ನಡೆಯಿತು. ಈ ಕಲಾ ಪ್ರದರ್ಶನವು ಅತ್ಯಂತ ಯಶಸ್ವಿಯಾಗಿ ನೆರವೇರಿತ್ತು. ಇದಲ್ಲದೇ ಬಿಜಾಪೂರ ಸೈನಿಕ ಶಾಲೆಯಲ್ಲಿ ಕಲಾ ಪ್ರದರ್ಶನವನ್ನು ಮಾರ್ಶಲ್ ಶ್ರೀ ಚವ್ಹಾಣರವರಿಂದ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿ ಬಿಜಾಪುರದ ಐತಿಹಾಸಿಕ ಕಟ್ಟಡಗಳ ಕಲಾಕೃತಿ ರಚನೆ ಮಾಡಿಕೊಡಲು ವಿನಂತಿಸಿಕೊಂಡರು. ಅದರಂತೆ ಈ ಕಲಾವಿದರು ಒಂದೊಂದು ಐತಿಹಾಸಿಕ ಸ್ಮಾರಕಗಳನ್ನು ಯತಾವತ್ತಾಗಿ ಚಿತ್ರಿಸಿ ಪ್ರಶಂಸೆಗೆ ಪಾತ್ರರಾದರು.

ಗದುಗಿನ ಶ್ರೀ ತೋಂಟದಾರ್ಯ ಮಠದಲ್ಲಿ ಹಾಗೂ ಅದರ ಕಲ್ಯಾಣಮಂಟಪದಲ್ಲಿ ಶ್ರೀ ಪಾಟೀಲರ ಕಲಾಕೃತಿಗಳು ರಾರಾಜಿಸುತ್ತಿವೆ. ಇದಲ್ಲದೆ ಗದಗ ಬೆಟಗೇರಿ ನಗರಸಭಾ ಭವನದಲ್ಲಿ ಭವ್ಯಗಾತ್ರದ ಹನ್ನೆರಡು ಗಣ್ಯ ವ್ಯಕ್ತಿಗಳ ಮತ್ತು ಆಗಿನ ನಗರಾಧ್ಯಕ್ಷರ ಕಲಾಕೃತಿಗಳನ್ನು ಮಾಡಿ ನಗರಸಭೆಯ ಹಿಂದಿನ ಅಧಿಕಾರಿಗಳನ್ನು ನೆನಪಿಸಿಕೊಳ್ಳುವಷ್ಟು ನೈಜವಾಗಿ ಮೂಡಿ ಬಂದಿವೆ. ಅಮೇರಿಕಾ, ಇಂಗ್ಲಂಡ್, ಕೆನಡಾ ದೇಶಗಳಲ್ಲಿಯೂ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಅಮೇರಿಕೆಯ ರೋಟರಿ ಪೌಂಡೇಶನ್‌ದವರು ಈ ಕಲಾವಿದರಿಂದ ಹತ್ತು ತೈಲವರ್ಣ ಕಲಾಕೃತಿಗಳನ್ನು ಪಡೆದುಕೊಂಡಿದ್ದು ಈ ಕಲಾವಿದರ ಕಲಾಪ್ರೌಢಿಮೆ ಎಷ್ಟಿತ್ತೆಂಬುದು ಕಂಡುಬರುತ್ತದೆ.

ಶ್ರೀಯುತರಿಗೆ ನಾಟಕ ಅಭಿನಯದಲ್ಲೂ ಆಸಕ್ತಿ ಮೊದಲಿನಿಂದಲೂ ಇದ್ದು ಹಲವಾರು ನಾಟಕವನ್ನು ಸ್ವತಃ ತಾವೇ ಬರೆದು ಆಡಿಸಿದ್ದಾರೆ. ಅಲ್ಲದೆ ತಾವೇ ಪಾತ್ರಗಳನ್ನು ತನ್ಮಯರಾಗಿ ಅಭಿನಯಿಸುತ್ತಿದ್ದರು. "ಶಾಂತಿ ಸಾಮ್ರಾಟ" ಎಂಬ ದೊಡ್ಡಾಟವು ರೇಡಿಯೊಂದರಲ್ಲಿ ಪ್ರಸಾರವಾಯಿತು ಮತ್ತು ವೀರರಸವಿರುವ "ರಾಷ್ಟ್ರವೀರ ನಾಟಕ" ನಾಡಿನಾದ್ಯಾಂತ ಅಭಿನಯಿಸಲ್ಪಟ್ಟಿದೆ. ಮೈಸೂರ ದಸರಾ ಸಂದರ್ಭದಲ್ಲಿ ಹಲವಾರು ನಾಟಕವನ್ನು ಆಡಿಸಿ ತಾವು ಅಂತಹ ನಾಟಕಗಳಲ್ಲಿ ಪಾತ್ರವನ್ನು ಮಾಡಿದ್ದಾರೆ. ಈ ಕಲಾವಿದರು ಚಿತ್ರಕಲೆಯಲ್ಲಿ ಪ್ರೌಢಿಮೆ ಪಡೆದಷ್ಟೇ ನಾಟಕ ರಂಗದಲ್ಲೂ ಹೆಚ್ಚು ಸೇವೆಸಲ್ಲಿಸಿದ್ದಾರೆ.

ಕಲಾವಿದರು ತಮ್ಮ ಕಲಾ ಚಟುವಟಿಕೆಯನ್ನು ಅವಿರತವಾಗಿ ಮತ್ತು ಜೀವನ ಅಂತ್ಯದವರೆಗೂ ನಡೆಸಿರುವುದು ತಿಳಿದುಬರುತ್ತದೆ. ಇದಲ್ಲದೆ ಕಲೆ ಸಾಹಿತ್ಯ ಕ್ರೀಡೆ ಆಧ್ಯಾತ್ಮ ನಾಡು ನುಡಿಯ ಬಗೆಗೆ



ಶ್ರೀ.ವಿ.ಟಿ.ಕಾಳೆ ಮತ್ತು ಕೆ.ವಿ.ಕುಂದಗೋಳರೊಂದಿಗೆ ಸಿ.ಎನ್.ಪಾಟೀಲರು



ಸಿ.ಎನ್.ಪಾಟೀಲ ದಂಪತಿಗಳಿಗೆ ಆರ್ಶೀವೃದಿಸುವುದು



ಗುರುವಂದನಾ ಕಾರ್ಯಕ್ರಮದಲ್ಲಿ ಸಿ.ಎನ್.ಪಾಟೀಲ
ದಂಪತಿಗಳಿಗೆ ಸನ್ಮಾನ



ಸುವರ್ಣ ಕರ್ನಾಟಕ ಸಂದರ್ಭದಲ್ಲಿ ಸಿ.ಎನ್.ಪಾಟೀಲರು ರಚಿಸಿದ ಕಲಾಕೃತಿಗೆ ಗದಗ ಉಸ್ತುವಾರಿ ಸಚಿವರು ಪೂಜೆಸಲ್ಲಿಸುತ್ತಿರುವದು



ಗದಗ ಉಸ್ತುವಾರಿ ಸಚಿವರೊಂದಿಗೆ ಸಮಾಲೋಚನೆಯಲ್ಲಿ ತೊಡಗಿರುವ ಸಿ.ಎನ್.ಪಾಟೀಲರು

ಐದುನೂರಕ್ಕೂ ಹೆಚ್ಚು ಭಾಷಣಗಳನ್ನು ಮಾಡಿರುತ್ತಾರೆ. ಹಾಗೂ ನೂರಾರು ಸತ್ಕಾರಗಳನ್ನು ಪಡೆದಿರುವ ಶ್ರೀಯುತರು ತಮ್ಮ ಕೊನೆಗಾಲದವರೆಗೂ ಕಲೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ತಿಳಿದುಬರುತ್ತದೆ.

ಹೀಗೆ ಸಿ.ಎನ್.ಪಾಟೀಲರವರು ತಮ್ಮ ವೈಯಕ್ತಿಕ ಜೀವನದ ಕಾರ್ಯಗಳೊಂದಿಗೆ ತಮ್ಮಲ್ಲಿರುವ ಪ್ರತಿಭೆಯನ್ನು ಚಿತ್ರಕಲೆ ನಾಟಕ, ಭಾಷಣ ಹಲವಾರು ಮಾಧ್ಯಮದಿಂದ ವ್ಯಕ್ತಪಡಿಸಿ ಪರಿಸರದಲ್ಲಿ ನಡೆಯುವ ಕಲಾ ಚಟುವಟಿಕೆಗಳನ್ನು ಸಕ್ರಿಯವಾಗಿ ಭಾಗವಹಿಸಿ ಅವುಗಳನ್ನು ಪ್ರಕಾಶಮಾನವಾಗಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಜೀವನದುದ್ದಕ್ಕೂ ಅವಿಶ್ರಾಂತವಾಗಿ ಕೊನೆಯ ಹಂತದವರೆಗೂ ಕಲಾಕ್ಷೇತ್ರದಲ್ಲಿ ಕೊಡುಗೆಯನ್ನಿತ್ತ ಸಿ.ಎನ್.ಪಾಟೀಲರು ದಿನಾಂಕ ೨೫.೦೬.೨೦೦೮ರಂದು ಗದುಗಿನ ಸ್ವ ನಿವಾಸದಲ್ಲಿ ನಿಧನರಾದರು.

ಅಧ್ಯಾಯ - ೫

ಸಿ.ಎನ್.ಪಾಟೀಲರ ಕಲಾಕೃತಿಗಳ ಹರವು, ವಸ್ತು ವಿಷಯ

ಅಧ್ಯಾಯ - ೫

ಸಿ.ಎನ್.ಪಾಟೀಲರ ಕಲಾಕೃತಿಗಳ ಹರವು, ವಸ್ತು ವಿಷಯ

ಕಲಾವಿದ ಶ್ರೀ ಸಿ.ಎನ್.ಪಾಟೀಲ ಅವರಿಂದ ಚಿತ್ರಿಸಲ್ಪಟ್ಟ ಚಿತ್ರಗಳ ಹರವು, ಮತ್ತು ವಿವಿಧ ಮಾಧ್ಯಮಗಳಲ್ಲಿ ಹರಡಿಕೊಂಡಿವೆ, ಅಧ್ಯಯನದ ದೃಷ್ಟಿಯಿಂದ ೧.ರೇಖಾಚಿತ್ರಗಳು, ೨. ವರ್ಣಚಿತ್ರಗಳು ಎಂದು ಎರಡು ಬಗೆಯಲ್ಲಿ ವಿಂಗಡಿಸಿಕೊಂಡಿದ್ದು, ಈ ಎರಡೂ ಮಾಧ್ಯಮಗಳಲ್ಲಿ ಮತ್ತೆ ವಿಷಯವಾರುಗಳಾಗಿ ವಿಂಗಡಿಸಿಕೊಂಡು ಪ್ರಸ್ತುತ ಪ್ರಬಂಧದಲ್ಲಿ ಬಳಸಿಕೊಂಡಿದೆ. ಈ ವಿವರಗಳು ಇಂತಿವೆ.

ಕಲಾಕೃತಿಗಳು

೧	೨
ರೇಖಾಚಿತ್ರಗಳು	ವರ್ಣಚಿತ್ರಗಳು
೧.೧. ನಿಸರ್ಗ ಚಿತ್ರಗಳು	೨.೧. ಶಿರಭಾವ ಚಿತ್ರಗಳು
೧.೨. ಸಾಮಾಜಿಕ ಚಿತ್ರಗಳು	೨.೨. ಪೂರ್ಣಪ್ರಮಾಣದ ಚಿತ್ರಗಳು
೧.೩. ದೇವತಾ ಚಿತ್ರಗಳು	೨.೩. ದೇವತಾ ಚಿತ್ರಗಳು
	೨.೪. ಸಂಯೋಜನ ಚಿತ್ರಗಳು
	೨.೫. ನಿಸರ್ಗಚಿತ್ರಗಳು

ಸಿ.ಎನ್.ಪಾಟೀಲರು ತಮ್ಮ ಕಲಾಕೃತಿಗಳ ರಚನೆಯ ಪೂರ್ವದಲ್ಲಿ ಆಯಾ ಕೃತಿಗಳ ಕರಡು ರೇಖೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ರಚಿಸಿರುವುದು ಅವರ ಶಿಷ್ಯ ವರ್ಗದವರಿಂದ ತಿಳಿದು ಬರುತ್ತದೆ. ಶ್ರೀಯುತರು ಒಂದು ಕೃತಿ ರಚನೆಗೆ ಇಳಿದರೆ ಅದರ ಕರಡು ರೇಖೆಗಳನ್ನು ತಮಗೆ ತೃಪ್ತಿ ಆಗುವವರೆಗೂ ರೇಖಾಚಿತ್ರಗಳನ್ನು ಬಿಡಿಸಿ ನೋಡಿ, ಅಳತೆಗೆ ಸಮತೋಲನ ಬರುವವರೆಗೂ ರೇಖಾಗಳನ್ನು ಹಾಕುತ್ತಲೇ

ಇರುತ್ತಿರುವುದು ತಿಳಿದು ಬರುತ್ತದೆ. ಅವರು ನೂರಾರು ರೇಖೆಚಿತ್ರಗಳನ್ನು ಬಿಡಿಸಿರುತ್ತಾರೆ. ಆದರೆ ಸಮಯದ ಅಭಾವದಿಂದಲೂ ಅವರು ಕಾಲವಾದ ನಂತರ ಅವುಗಳನ್ನು ಸರಿಯಾಗಿ ಸಂರಕ್ಷಣೆ ಮಾಡುದಿರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ಅವು ದೊರೆಯದ ಕಾರಣ ಕೆಲವೊಂದನ್ನು ಇಲ್ಲಿ ಮುದ್ರಣ ಮಾಧ್ಯಮದಿಂದ ನೀಡಲಾಗಿದೆ. ಮೊದಲೆರಡು ರೇಖಾಚಿತ್ರಗಳಲ್ಲಿ 'ದೊಡ್ಡಾಟವಾಡುತ್ತಿರುವ ಮನುಷ್ಯರ' ರೇಖಾಚಿತ್ರಗಳಿವೆ. ರೇಖೆಗಳ ಚಲನೆ ತೀವ್ರವಾಗಿದ್ದು, ಆಕೃತಿಗಳ ಬಟ್ಟೆಗಳ ನಿರಿಗೆಗಳು ಕಡಿಮೆ ರೇಖೆಗಳಲ್ಲಿ ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಆಕೃತಿಗಳು ಪ್ರಮಾಣ ಬದ್ಧವಾಗಿವೆ. ಹಾಕಿಕೊಂಡ ದೊಡ್ಡಾಟದ ಆಭರಣಗಳು, ವೇಷಭೂಷಣಗಳು, ಚಿತ್ರಗಳು ಸ್ಪಷ್ಟವಾಗಿ ರೇಖೆಯಲ್ಲಿ ಮೂಡಿಬಂದಿರುವುದು ತಿಳಿದು ಬರುತ್ತದೆ. ಮೂರನೆಯ ಚಿತ್ರದಲ್ಲಿ ಒಂದು ಬೆಟ್ಟದ ಮೇಲೆ ಚಿಕ್ಕಮಂಟಪ, ಅದರ ಸುತ್ತಲೂ ನೀರು ಸಣ್ಣದಾಗಿ ಹರಿಯುತ್ತಿರುವಂತಿದೆ. ಅದಕ್ಕೊಂದು ಸೇತುವೆ ಇದೆ. ಕಲಾವಿದರು ಆವೇಗವಾಗಿ ರೇಖೆಗಳನ್ನು ಹಾಕಿರುವುದು, ಮತ್ತು ದಪ್ಪ ಪೆಂನ್ಸಿಲ್‌ನಿಂದ ಅಲ್ಲಲ್ಲಿ ನೆರಳು ಬೆಳಕಿನ ಛಾಯೆಯನ್ನು ಚಿತ್ರಿಸಿರುತ್ತಾರೆ.

ರೇಖಾಚಿತ್ರಗಳಲ್ಲಿ ಪೆನ್ ಡ್ರಾಯಿಂಗ್‌ದಿಂದ ರಚಿತ ಕಲಾಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದ್ದು ತೈಲವರ್ಣ ಚಿತ್ರಗಳಲ್ಲಿ ಪೂರ್ಣಭಾವಚಿತ್ರಗಳು, ಜಲವರ್ಣ ನೈಸರ್ಗಿಕ ಚಿತ್ರಗಳು, ಭೂದೃಶ್ಯಗಳು ತೈಲ ಹಾಗೂ ಜಲವರ್ಣದಿಂದ ರಚಿತವಾಗಿವೆ.

ಸಿ.ಎನ್.ಪಾಟೀಲರ ವರ್ಣಚಿತ್ರಗಳು

ಕಲೆಯು ಸೌಂದರ್ಯವು, ಸಂತೋಷವು ಆಗಿದೆ. ಸುಂದರವಾದ ವ್ಯಕ್ತಿ ಚಿತ್ರವಾಗಲಿ, ನಿಸರ್ಗ ಚಿತ್ರಗಳಾಗಲಿ, ದೇವಾನುದೇವತೆಗಳ ಚಿತ್ರಗಳನ್ನು ಚಿತ್ರಿಸಿ ನೋಡುಗರಲ್ಲಿ ಆನಂದಾನುಭವವನ್ನು ಉಂಟುಮಾಡುವವರೇ ಕಲಾವಿದರುಗಳು. ಸಿ.ಎನ್.ಪಾಟೀಲರ ಕಲಾಕೃತಿಗಳು ಇದೇ ರೀತಿ ಅನುಭವವನ್ನು ಉಂಟುಮಾಡುತ್ತವೆ. ಅವರ ಕೃತಿಗಳಲ್ಲಿ ನೈಜತೆ ಇದೆ. ಸುಂದರ ವರ್ಣಗಾರಿಕೆ ಸರಳತೆಯಿಂದ ಕೂಡಿ ಅವು ನೋಡುಗರಲ್ಲಿ ಆನಂದ ತರುವಂತಿವೆ. ಅವರ ಕೆಲವು ಕೃತಿಗಳಲ್ಲಿ ಪಾಶ್ಚಾತ್ಯ ಕಲಾವಿದರ ಪ್ರಭಾವ ಅನುಕರಣೆ ಮಾಡಿರುವಂತೆ ಭಾಸವಾಗುತ್ತದೆ. ಸಿ.ಎನ್.ಪಾಟೀಲರು ನಿರಂತರ ಪ್ರಯತ್ನ ಪಡುವಂತವರಾಗಿದ್ದಾರೆ. ಅವರು ನಿವೃತ್ತಿಯ ನಂತರವು ಚಿತ್ರರಚನೆ ಮಾಡುತ್ತಿರುವುದು ತಿಳಿದು ಬರುತ್ತದೆ.

೧. ರೇಖಾಚಿತ್ರಗಳು

"ಅಭಿವೃದ್ಧಿಗಾಗಿ ಕಂಡುಕೊಂಡ ಹಲವಾರು ಮಾಧ್ಯಮಗಳಲ್ಲಿ ಚಿತ್ರಕಲೆಯೂ ಒಂದಾಗಿದೆ. ಚಿತ್ರಕಲೆಯಲ್ಲಿ ರೇಖೆಗಳು ತಾಯಿ ಬೇರಿದ್ದಂತೆ, ರೇಖೆಗಳಿಲ್ಲದೇ ಚಿತ್ರದ ಅಂತಸತ್ವವು ಪೂರ್ಣಗೊಳ್ಳುವುದಿಲ್ಲ."[೧]

---

೧. ಎನ್.ಮರಿಶಾಮಾಚಾರಿ -ಚಿತ್ರಕಲಾ ಪ್ರಪಂಚ, ಪು-೪೮೯

[illegible]

"ರೇಖಾಚಿತ್ರವು ಕಲೆಯ ಒಂದು ಪ್ರಕಾರ, ಅಲ್ಲದೆ ಅದು ಸಹಾಯಕ ಕಲೆ, ಕೆಲವರಿಗೆ ಅದು ಮೂಲಭೂತವಾದ ಕಲೆಯು ಆಗಿದೆ. ರೇಖಾಚಿತ್ರ ಪ್ರತ್ಯಕ್ಷವಾದ ಸೃಜನಶೀಲ ಅಭಿವೃದ್ಧಿಯ ಕ್ಷೇತ್ರವಾಗಿದ್ದು ಅದು ವಿವಿಧ ಮಾಧ್ಯಮದ ವಿಧಾನಗಳ ಕಾರ್ಯವಾಗಿದೆ. ಅದು ಸ್ವಯಂ ಪ್ರೇರಿತವಾಗಿರಬಹುದು. ಸಂಪೂರ್ಣವಾಗಿ ಕಾಲ್ಪನಿಕವಾಗಿರ ಬಹುದು. ಶೋಧನೆ ಅಥವಾ ಅನ್ವೇಷಣೆಯಾಗಿರಬಹುದು. ಹಲವು ವಿಧದ ರೇಖಾಚಿತ್ರಾತ್ಮಕವಾದ ಕ್ಯಾಲಿಗ್ರಫಿ, ಕಲಾಭಿಜ್ಞತೆಯಿಂದ ಕೂಡಿರಬಹುದು. ಅಥವಾ ಸ್ಮಂತಿಕೆಯ ಅಮೂರ್ತ ಮೌಲ್ಯದಿಂದ ಕೂಡಿರುವುದಾಗಿರಬಹುದು. ವಿಜ್ಞಾನಿ, ಏನಾದರೂ ರೇಖಾಚಿತ್ರಗಳ ಮೂಲಕ ಹೇಳಬಯಸಿದರೆ ಅದು ನವಶೋಧನೆಯ ವಿಚಾರವಾಗಿರುತ್ತದೆ. ಅಲ್ಲದೆ, ಪ್ರಾಯೋಗಿಕ ರೇಖಾಚಿತ್ರಗಳು ವಿಶೇಷತೆಯನ್ನೊಳಗೊಂಡಿರುತ್ತವೆ. ಅದರ ತಾಂತ್ರಿಕ ಸರಳತೆ ಎಂದರೆ ಕಲಾವಿದನ ಭಾವನೆಯ ಹೊಸ ಅಭಿವ್ಯಕ್ತಿಯೇ ಆಗಿರುತ್ತದೆ. ರೇಖಾಚಿತ್ರಗಳ ಮೂಲಕ ಚಿತ್ರಗಾರ ಮತ್ತು ಶಿಲ್ಪ ಹೊಸ ಕಲಾಭಾಷೆಯನ್ನು ದಿಟವಾಗಿ ಅಬಿವ್ಯಕ್ತಗೊಳಿಸಲು ಪ್ರಯತ್ನಿಸುತ್ತಾರೆ. ಇದು ಸಹ ವಿವಿಧ ಕಲಾಶೈಲಿಗಳಂತೆ ಕಲಾವಿದನ ವೈಯಕ್ತಿಕ ಕಲಾಶೈಲಿ ಎನಿಸಿಕೊಳ್ಳುತ್ತದೆ. ಕಲಾವಿದನ ರೇಖಾ ಚಿತ್ರಗಳು ಆತನನ್ನು ಮತ್ತು ಆತನ ಭಾವನಾಲಕ್ಷಣವನ್ನು ವ್ಯಕ್ತಗೊಳಿಸುತ್ತದೆ."[೨]

ರೇಖಾಚಿತ್ರಗಳು ಮುಖ್ಯವಾಗಿ, ರೇಖೆಗಳಿಂದ ರೂಪಿತವಾಗಿರುತ್ತವೆ. ಚಿತ್ರಕ್ಕೆ ರೇಖೆಗಳು ಜೀವಂತಿಕೆಯನ್ನು ನೀಡುತ್ತವೆ. ರೇಖಾಚಿತ್ರಗಳು ಸಮ್ಮಿಶ್ರಿತ ದೃಷ್ಟಿಯುಳ್ಳವಾಗಿದ್ದವು. ಅಲ್ಲದೆ, ಚಿತ್ರದಲ್ಲಿ ಕುಶಲತೆ ಒಂದು ಭಾಗವೇ ಆಗಿತ್ತು. ಕಾಲಾನುಕ್ರಮದಲ್ಲಿ ಸ್ವತಂತ್ರ ಅಭಿವ್ಯಕ್ತಿಯಾಗಿ ಮಾರ್ಪಾಟುಗೊಂಡಿತು. ಹಿಂದಿನ ಅನೇಕ ಚಿತ್ರಗಳು, ಕ್ರೆಯಾನ್, ಜಲವರ್ಣ, ಇಂಕ್, (ಶಾಯಿ) ಅಥವಾ ಲೇಖನಿಯಿಂದ ರಚಿಸಲ್ಪಡುತ್ತವೆ. ಬಣ್ಣದ ಬಳಪದಿಂದ ರಚಿಸಿದಂತವು ರೇಖಾಚಿತ್ರ ಮತ್ತು ವರ್ಣಚಿತ್ರದ ಪಾರ್ಶ್ವಕಲೆಯೆನಿಸಿತ್ತು. ಬಣ್ಣದ ರೇಖೆಗಳು ಬಣ್ಣದ ಆವರಣವನ್ನು ಸೃಜಿಸುತ್ತಿದ್ದವು, ಪುರಾತನ ಕಲೆ ನಿಶ್ಚಿತ ವಿಷಯದ ಮೇಲೆ ರಚಿತವಾದ ಅಥವಾ ಕಾಲ್ಪನಿಕ ಕೃತಿ ಆಗಿರುತ್ತಿತ್ತು. ಆಧುನಿಕ ಚಿತ್ರಕಲೆ ಇಂಥ ವಿಷಯದಿಂದ ಮುಕ್ತವಾಗಿದೆ. ಆಧುನಿಕ ರೇಖಾಚಿತ್ರ, ಕಲಾವಿದ ಸ್ವತಃ ರಚಿಸಿದ ಸೃಜನಶೀಲ ಕಲಾಕೃತಿಯನ್ನು ಹೆಸರಿಸುವ ಬಗ್ಗೆ ತನ್ನದೇ ಆದ ಅನಿಸಿಕೆಯನ್ನು ಕಾದಿರಿಸಿಕೊಂಡಿರುತ್ತಾನೆ.

ಸಿ.ಎನ್.ಪಾಟೀಲರ ರೇಖಾ ಚಿತ್ರಗಳು ಅನೇಕ ವಿಧದಲ್ಲಿವೆ. ಕಲಿಯುವ ಸಮಯದಲ್ಲಿ ದಿನನಿತ್ಯ ರಚಿಸುತ್ತಿದ್ದ ಸ್ಕೆಚ್‌ಗಳು ಈಗ ನೋಡಲು ಸಿಗುವುದಿಲ್ಲ. ಆಗ ಅವರ ಬಸ್‌ಸ್ಟ್ಯಾಂಡ್, ರೈಲ್ವೇ ಸ್ಟೇಷನ್‌ಗಳಲ್ಲಿ ಮತ್ತು ದೇವಾಲಯಗಳಲ್ಲಿ ಅವರ ಪ್ರಮುಖವಾಗಿ ರೇಖಾ ಚಿತ್ರ ರಚಿಸುತ್ತಿದ್ದರು.

ಇವರ ಕೆಲವು ನಿಸರ್ಗದ ರೇಖಾಚಿತ್ರಗಳು ಈ ಕೆಳಗಿನಂತಿವೆ. ಅವರ ಪೆನ್ ಮತ್ತು ಪೆನ್ಸಿಲಿನಿಂದ ಅನೇಕ ನಿಸರ್ಗ ಚಿತ್ರಗಳನ್ನು ರೇಖಾ ವಿನ್ಯಾಸದಲ್ಲಿ ರಚನೆಮಾಡಿದ್ದಾರೆ. ಅದರಲ್ಲಿ ಕೆಲವೊಂದು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

---

೨. ಎನ್.ಮರಿಶಾಮಾಚಾರಿ -ಚಿತ್ರಕಲಾ ಪ್ರಪಂಚ, ಪು-೪೮೯

ರೇಖಾ ಚಿತ್ರಗಳು

೫.೧.೧. ನಿಸರ್ಗ ಚಿತ್ರಗಳು

೧. ಅಜಂತಾ ಬೆಟ್ಟಗಳ ನಿಸರ್ಗ ದೃಶ್ಯ

೨. ದೇವಾಲಯದ ನಿಸರ್ಗ ದೃಶ್ಯ

೩. ಶ್ರೀಪಕ್ಕಿರೇಶ್ವರ ಮಠ ಮತ್ತು ಮಸೀದಿಯ ನಿಸರ್ಗದೃಶ್ಯ

೪. ಹಂಪಿಯ ತುಲಾಬಾರ

೫.೧.೨. ಸಾಮಾಜಿಕ ಚಿತ್ರಗಳು

೧. ಹೊಲದಲ್ಲಿ ರಾಶಿ ಮಾಡುವ ದೃಶ್ಯ

೨. ಸ್ವರಸ್ವತಿ ಮೂರ್ತಿ

೫.೧.೩. ದೇವತಾಚಿತ್ರಗಳು

೧. ಯಕ್ಷಗಾನ ರಾಮ ಮತ್ತು ರಾವಣ ಸಂಭಾಷಣೆ

೨. ದೊಡ್ಡಾಟ ದೃಶ್ಯ, ಶ್ರೀ ವೀರಭದ್ರೇಶ್ವರ ಅವತಾರ

ರೇಖಾ ಚಿತ್ರಗಳ ವಿವರಣೆ

೫.೧.೧. ನಿಸರ್ಗ ಚಿತ್ರಗಳು

೧. ಅಜಂತಾ ಪರಿಸರದ ಭೂ ದೃಶ್ಯ

ಈ ಚಿತ್ರಣವನ್ನು ಪೆನ್ಸಿಲ ಮಾಧ್ಯಮದಿಂದ ಚಿತ್ರಿಸಲಾಗಿದೆ. ಇದರಲ್ಲಿ ನಿಸರ್ಗದೃಶ್ಯಗಳ ಹಿನ್ನಲೆಯಲ್ಲಿ ಭವ್ಯವಾದ ಗುಡ್ಡಗಳನ್ನು ಕಾಣುತ್ತೇವೆ. ಮತ್ತು ಅಜಂತಾ ಗುಹೆಗಳಿಗೆ ಎಡಭಾಗದಲ್ಲಿ ಕಲ್ಲು ಬಂಡೆಗಳ ಮೇಲೆ ಹೋಗುವ ದಾರಿ ಮಧ್ಯದಲ್ಲಿ ಜುಳುಜುಳು ಹರಿಯುತ್ತಿರುವ ವಾಗೇರ ಎಂಬ ನದಿಯು ಹರಿದಿದೆ. ಮಧ್ಯಭಾಗದಲ್ಲಿ ದೊಡ್ಡದಾದ ಬೆಟ್ಟ ಇದೆ. ಬೆಟ್ಟದ ತುದಿಯಲ್ಲಿ ಒಂದು ಮಂದಿರ ಇದೆ. ಇಲ್ಲಿಗೆ ಹೋಗುವ ಮಾಗವನ್ನು ಚಿತ್ರಿಸಿದ್ದಾರೆ. ಚಿತ್ರದ ಒಂದು ಭಾಗ ಮೋಡ ಇದ್ದು. ಮೂರು ಭಾಗ ಬೆಟ್ಟಗಳು ಗುಹೆಗಳನ್ನು ನದಿಯ ಚಿತ್ರಣವನ್ನು ಚಿತ್ರಿಸಿದ್ದಾರೆ. ಈ ಚಿತ್ರದ ನೆರಳು ಬೆಳಕಿನಿಂದ ಕೂಡಿದ್ದು. ದೂರ ಸಮೀಪದ ಯಥಾದರ್ಶನ ತತ್ವವು ಸ್ಪಷ್ಟವಾಗಿ ಕಂಡು ಬರುತ್ತದೆ. ಇದು ಸಿ.ಎನ್.ಪಾಟೀಲರವರು ಕಲಾಕೃತಿಯ ಕಡುಪತ್ರಿಯನ್ನು ರಚಿಸಿದ್ದು, ಉತ್ತಮ ರೇಖೆಗಳಿಂದ ಕೂಡಿದ ಚಿತ್ರಣವಾಗಿದೆ.

೨. ದೇವಾಲಯ

ಈ ಚಿತ್ರಣವು ಕಪ್ಪು ಪೆನ್ನಿನಿಂದ ಸ್ಪಷ್ಟವಾದ ರೇಖೆಗಳಿಂದ ಪೂರ್ಣಗೊಳಿಸಿದ್ದಾರೆ. ಒಂದು ಭಾಗ ಆಕಾಶವಿದ್ದು ಮೂರು ಭಾಗ ದೇವಾಲಯ ರಸ್ತೆಯ ಗಿಡಗಳಿಂದ ಸಂಯೋಜನೆ ಚಿತ್ರಣವಿದೆ. ಸಮೀಪದ ಎಡಭಾಗದಲ್ಲಿ ಮಂಟಪವಿದೆ. ಅದರ ಮುಂದೆ ರಸ್ತೆ ಮತ್ತು ಸಣ್ಣ ಗಿಡಗಳಿವೆ. ಮಧ್ಯಭಾಗದ ಮೇಲೆ

ದ್ವಾರ ಬಾಗಿಲ ಎದ್ದು ಅದರ ಹಿಂದೆ ದೇವಾಲಯವಿದೆ. ದೇವಾಲಯ ಬಲಭಾಗದಲ್ಲಿ ಗಿಡಗಳನ್ನು ಕಾಣುತ್ತೇವೆ. ಹಿನ್ನಲೆಯಲ್ಲಿ ದೂರವಿರುವ ಗಿಡಗಳು ಕಾಣುತ್ತವೆ. ಈ ಚಿತ್ರಣವು ಅಸ್ಪಷ್ಟವಾದ ರೇಖೆಗಳಿಂದ ಕೂಡಿದರು. ಸ್ಪಷ್ಟವಾದ ವಿಷಯ ತಿಳಿದು ಬರುತ್ತದೆ.

೩. ಮಸೀದಿ

ಈ ಚಿತ್ರದಲ್ಲಿ ಕಪ್ಪು ಪೆನ್ನಿನಿಂದ ಸ್ಪಷ್ಟವಾದ ರೇಖೆಗಳಿಂದ ಕೂಡಿದೆ. ಹಿನ್ನಲೆಯಲ್ಲಿ ದೂರವಿರುವ ಗಿಡಮರಗಳಿದ್ದು ಎಡಭಾಗದಲ್ಲಿ ಮಸೀದಿ ಅದರ ಪಕ್ಕದಲ್ಲೇ ದೇವಸ್ಥಾನದ ಗೋಪುರ ಕಾಣುತ್ತೇವೆ. ಅದರ ಸುತ್ತಲೂ ಕಾಂಪೌಂಡ್ ಇದ್ದು ಬಲಭಾಗದಲ್ಲಿ ಮಸೀದಿ ಒಳಗೆ ಹೋಗುವ ಧ್ವಾರ ಬಾಗಿಲು ಇದೆ. ಸಮೀಪದಲ್ಲಿ ಸಣ್ಣ ಸಣ್ಣ ಗಿಡಗಳು ಮುಂದೆ ದಾರಿಯನ್ನು ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಿದ್ದಾರೆ. ಇದರಲ್ಲಿ ದೂರ ಮತ್ತು ಸಮೀಪದ ಯಥಾದರ್ಶನ ತತ್ವವು ಸ್ಪಷ್ಟವಾಗಿ ಕಾಣುತ್ತದೆ.

೪. ತುಲಾಭಾರ ಹಂಪಿ

ಈ ಚಿತ್ರಣವನ್ನು ಪೆನ್ಸಿಲಿನಿಂದ ರೇಖೆಗಳಿಂದ ಪೂರ್ಣಗೊಳಿಸಿದ್ದಾರೆ. ಪ್ರಧಾನ ರೇಖೆಗಳಿಂದ ತುಲಭಾರವನ್ನು ಸ್ಪಷ್ಟವಾಗಿ ರೇಖೆಗಳಿಂದ ಚಿತ್ರಿಸಿದ್ದಾರೆ. ಹಿನ್ನಲೆಯಲ್ಲಿ ಎಡಭಾಗದಲ್ಲಿ ಕಲ್ಲು ಬಂಡೆಗಳಿವೆ. ದೂರವಾಗಿ ಕಾಣುತ್ತಿರುವ ಬೆಟ್ಟಗಳಿವೆ. ಬಲಭಾಗದಲ್ಲಿ ಅರ್ಧಭಾಗ ಕಾಣುತ್ತಿರುವ ಮಂಟಪವಿದೆ. ತುಲಾಭಾರ ಮುಂದೆ ಬಲಭಾಗದಲ್ಲಿ ಒಂದು ಗಿಡವಿದೆ. ದೂರ ಮತ್ತು ಸಮೀಪದ ಯಥಾದರ್ಶನ ತತ್ವವು ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಿದ್ದಾರೆ.

೫.೧.೨. ಸಾಮಾಜಿಕ ಚಿತ್ರಗಳು

೧. ರಾಶಿ ಮಾಡುವಲ್ಲಿ ನಿರತ

ಈ ಚಿತ್ರಣವನ್ನು ಕಪ್ಪು ಪೆನ್ನಿನಿಂದ ಸ್ಪಷ್ಟವಾದ ರೇಖೆಗಳಿಂದ ಪೂರ್ಣಗೊಳಿಸಿದ್ದಾರೆ. ಇದು ದೈನದಿಂನ ರೇಖಾ ಚಿತ್ರವಾಗಿದೆ. ಇದರಲ್ಲಿ ವ್ಯಕ್ತಿಗಳು ಹಲವಾರು ಇದ್ದರು ಅಸ್ಪಷ್ಟವಾಗಿ ರಚಿಸಿದ್ದಾರೆ. ಎಡಭಾಗದಲ್ಲಿ ಎತ್ತರದ ಅಟ್ಟಮ ಮೇಲೆ ನಿಂತು ರಾಶಿ ಸುರಿಯುತ್ತಿರುವುದು. ಬಲಭಾಗದಲ್ಲಿ ಬಿತ್ತ ಬಡೆಯುತ್ತಿರುವುದು ಮಧ್ಯಭಾಗದಲ್ಲಿ ಧಾನ್ಯವನ್ನು ತಂದು ಕೊಡುತ್ತಿರುವ ಚಿತ್ರವಿದೆ. ಹಿನ್ನಲೆಯಲ್ಲಿ ಗಿಡ, ಗುಡ್ಡಗಳು ಕಾಣುತ್ತವೆ. ಅಸ್ಪಷ್ಟವಾದ ಮಾನವಾಕೃತಿ ಇದ್ದರು, ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ.

೨. ಯಕ್ಷಗಾನ

ಈ ಚಿತ್ರಣವನ್ನು ಕಪ್ಪು ಸ್ಕೆಚ್ ಪೆನ್ನಿನಿಂದ ಚಿತ್ರಿಸಲಾಗಿದೆ. ಇದರಲ್ಲಿ ಮೂವರು ಮಾನವಾಕೃತಿಗಳಿದ್ದು, ರೇಖೆಗಳಿಂದ ಪೂರ್ಣಗೊಳಿಸಿದ್ದಾರೆ. ಕಿರೀಟ ಮೈಯಲ್ಲಿದ್ದ ಆಕ್ಷರಣಗಳು ಸ್ಪಷ್ಟವಾದ ನಕ್ಷೆಯಿಲ್ಲದಿದ್ದರೂ ಸಹ ಉಡುಗೆ-ತೊಡುಗೆಗಳನ್ನು ಸಮರ್ಪಕವಾಗಿ ಕಾಣುವಂತೆ ಇವೆ. ಒಬ್ಬರ ಕೈಯಲ್ಲಿ ಬರ್ಚಿಯು ಹಿಡಿದಿದ್ದು ಅವನ ಹಿಂದೆ ಮಹಿಳೆಯು ನಿಂತಿದ್ದು, ಎದುರಗಡೆ ಮತ್ತೊಬ್ಬ ವ್ಯಕ್ತಿ ನಿಂತಿದ್ದು ಅವನು

ಶಂಕು ಆಕಾರದ ಬರ್ಚಿಯು ಹಿಡಿದುಕೊಂಡಿರುವಂತೆ ಕಾಣುತ್ತದೆ. ಇವರ ಮುಖದಲ್ಲಿ ಕಣ್ಣು, ಮೂಗು, ಬಾಯಿ ಸ್ಪಷ್ಟವಾದ ರೇಖೆಗಳಿಂದ ರಚಿಸಿದೆ. ಇಂದೊಂದು ಉತ್ತಮ ರೇಖಾ ಚಿತ್ರಣವಾಗಿದೆ.

೩. ಧಾರ್ಮಿಕ ಹಿನ್ನಲೆ

ಈ ಚಿತ್ರಣವನ್ನು ಕಲಾಚಾರ್ಯ ಸಿ.ಎನ್.ಪಾಟೀಲರವರು, ಕಪ್ಪು ಕಡ್ಡಿ ಪೆನ್ನಿನಿಂದ ಸ್ಪಷ್ಟವಾದಿ ರೇಖೆಗಳಿಂದ ಪೂರ್ಣಗೊಳಿಸಿದ್ದಾರೆ. ಕಿರೀಟ ಆಭರಣಗಳನ್ನು ಮಿತವಾಗಿ ಕೇವಲ ರೇಖೆಗಳಿಂದ ಚಿತ್ರಿಸಲಾಗಿದೆ. ಮುಖದಲ್ಲಿ ಪೂರ್ಣವಾಗಿ ಕಣ್ಣು, ಮೂಗು ಸ್ಪಷ್ಟವಾಗಿಲ್ಲ. ಅವುಗಳ ಪೂರ್ಣತೆಯ ಅನುಭವ ಬರುವಂತೆ ಸೀಮಿತ ರೇಖೆಗಳಿಂದ ಚಿತ್ರಿಸಲಾಗಿದೆ. ಇವನ ಹಿಂದೆ ಕೈಯಲ್ಲಿ ದೀಪ, ಹಣ್ಣು, ಹಂಪಲ ಮುಂತಾದವುಗಳನ್ನು ಹಿಂಡಿದುಕೊಂಡು ಸೇವಕ ನಿಂತಿದ್ದಾನೆ. ವೀರಭದ್ರೇಶ್ವರನ ಕೈಯಲ್ಲಿ ಖಡ್ಗಾ ಹಿಡಿದುಕೊಂಡಿರುವುದು ತಲೆಯ ಮೇಲೆ ಕಿರೀಟ ಇದೆ. ಭೂತದೇವ ಪೂಜೆಯಲ್ಲಿ ಮಗ್ನವಾಗಿ ಕೈಯಲ್ಲಿ ಗಧೆ ಹಿಡಿದುಕೊಂಡು ಕುಳಿತಿರುವುದು, ಪಕ್ಕದಲ್ಲಿ ಸ್ತ್ರೀ ತನ್ನ ಹಣೆಗೆ ಕೈಹಚ್ಚಿ ಮನಕಾಲು ಊರಿ ಕುಳಿತ್ತಿದ್ದಾಳೆ. ಈ ಚಿತ್ರಣವನ್ನು ಉತ್ತಮ ರೇಖೆಗಳಿಂದ ಕೂಡಿದೆ.

೫.೧.೩. ದೇವತಾ ಚಿತ್ರ

೧. ಸರಸ್ವತಿ

ಈ ಶಿಲ್ಪದ ಚಿತ್ರಣದಲ್ಲಿ ಪೆನ್ಸಿಲ್‌ನಿಂದ ಮತ್ತು ಸ್ಕೆಚ್ ಪೆನ್ನಿನಿಂದ ರಚಿಸಿದ್ದಾರೆ. ಇದರ ಮೇಲೆ ತಿಳಿಯಾಗಿ ಜಲವರ್ಣದಿಂದ ಲೇಪನ ರಚಿಸಿದ್ದಾರೆ. ನಾಜೂಕಾದ ಶಿಲೆಗಳನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಈ ಚಿತ್ರಣದಲ್ಲಿ ಪ್ರಮಾಣ ಬದ್ಧತೆ ಮತ್ತು ಆಕೃತಿಯು ಸೂಕ್ಷ್ಮ ವಿವರಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಕೈಯಲ್ಲಿ ಪುಸ್ತಕ ನವಿಲುಗಳ ವಿವಿಧ ಆಯುಧಗಳು ತಲೆಯ ಮೇಲೆ ಕಿರೀಟ ಮೈಮೇಲೆ ಅನೇಕ ರೀತಿಯ ಆಭರಣಗಳನ್ನು ಧರಿಸಿದ್ದಾಳೆ. ಹಿನ್ನಲೆ ಸುತ್ತಲೂ ಪ್ರಭಾವಳಿ ಅಕ್ಕ ಪಕ್ಕ ಸೇವಕಿಯರು ಚಾಮರ ಹಿಡಿದುಕೊಂಡು ನಿಂತಿರುವ ಮೂರ್ತಿ ಇದೆ. ಅದರ ಮೇಲೆ ಅಲಂಕಾರಿಕ ನಕ್ಷೆ ಮೇಲ್ಭಾಗದ ಮಧ್ಯೆ ಸಿಂಹಮುಖವಿದೆ. ಕೆಳಗಡೆ ಗದ್ದುಗೆಯ ಭಾಗದಲ್ಲಿ ನವಿಲು ಇದ್ದು ಅದರ ಎಡಭಾಗ ಮತ್ತು ಬಲ ಭಾಗ ಬಲಭಾಗದಲ್ಲಿ ಸೇವಕಿಯರ ಮೂರ್ತಿಯ ಚಿತ್ರಣವಿದೆ. ಎರಡು ಭಾಗದ ತುದಿಯಲ್ಲಿ ಆನೆಯ ಮುಖವಿದೆ. ಇದರಲ್ಲಿ ಸೂಕ್ಷ್ಮ ರೇಖೆಗಳಿಂದ ಕೂಡಿದ್ದು ಪ್ರತಿಯೊಂದು ಮೂರ್ತಿಯು ಸ್ಪಷ್ಟವಾಗಿ ಕಾಣುವಂತೆ ಉತ್ತಮ ಚಿತ್ರಣವನ್ನು ಚಿತ್ರಿಸಿದ್ದಾರೆ.

ವರ್ಣಚಿತ್ರಗಳು

"ಚಿತ್ರಕಾರರು ವಸ್ತು"ದೇವರು ಮತ್ತು ಅವನ ನಿಯಮಗಳು ಹಾಗೂ ಸೃಷ್ಟಿಯಾಗಿದ್ದವು. ನಂತರದ ಕಾಲದ ಕಲಾವಿದನಿಗೆ ದೈವಿಕ ಶಕ್ತಿಗಳನ್ನು ಸಹ ಮಾನವರಂತೆ ಕಾಣುವ ರೀತಿಯಲ್ಲಿ ಚಿತ್ರಿಸಬೇಕಾದ ಪ್ರಮೇಯವಿತ್ತು. ಆದರೆ ಚಿತ್ರಕಾರನಿಗೆ ಮನುಷ್ಯನ ಆಕಾರ ರೂಪುರೇಷೆಗಳು ಕರಗತವಾಗಿದ್ದವು ಮನುಷ್ಯ ರೂಪದ ವಿವಿಧತೆ, ಗಾಂಭಿರ್ಯ, ತುಂಬಿಬಿಟ್ಟವು ಪುನರುಜ್ಜೀವನದ ನಂತರದ ಚಿತ್ರಗಳು ಯೋಧನಾಗಿ,

[illegible]

[illegible]

[illegible]

[illegible]

ನಿಸರ್ಗ ಚಿತ್ರಗಳು



೧. ಅಜಂತಾ ಪರಿಸರದ ಭೂದೃಶ್ಯ.



೨. ದೇವಾಲಯ.



೩. ಮಸೀದಿ.



೯. ತುಲಾಭಾರ ಹಂಪಿ.



೧. ರಾಶಿ ಮಾಡುವಲ್ಲಿ ನಿರತ.



೨. ಯಕ್ಷಗಾನ



೩.ಧಾರ್ಮಿಕ ಹಿನ್ನಲೆ



ಶ್ರೀ ಸಿ. ಎನ್. ಪಾಟೇಲರ ಇನ್ನೊಂದು ಕೃತಿ "ಸರಸ್ವತಿ"
(ಶ್ರೀ ತ್ರಿಕೂಟೇಶ್ವರ ಗುಡಿಯಲ್ಲಿನ ಸರಸ್ವತಿ ಮಂದಿರದಲ್ಲಿ ಪ್ರತಿಷ್ಠಾಪಿತವಾಗಲಿದೆ.

೧.ಸರಸ್ವತಿ

ಯಾಚಕನಾಗಿ ಅಪ್ಸರೆಯಾಗಿ ವೇಶ್ಯೆಯರು, ರಾಜನಾಗಿ, ರಾಣಿಯಾಗಿ, ಮಕ್ಕಳಾಗಿ ದೊರೆತ ಎಲ್ಲ ರೀತಿಯ ಕಥೆಗಳಲ್ಲಿ ಅನೇಕ ಹಿನ್ನಲೆ ಹಾಗೂ ವೇಷಭೂಷಣಗಳಲ್ಲಿ ಮಾನವನ್ನು ಚಿತ್ರಿಸಿದೆ. ಹಾಗೂ ಚಿತ್ರದಲ್ಲಿನ ಕೆಳತಳಿಯ ಪಾತ್ರರು ನಟರಾಗಿದ್ದರೇ ಹೊರತು ಅವರ ಜೀವಿಸಿದ ದೃಶ್ಯವಾಗಿರಲಿಲ್ಲ. ಚಿತ್ರಗಳು ದೊಡ್ಡದಾಗಿದ್ದು, ಬಹುತೇಕ ಒಳಾಂಗಣದಲ್ಲಿ ಚಿತ್ರಿಸಿದಂತದಾಗುತ್ತಿತ್ತು. ಚಿತ್ರಿದಲ್ಲಿನ ಭೂದೃಶ್ಯವನ್ನು ನೆನಪಿನಿಂದಲೋ ಅಥವಾ ಮೊದಲೇ ಸಣ್ಣ ಅಂಕನೆಗಳನ್ನು ರಚಿಸಿಕೊಂಡೋ ಬಿಡಿಸುತ್ತಿದ್ದರು. ವಿಶೇಷ ಹಾಗೂ ಕ್ಲಿಷ್ಟ ಸಂಯೋಜನೆಗಳಿಗೆ ಚಿತ್ರದಲ್ಲಿ ಬರುವ ದೃಶ್ಯದ ಕಿರಿಮಾದರಿಯೊಂದನ್ನು ರಚಿಸಿಕೊಂಡು ಅದರಲ್ಲಿ ಕಿರುಗಾತ್ರದ ಮೇಣದಲ್ಲಿ ಮಾಡಲ್ಪಟ್ಟ ರೂಪದರ್ಶಿಯ ಮಾದರಿಯನ್ನು ಇರಿಸುತ್ತಿದ್ದರು."[೩] ಇದರಿಂದ ಚಿತ್ರ ರಚನೆಯುದ್ದಕ್ಕೂ ನೆರಳು ಬೆಳಕಿನ ವಿವರಗಳು ಸಮವಾಗಿ, ದೃಕ್ ದರ್ಶನದ ಆಯಾಮಗಳು ನಂಬಿಕೆ ಹುಟ್ಟಿಸುವ ರೀತಿಯದಾಗಿ ಚಿತ್ರಿತವಾಗುವಲ್ಲಿ ಸಹಾಯಕವಾಗುತ್ತವೆ. ಈ ಭೂ ದೃಶ್ಯ ಹಾಗೂ ವಸ್ತುವಿನ ವಿವರಗಳನ್ನು ಅವರು ಎಂಥಲ್ಲಿ ಜೀವಿಸುತ್ತಾರೆಂಬುದನ್ನು ಮತ್ತು ಸ್ಥಿರ ಚಿತ್ರದ ವಿವರಗಳನ್ನು ಅವರು ಎಂಥ ವಸ್ತುಗಳನ್ನು ಉಪಯೋಗಿಸುತ್ತಾರೆಂಬುದನ್ನು ಸೂಚಿಸಲು ನೀಡಲಾಗುತ್ತದೆ.

"ಭಾರತದಲ್ಲಿ ಮೊಗಲರ ಕಾಲದಲ್ಲಿ ಮೊದಲಬಾರಿಗೆ ಭಾವಚಿತ್ರ ರಚನೆಗೆ ಬಹಳವಾದ ಪ್ರಾಮುಖ್ಯತೆ ದೊರೆಯಿತು. ಆಸ್ಥಾನಗಳಲ್ಲಿ ಅದು ಮುಂದೆ ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿ ಬಲವಾದ ಪ್ರಭಾವವನ್ನು ಬಳಸಿಕೊಂಡಿತು. ಇಲ್ಲಿಗೆ ಬಂದ ಬ್ರಿಟೀಷ್ ಕಲಾವಿದರಷ್ಟೇ ಉತ್ತಮವಾಗಿ ನಮ್ಮ ಕಲಾವಿದರೂ ಭಾವ ಚಿತ್ರ ರಚನೆಯಲ್ಲಿ ಕಾರ್ಯ ನಡೆಸಿದರು.

ಭಾವ ಚಿತ್ರರಚನೆ ನೋಡುಗನಿಗೆ ಸಾಧಾರಣವೆನ್ನಿಸಿದರೂ, ಕಲಾವಿದನಿಗೆ ಸುಲಭದ ಕೆಲಸವಲ್ಲ, ಇತರ ರೀತಿಯ ಚಿತ್ರರಚನೆಗಳನ್ನು ಪೂರ್ಣ ಖಾಸಗಿ ಕೋಣೆಯಲ್ಲಿ ಅಲ್ಲವಾದರೂ, ಮನಸ್ಸಿನ ಮೂಲೆಯೊಂದರಲ್ಲಿ ಚಿಂತಿಸುತ್ತಲೇ ಚಿತ್ರ ಪೂರ್ಣವಾದ ಮೇಲೆ ಅದನ್ನು ಸಾರ್ವಜನಿಕ ಟೀಕೆಗೆ ತಡೆದಿಡಬಹುದು. ಆದರೆ ಭಾವ ಚಿತ್ರ ರಚನೆಯನ್ನು ಸಾರ್ವಜನಿಕವಾಗಿ ಮಾಡಬೇಕು ಇಂದು ಕಲಾವಿದನ ಗಾಯಕನಂತೆ, ನಟಿಸುವ ನಟನಂತೆ ಪ್ರೇಕ್ಷಕನಿಂದ ತತ್‌ಕ್ಷಣ ಪ್ರತಿಕ್ರಿಯೆ ಲಭಿಸುತ್ತದೆ. ಇಲ್ಲಿ ಕಲಾವಿದ ತನ್ನ ನಿರ್ಧಾರಗಳೊಂದಿಗಷ್ಟೇ ಅಲ್ಲದೇ ರೂಪದರ್ಶಿಯ ವ್ಯಕ್ತಿತ್ವದೊಂದಿಗೂ ಸೇರಿಸಬೇಕಾಗುತ್ತದೆ. ಚಿತ್ರರಚನೆಯ ಸಾಮಾನ್ಯ ಸಮಸ್ಯೆಗಳೊಂದಿಗೆ ಇಲ್ಲಿ ಚಿತ್ರದ ವಸ್ತುವೇ ಚಿತ್ರದ ಪ್ರಥಮ ಟೀಕಾಕಾರನೂ ವಿಮರ್ಶಕನೂ ಆಗುವ ಸಂಗತಿ ಬಹಳ ಸಂಕಟಕ್ಕೀಡುಮಾಡುತ್ತದೆ. ಮುಂದಿರುವ ರೂಪದರ್ಶಿಯನ್ನು ಚಿತ್ರಿಸುವುದಷ್ಟೇ ಅಲ್ಲ ಸಮಾಜಕ್ಕೆ ಒಂದು ಉತ್ತಮ ತೊಡುಗೆಯಾಗಿ ಕಲಾವಿದರು ರಚನೆ ಮಾಡುತ್ತಾರೆ.

ವಿಶಿಷ್ಟ ರೀತಿಯಲ್ಲಿ ಚಿತ್ರಕಲಾವಿದ ಸಿ.ಎನ್.ಪಾಟೀಲರು ಭಾವಚಿತ್ರಣ ನಿಸರ್ಗ ಚಿತ್ರಣ ಸಂಯೋಜನ ಚಿತ್ರಣಗಳನ್ನು, ಪಾಶ್ಚಿಮಾತ್ಯ ಪ್ರಭಾವ ಮೇಲೆ ವೈಯಕ್ತಿಕ ಶೈಲಿಯಿಂದ ಜಲವರ್ಣ, ತೈಲವರ್ಣ,

೩. ಕೆ.ರವಿಕುಮಾರ ಕಾಶಿ -ಚಿತ್ರಕಲಾ ಪ್ರಪಂಚ, ಪು-೩೬೧

ಮಿಶ್ರಮಾಧ್ಯಮದಿಂದ ಸಾವಿರಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಅಧ್ಯಯನ ಸಮಪರ್ಕವಾದ ಚಿತ್ರಣಗಳನ್ನು ಒಳಪಡಿಸಿಕೊಂಡು ವಿವರಣೆಯನ್ನು ನೀಡಿದೆ."[೪]

೫.೨.೧. ಶಿರಭಾವ ಚಿತ್ರಗಳು

೧. ಮೌಲಾನ ಅಬ್ದುಲ್ ಕಲಾಮ್ ಆಝಾದ್

೧೯೫೭ರಲ್ಲಿ ತೈಲವರ್ಣ ಮಧ್ಯದಲ್ಲಿ "೨೦x೩೦" ಅಳತೆಯ ಕ್ಯಾನವಾಸ್ ಮೇಲೆ ಚಿತ್ರಿಸಿದ ಅಬ್ದುಲ್ ಕಲಾಮರವರು ಭಾವ ಚಿತ್ರವಿದು. ಇದು ಆಝಾದ್ ಬ್ಯಾಂಕ್ ಗದಗನಲ್ಲಿ ಸಂಗ್ರಹ ಗೊಂಡಿದೆ. ಕಟ್ಟಿಗೆಯ ಚೇರು ಮೇಲೆ ಪುಸ್ತಕವನ್ನು ಹಿಡಿದು ಕುಳಿತ್ತಿದ್ದಾರೆ. ತಲೆಯ ಮೇಲೆ ಕಪ್ಪು ವರ್ಣದ ಟೋಪಿ ಇದೆ. ತಿಳಿ ಹಳದಿಯ ಕೋಟನ್ನು ಧರಿಸಿದ್ದಾರೆ. ಮುಖದಲ್ಲಿ ಸೌಮ್ಯತೆಯಿಂದ ಗಂಭೀರವಾಗಿ, ಕಣ್ಣಿನ ದೃಷ್ಟಿಕೋನ, ನೇರವಾಗಿದೆ, ಬಿಲಿ, ಕುಂಚುಮೀಸೆ, ಫ್ರೆಂಚ್‌ಕಟ್ ಗಡ್ಡವಿದೆ. ನೇರವಾದ ಮೂಗು, ಗಲ್ಲದಲ್ಲಿ ಮೂಡಿದ ಮಡಿಕೆ ಸ್ಪಷ್ಟವಾಗಿ ಚಿತ್ರದಲ್ಲಿ ಮೂಡಿ ಬಂದಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣದ ಬಟ್ಟೆಯ ಮೈವಳಿಕೆಯ ತುಂಬಾ ನೈಜವಾಗಿ ಚಿತ್ರಿಸಿದ್ದಾರೆ. ನೆರಳ ಬೆಳಕಿನ ಛಾಯೆಯನ್ನು ಸ್ಪಷ್ಟವಾಗಿ ಕಾಣುತ್ತವೆ. ಪಾಟೀಲರು ತಮ್ಮ ವಿಶೇಷ ಕಲಾ ಕೌಶಲ್ಯದಿಂದ ಈ ಭಾವಚಿತ್ರವನ್ನು ರಚಿಸಿದ್ದಾರೆ.

೨. ಲಾರ್ಡ್ ಬೇ-ಟನ್ ಪಾವೆಲ್

ಈ ಶಿರಭಾವ ಚಿತ್ರವು ೧೪x೧೮ ಅಳತೆಯ ೧೯೫೪ರಲ್ಲಿ ಜಲವರ್ಣ ಮಾಧ್ಯಮದಿಂದ ರಚಿಸಿದ್ದಾರೆ. ಬಿಳಿ ವರ್ಣ ಮಿಶ್ರಿತ ಫೆಬ್ರಿಕ್ ಮಾಧ್ಯಮ ಬಳಸಿದ್ದಾರೆ. ಈ ಚಿತ್ರವು ಮುನ್ಸಿಪಾಲ್ ಹೈಸ್ಕೂಲ್‌ನಲ್ಲಿ ಸಂಗ್ರಹವಾಗಿದೆ. ಮುಖದಲ್ಲಿ ಮಂದಹಾಸ ನಗೆ ಇದ್ದು ಕಣ್ಣು ಕಂದು ವರ್ಣದಿಂದ ನೈಜವಾಗಿ ಚಿತ್ರಿಸಿದ್ದಾರೆ. ತಲೆಯ ಮೇಲೆ ಹಸಿರು ಮತ್ತು ಹಳದಿವರ್ಣದ ಪಟ್ಟೆಯ ಪೇಠಾ ಇದೆ. ಕೊರಳಲ್ಲಿ ತಿಳಿ ನೀಲಿ ವರ್ಣದ ಟೈ ಹಾಕಿಕೊಂಡಿದ್ದಾರೆ. ಸ್ಕೌಟ್ ಮತ್ತು ಗೈಡ್, ಖಾಖಿಯ ಬಟ್ಟೆ ಯುನಿಫಾರ್ಮ್ ಧರಿಸಿದ್ದಾರೆ. ನೇರವಾದ ಮೂಗು ಎರಡು ಗಲ್ಲದಲ್ಲಿ ಮೂಡಿದ ಮಡಿಕೆ ಸ್ಪಷ್ಟವಾಗಿ ಮೂಡಿ ಬಂದಿದೆ. ಎಡಗಡೆಯ ಕೀವಿಯ ಅರ್ಧಭಾಗ ಕಾಣುತ್ತದೆ. ಎರಡು ಎದೆ ಭಾಗದಲ್ಲಿ ಚಿಹ್ನೆಯ ಪಟ್ಟಿಯು ಸ್ಪಷ್ಟವಾಗಿ ತೋರಿಸಿದ್ದಾರೆ. ಹಿನ್ನಲೆಯಲ್ಲಿ ತಿಳಿ ನೀಲಿ ಮತ್ತು ಕಪ್ಪು ನೀಲಿ ಮಿಶ್ರಿತ ವರ್ಣದಿಂದ ಚಿತ್ರವನ್ನು ತಮ್ಮ ಕಲಾ ಕೌಶಲ್ಯದಿಂದ ಪೂರ್ಣಗೊಳಿಸಿದ್ದಾರೆ.

೩. ಜನಾಬ ಮಹಮ್ಮದ ಬಾಡನ್

ಈ ಶಿರಭಾವ ಚಿತ್ರವು ೧೯೮೨ರಲ್ಲಿ ೧೪x೧೮ ಕ್ಯಾನವಾಸ್ ಮೆಲೆ ತೈಲ ಮಾಧ್ಯಮದಿಂದ ರಚಿಸದ್ದಾರೆ. ಆಭೂದ ಬ್ಯಾಂಕಿನಲ್ಲಿ ಈ ಚಿತ್ರವು ಸಂಗ್ರಹವಾಗಿದೆ. ಮುಖದಲ್ಲಿ ಮಂದಹಾಸ ತುಟಿಗಳು,

೪. ಕೆ.ರವಿಕುಮಾರ ಕಾಶಿ -ಚಿತ್ರಕಲಾ ಪ್ರಪಂಚ-೩, ಪು-೩೬೨

ಕಂದುಕಪ್ಪು ಕಣ್ಣುಗಳು ನೇರವಾದ ಮೂಗು, ತಿಳಿಯಾದ ಮೀಸೆ ನೈಜವಾಗಿ ಕಾಣುತ್ತೇವೆ. ಕಪ್ಪು ವರ್ಣದ ಗಡ್ಡವಿದೆ. ಎಡಭಾಗದ ಒಂದೇ ಕಿವಿ ಕಾಣುತ್ತಿದೆ. ತಲೆಯ ಮೇಲೆ ಬಿಳಿ ಗಾಂಧಿ ಟೋಪಿ ಧರಿಸಿದ್ದಾರೆ. ಬಿಳಿ ಶರ್ಟ್ ಮೇಲೆ ಕಪ್ಪು ವರ್ಣದ ಕೋಟನ್ನು ಧರಿಸಿದ್ದಾರೆ. ನೆರಳು ಬೆಳಕಿನ ಛಾಯೆ ಹಿನ್ನಲೆಯ ನೀಲಿ ಕಪ್ಪು ವರ್ಣದಿಂದ ನೈಜವಾಗಿ ಚಿತ್ರಿಸಿದ್ದಾರೆ.

೪. ಸೈಯದ್, ತಾಜೋದ್ದಿನ

ಈ ಶಿರಭಾವ ಚಿತ್ರವು "೧೪x೧೮" ಇಂಚ್ ಅಳತೆಯ ಕ್ಯಾನವಾಸ್ ಮೇಲೆ ತೈಲ ಮಾಧ್ಯಮದಿಂದ ರಚಿಸಿದ್ದಾರೆ. ಈ ಚಿತ್ರವು ಆಝಾದ್ ಬ್ಯಾಂಕಿನಲ್ಲಿ ಸಂಗ್ರಹವಾಗಿದೆ. ಮುಖದಲ್ಲಿ ಗಂಭೀರವಾಗಿದ್ದು ಕಣ್ಣುಗಳು, ಕಪ್ಪುವರ್ಣದಿಂದ ಸ್ಪಷ್ಟವಾಗಿ ರಚಿಸಿದ್ದಾರೆ. ನೇರವಾದ ಮೂಗು, ಮಂದಹಾಸ ತುಟಿಗಳು ಮೀಸೆ ಮತ್ತು ಗಡ್ಡ ಒಂದಕ್ಕೊಂದು ಮಿಶ್ರಿತವಾಗಿದೆ. ತಲೆಯ ಮೇಲೆ ಬಿಳಿ ರುಮಾಲು ತಿಳಿ ಹಳದಿ ಕೋಟನ್ನು ಧರಿಸಿದ್ದಾರೆ. ಅದಕ್ಕೆ ದೊಡ್ಡದಾದ ಬಿಡ್ಡೆಗಳಿವೆ. ಎಡಭಾಗದ ಜೇಬಿನಲ್ಲಿ ಪೆನ್ನಿನ ಮೇಲೆ ಭಾಗ ಕಾಣುತ್ತಿದೆ. ಹಿನ್ನೆಲೆಯಲ್ಲಿ ತಿಳಿ ನೀಲಿ ಹಸಿರು ಮತ್ತು ಕಂದು ಮಿಶ್ರಿತ ವರ್ಣಗಳಿಂದ ನೈಜವಾಗಿ, ಚಿತ್ರವನ್ನು ರಚಿಸಿದ್ದಾರೆ.

೫. ಶ್ರೀ ಶಂಕಗೌಡ ಹಿರೇಗೌಡರ

ಈ ಶಿರಭಾವ ಚಿತ್ರವು "೧೪x೧೮" ಇಂಚು ಅಳತೆಯ ಕ್ಯಾನವಾಸ್ ಮೇಲೆ ತೈಲ ಮಾಧ್ಯಮದಿಂದ ರಚಿಸಿದ್ದಾರೆ. ಈ ಚಿತ್ರವು ಡಾ.ಹಿರೇಗೌಡರ ಮನೆಯಲ್ಲಿ ಸಂಗ್ರಹಿತವಾಗಿದೆ. ನಗುಮುಖದ ಹಿರೇಗೌಡರ ಅವರು ಈ ಶಿರಭಾವ ಚಿತ್ರದಲ್ಲಿ ಮೈಬಣ್ಣವು ಕಪ್ಪು ಗೋದಿ ವರ್ಣದಂತಿದ್ದು, ಕಣ್ಣುಗಳು ಎದುರ ದೃಷ್ಟಿಯಲ್ಲಿದೆ. ದಪ್ಪಾದ ಕಪ್ಪು ವರ್ಣದ ಹುಬ್ಬು ದಪ್ಪನೆಯ ಮೂಗು ಅದರ ಕೆಳಭಾಗದಲ್ಲಿ ಕುಂಚು ಮೀಸೆ, ಮಂದಹಾಸ ನಗುವಿನ ತುಟಿಗಳು, ನಗುವಿನಿಂದ ಮೂಡಿದ ಮಡಿಕೆಯ ಗಲ್ಲಗಳು, ಸ್ಪಷ್ಟವಾಗಿ ಮೂಡಿ ಬಂದಿದೆ. ತಲೆಯ ಮೇಲೆ ಹಳದಿ ವರ್ಣದ ಪಟ್ಟೆಯ ಬಿಳಿ ರುಮಾಲು ಧರಿಸಿದ್ದಾರೆ. ಬಿಳಿ ಶರ್ಟ್ ಮೇಲೆ ಹಳದಿ ವರ್ಣದ ಕೋಟನ್ನು ಧರಿಸಿದ್ದಾರೆ. ಹಿನ್ನಲೆಯಲ್ಲಿ ಕಪ್ಪು ವರ್ಣದಿಂದ ಚಿತ್ರಣವನ್ನು ನೈಜವಾಗಿ ಚಿತ್ರಿಸಿದ್ದಾರೆ.

೬. ಶ್ರೀಮತಿ ಹಿರೇಗೌಡರು

ಈ ಶಿರಭಾವ ಚಿತ್ರವು "೧೪x೧೮" ಇಂಚು ಅಳತೆಯ ಕ್ಯಾನವಾಸ್ ಮೇಲೆ ತೈಲ ಮಾಧ್ಯಮದಿಂದ ರಚಿಸಿದ್ದಾರೆ. ಗದುಗಿನ ಡಾ.ಹಿರೇಗೌಡರ ಮನೆಯಲ್ಲಿ ಸಂಗ್ರಹವಿದೆ. ತಿಳಿ ಕೆಂಪು ಮೈ ಬಣ್ಣವಿದ್ದು ಮುಖದಲ್ಲಿ ಮಂದಹಾಸ ನಗುವಿನ ಗಂಭೀರವಾಗಿದೆ. ಹಣೆಯ ಮೇಲೆ ಮಾರು ವಿಬೂತಿ ಹಚ್ಚಿದ್ದು, ದುಂಡಾದ ಕುಂಕುಮ ಇದೆ. ಆಕರ್ಷಕವಾದ ಸಾತಿತ್ವದಾದ ಕಣ್ಣುಗಳು, ದಪ್ಪನೆಯ ಮೂಗು, ಅದರಲ್ಲಿ

ಮೂಗುತಿ, ಕೆಳಭಾಗದಲ್ಲಿ ಮಂದಹಾಸ ನಗುವಿನ ತುಟಿಗಳು, ಕಿವಿಯಲ್ಲಿ ಎಂಟು ಹರಳಿನ ಜಾತಿ, ಇದೆ, ತಲೆಯ ಮೇಲೆ ನಾಡಿಯ ಅಂಚು ಹಾಕಿದೆ. ಬಿಳಿಯಾದ ಕೂದಲು, ಮುಂಭಾಗದಲ್ಲಿ ಕಾಣುತ್ತಿದೆ. ಹಸಿರು ವರ್ಣದ ಸಾಡಿಯ ಮಡಿಕೆಗಳು ಅದರ ಹಳದಿ ಪಟ್ಟಿಯ ಕೆಂಪು ಅಂಚು ಅದರಲ್ಲಿ ಪಾಟೀಲರು ತಮ್ಮ ಕಲಾ ಕೌಶಲ್ಯದಿಂದ ನೈಜವಾಗಿ ಚಿತ್ರಿಸಿದ್ದಾರೆ.

೭. ಶ್ರೀ ಕೆ.ವಿ.ಅಂಗಡಿ

ಈ ಶಿರಭಾವ ಚಿತ್ರವು "೧೪x೧೮" ಇಂಚು ಅಳತೆಯ ಕ್ಯಾನವಾಸ್ ಮೇಲೆ ತೈಲ ಮಾಧ್ಯಮದಿಂದ ರಚಿಸಿದ್ದಾರೆ. ಮೈ ಬಣ್ಣ ಕಂದು ಗೋದಿಯ ವರ್ಣವಿದ್ದು, ಮುಖವು ಗಂಭೀರವಾಗಿದೆ. ಹಣೆಯ ಮೇಲೆ ವಿಭೂತಿ ಹಚ್ಚಿದೆ. ಚೂಪ್ಪಾದ ಮೂಗು ಚಿಕ್ಕವಾದ ಕಣ್ಣುಗಳಿವೆ, ಮಡಿಕೆಗಳ ಗಲ್ಲುಗಳು, ತಲೆಯ ಮೇಲೆ ಬಿಳಿ ರುಮಾಲು ಇದೆ. ಎಲೋ ಆಕರ್ ಕೋಟನ್ನು ಧರಿಸಿದ್ದಾರೆ, ಕಪ್ಪು ಮಿಶ್ರಿತ ತಿಳಿ ನೀಲಿ ವರ್ಣ ಹಿನ್ನಲೆಯಲ್ಲಿದೆ. ನೈಜವಾಗಿ ಚಿತ್ರಿಸಿದ್ದಾರೆ.

೮. ಶ್ರೀಮತಿ ಉಮಚಗಿ

ಈ ಶಿರಭಾವ ಚಿತ್ರವು "೧೨x೧೬" ಇಂಚು ಅಳತೆಯ ಕ್ಯಾನವಾಸ್ ಮೇಲೆ ತೈಲ ಮಾಧ್ಯಮದಿಂದ ರಚಿಸಿದ್ದಾರೆ. ಬಿಳಿ ಮಿಶ್ರಿತ ಗೋದಿ ವರ್ಣ ಮೈಬಣ್ಣವಿದ್ದು ಮುಖದ ದೃಢಿಯು ನೇರವಾಗಿದೆ. ಹಣೆಯ ಮೇಲೆ ವಿಭೂತಿ ಹಚ್ಚಿದ್ದು, ದುಂಡಾದ ಕುಂಕುಮವಿದೆ. ಚಿಕ್ಕದಾದ ಕಣ್ಣುಗಳು ಚೂಪಾದ ಮೂಗಿದೆ. ಕಪ್ಪು ಹಸಿರು ಸೀರೆಯನ್ನು ಧರಿಸಿದ್ದು ತಲೆಯ ಮೇಲೆ ಹಾಕಿಕೊಂಡಿದ್ದಾರೆ. ಹಳದಿ ಪಟ್ಟಿಯ ಕೆಂಪು ಅಂಚುವಿದೆ, ನೀಲಿ ವರ್ಣ ಹಿನ್ನಲೆಯಲ್ಲಿದೆ. ನೆರಳು ಬೆಳಕು ಸಮಾಂತರವಾಗಿ ನೈಜವಾಗಿ ರಚಿಸಿದ್ದಾರೆ.

೯. ಶ್ರೀ.ಸರ್.ಎಂ.ವಿಶ್ವೇಶ್ವರಯ್ಯ

ಈ ಶಿರಭಾವ ಚಿತ್ರವು "೧೪x೧೮" ಇಂಚು ಅಳತೆಯ ಪೇಪರಿನ ಮೇಲೆ ಜಲವರ್ಣ ಮಾಧ್ಯಮದಿಂದ ಚಿತ್ರಣಗೊಂಡಿದೆ. ಈ ಚಿತ್ರವು ಮಾಡೆಲ್ ಹೈಸ್ಕೂಲಿನಲ್ಲಿ ಸಂಗ್ರಹವಿದೆ. ಕೆಂಪು, ತಿಳಿ ಕಂದು ವರ್ಣ ಮೈ ಬಣ್ಣವಿದೆ ಚೂಪಾದ ಮುಖವಿದೆ. ಕಣ್ಣುಗಳು ಚಿಕ್ಕದಾಗಿದ್ದು ಚೂಪಾದ ಮೂಗಿದೆ. ತಲೆಯ ಮೇಲೆ ಹಳದಿ ಮತ್ತು ಕಂದು ಮಿಶ್ರಿತ ಪಟ್ಟಿಯ ಬಿಳಿ ಪೇಠಾ ಇದೆ. ಕಿವಿಯ ಮೇಲೆ ಸ್ವಲ್ಪಭಾಗ ಬಿಳಿ ಕುದಲುಗಳು ಕಾಣಿಸುತ್ತವೆ. ಬಿಳಿ ಶರ್ಟ್ ಮೇಲೆ ಎಲೋ ಆಕಲ್ ವರ್ಣದ ಕೋಟನ್ನು ಧರಿಸಿದ್ದಾರೆ, ಕೊರಳಲಿ ಟೈ ಹಾಕಿದ್ದಾರೆ. ಜೇಬಿನಲ್ಲಿ ಪೆನ್ನಿನ ತುದಿಯ ಕಾಣುತ್ತಿದೆ. ಹಿನ್ನಲೆಯಲ್ಲಿ ಬಿಳಿ ಹಳದಿ ಮಿಶ್ರಿತ ನೀಲಿ ವರ್ಣವಿದೆ. ನೆರಳು ಮತ್ತು ಬೆಳಕು ಸ್ಪಷ್ಟವಾಗಿ, ನೈಜತೆಯಿಂದ ಚಿತ್ರಪೂರ್ಣಗೊಳಿಸಿದ್ದಾರೆ.

[illegible]

೫.೨.೨. ಪೂರ್ಣಭಾವ ಚಿತ್ರಗಳು

೧. ಕೆ.ಎಸ್.ಪಾಟೀಲ

ಈ ಪೂರ್ಣಭಾವ ಚಿತ್ರವು "೧೪x೧೮" ಇಂಚು ಅಳತೆಯ ಪೇಪರಿನ ಮೇಲೆ ಜಲವರ್ಣ ಮಾಧ್ಯಮದಿಂದ ರಚಿಸಿದ್ದಾರೆ. ಇದರಲ್ಲಿ ಬಿಳಿ ವರ್ಣ ಮಿಶ್ರಿತಜಪೈಕ್ಕು ಮಾಧ್ಯಮವನ್ನು ಬಳಸಿದ್ದಾರೆ. ಈ ಕಲಾಕೃತಿಯಲ್ಲಿ ಬೆತ್ತದ ಕುರ್ಚಿಯಲ್ಲಿ ಕುಳಿತ ದೃಶ್ಯವಿದ್ದು ಕುಳಿತಿರುವ ವ್ಯಕ್ತಿಯು ಕರಿಕೋಟು, ಬಿಳಿ ಧೋತರ, ಕೈಯಲ್ಲಿ ಕೋಲು ಪಕ್ಕದಲ್ಲಿ ಟೇಬಲ್ ಮೇಲೆ ಹೂದಾನಿ ಪುಸ್ತಕಗಳಿದ್ದು, ನೋಡುಗರಿಗೆ ಗಂಭೀರ ಸ್ವಭಾವವನ್ನು ಹೋಲುವ ವ್ಯಕ್ತಿತ್ವವನ್ನು ಈ ಕೆಲ ಕೃತಿಯಲ್ಲಿ ಕಲಾವಿದರು ತಮ್ಮ ಕೈಚಳಕವನ್ನು ಮೂಡಿಸಿದ್ದಾರೆ. ಹಿನ್ನಲೆಯಲ್ಲಿ ನೀಲಿ ವರ್ಣದ ಬಟ್ಟೆಹಾಕಿದ್ದು ಅದರ ಮಡಿಕೆಗಳು ನೈಜವಾಗಿ ಮೂಡಿಬಂದಿವೆ. ಅಲ್ಲದೆ ಹೂದಾನಿ ಹಿಂದೆ ದಪ್ಪನೆಯ ಕಂಬವಿದ್ದು, ಒಟ್ಟಾರೆ ಆ ಕಲಾಕೃತಿಗೆ ಸರಿಹೊಂದುವಂತೆ ಚಿತ್ರಿಸಿದ್ದಾರೆ.

೨. ಶ್ರೀ ರವೀಂದ್ರನಾಥ ಠಾಗೋರ

ಈ ಪೂರ್ಣ ಭಾವಚಿತ್ರವು "೩x೪" ಅಳತೆಯ ಹೊಂದಿದ್ದು, ಕ್ಯಾನವಸ್‌ನ ಮೇಲೆ ತೈಲವರ್ಣ ಮಾಧ್ಯಮದಿಂದ ಪೂರ್ಣಗೊದಿದೆ. ಇದು ನಗರಸಭೆ ಗದಗ .ಬೆಟಗೇರಿಯಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯು ರಾಷ್ಟ್ರಕವಿ ರವೀಂದ್ರನಾಥ ಠಾಗೋರರವರು ಇದ್ದು, ಈ ಕಲಾಕೃತಿಯಲ್ಲಿ ಠಾಗೋರವರು ಖುರ್ಚಿಯ ಮೇಲೆ ಬುಕ್ಕನ್ನು ಹಿಡಿದುಕೊಂಡು ವಿಚಾರವನ್ನು ಮಾಡುತ್ತಿರುವ ಹಾಗೆ ಕಂಡುಬರುತ್ತದೆ. ಮುಖದಲ್ಲಿ ಬರ್ನಟ್ ಸೇನಾ, ಕೆಂಪು, ಹಳದಿ ಮತ್ತು ನೀಲಿ ವರ್ಣಗಳಿಂದ ಕೂಡಿದೆ. ಮೈಮೇಲಿನ ಬಟ್ಟೆಯು ಹಳದಿ ವರ್ಣದಿಂದ ಇದ್ದು ಅದೇ ಬಣ್ಣದಿಂದ ನೆರಳು ಬೆಳಕುಗಳಿಂದ ಕೂಡಿದ್ದು ಒಂದು ಸುಂಧರವಾದ ಕಲಾಕೃತಿ ರಚನೆಗೊಂಡಿದೆ.

ಅಲ್ಲದೇ ಈ ಕಲಾವಿದರು ನೆರಳು ಬೆಳಕನ್ನು ಸ್ಪಷ್ಟವಾಗಿ ತೋರಿಸಿದ್ದಾರೆ. ಹಿನ್ನೆಲೆಯಲ್ಲಿ ಹೂವಿನ ಗಿಡಗಳಿದ್ದು ಮುಖ್ಯ ಆಕೃತಿ, ಹೂದಾನಿ, ಪುಸ್ತಕಗಳಿಗೆ ಬಳಸಿದ ಪ್ರಖರ ವರ್ಣಗಳನ್ನು ಹೆಚ್ಚಾಗಿ ಬೆಳಸದೆ ಸೌಮ್ಯ ವರ್ಣಗಳಿಂದ ಕೂಡಿದೆ. ಹೀಗಾಗಿ ರವೀಂದ್ರನಾಥ ಟ್ಯಾಗೋರ್ ಚಿತ್ರ ಸ್ಪಷ್ಟವಾಗಿ ಮೂಡಿ ಬಂದಿದ್ದು ಕಲಾವಿದರ ವರ್ಣ ಜಾಣ್ಮೆಯನ್ನು ತೋರಿಸುತ್ತದೆ. ಮತ್ತು ಹೂಧಾನಿಯನ್ನು ಸುಂದರವಾಗಿ ಚಿತ್ರಿಸಿ ಅದರ ನೆರಳು ಪುಸ್ತಕದ ಮೇಲೆ ಬಿದ್ದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಒಟ್ಟಾಗಿ ನೋಡುಗರನ್ನು ಕಲಾಕೃತಿಯನ್ನು ನೋಡುವಂತೆ ಮಾಡುತ್ತದೆ.

ರವೀಂದ್ರನಾಥ ಟ್ಯಾಗೋರ್‌ರರ ವ್ಯಕ್ತಿತ್ವವನ್ನು ಈ ಕಲಾಕೃತಿ ಬಿಂಬಿಸುತ್ತದೆ. ಅವರ ಮುಖಭಾವ, ನೀಳ ಬಿಳಿ ಕೇಶರಾಶಿ, ಧರಿಸಿದ ಬಟ್ಟೆಯ ನಿರಿಗೆಗಳು ಸ್ಪಷ್ಟವಾಗಿ ಮೂಡಿ ಬಂದಿವೆ.

೩. ಶ್ರೀ ಹುಯಿಲಗೋಳ ನಾರಾಯಣರಾವ್

ಈ ಪೂರ್ಣಭಾವ ಚಿತ್ರವು "೪x೬" ಅಳತೆಯ ಭವ್ಯ ಗಾತ್ರವಿದ್ದು, ತೈಲ ವರ್ಣಮಾಧ್ಯಮದಿಂದ ಪೂರ್ಣಗೊಂದಿದೆ. ಇದು ಗದಗ ಬೇಟಗೇರಿ ನಗರಸಭೆಯಲ್ಲಿ ಸಂಗ್ರಹಿತವಾಗಿದೆ. ಈ ಕಲಾಕೃತಿಯು

ನಾಡುಗೀತೆ ಬರೆದ ಹುಯಿಲಗೋಳ ನಾರಾಯಣರವರಾಗಿದೆ. ಎಡಗೈಯಲ್ಲಿ ಕಂದು ಬಣ್ಣದ ಭಾಗವನ್ನು ಮತ್ತೊಂದು ಕೈಯಲ್ಲಿ ಕೊಡೆಯನ್ನು ಹಿಡಿಕೊಂಡು ಎದ್ದು ನಿಂತಿರುವ ಪೂರ್ಣಭಾವ ಚಿತ್ರವಾಗಿದೆ. ಮುಖದಲ್ಲಿ ಕಂದು, ಕೆಂಪು, ಹಳದಿ, ನೀಲಿ ಮತ್ತು ಬಿಳಿ ವರ್ಣಗಳಿಂದ ಕೂಡಿದ್ದು ಕನ್ನಡಕ ಧರಿಸಿದ್ದಾರೆ. ತಲೆಯ ಮೇಲೆ ಕಪ್ಪು ವರ್ಣದ ಟೋಪಿ ಇದೆ. ಮೈ ಮೇಲೆ ಬಿಳಿ, ಹಳದಿ ಮಿಶ್ರಿತ ವರ್ಣದ ಕೋಟನ್ನು ಬಿಳಿ ಶರ್ಟ್ ಮೇಲೆ ಧರಿಸಿದ್ದಾರೆ. ಬಿಳಿ ವರ್ಣದ ಧೋತರ ಜೊತೆ ಕಂದು ವರ್ಣದ ಬೂಟನ್ನು ಧರಿಸಿದ್ದು ನೆರಳು ಬೆಳಕುಗಳಿಂದ ಕೂಡಿದ್ದು ಒಂದು ಸುಂದರವಾದ ಕಲಾಕೃತಿ ರಚನೆಗೊಂಡಿದೆ. ಹಿನ್ನಲೆಯಲ್ಲಿ ಅಲಂಕೃತೆಯ ಗೋಡೆ ಇದ್ದು ಕಪ್ಪು ಕಂದು ವರ್ಣದಿಂದ ನೈಜವಾಗಿ ಚಿತ್ರಿಸಿದ್ದಾರೆ. ಬಲಭಾಗದಲ್ಲಿ ಒಂದು ಖಾನೆಗಳ್ಳುಳ ಮೇಜು ಅದರಲ್ಲಿ ಪುಸ್ತಕ ಮತ್ತು ಗ್ರಂಥಗಳನ್ನು ಸಾಲಾಗಿ ಹೊಂದಿದ್ದು, ಕಾಣುತ್ತವೆ. ಮತ್ತೊಂದು ಭಾಗದಲ್ಲಿ ಮೇಜಿಗೆ ಅಲಂಕೃತ ನಕ್ಷೆಯನ್ನು ಹೊಂದಿದ್ದು ಬಟ್ಟೆಯನ್ನು ಹಾಕಿದೆ. ಅದರ ಮೇಲೆ ಹೂದಾನಿಯ ಇದೆ. ಪ್ರಖರ ವರ್ಣಗಳನ್ನು ಹೆಚ್ಚಾಗಿ ಬಳಸದೆ ಸೌಮ್ಯ ವರ್ಣಗಳಿಂದ ಕೂಡಿದೆ, ನೆರಳು ಬೆಳಕನ್ನು ಸುಂದರವಾಗಿ, ನೈಜವಾಗಿ, ಒಟ್ಟಾಗಿ, ನೋಡುಗರನ್ನು ಆಕರ್ಷಿತಗೊಳಿಸುವಂತೆ ಪಾಟೀಲರು ತಮ್ಮ ಕಲಾ ಕೌಶಲ್ಯದಿಂದ ರಚಿಸಿದ್ದು. ಸ್ಪಷ್ಟವಾಗಿ ಮೂಡಿ ಬಂದಿದೆ.

೪. ಶ್ರೀ.ಸಿ.ಪಿ.ಮಾಳಶೆಟ್ಟಿ

ಈ ಕಾಲಕೃತಿಯ "೪x೬" ಅಳತೆಯ ಭವ್ಯ ಹೊಂದಿದ್ದು, ಕ್ಯಾನವಾಸಿನ ಮೇಲೆ ತೈಲ ಮಾಧ್ಯಮದಿಂದ ರಚಿತವಾಗಿದೆ. ಗದಗ ಬೇಟಗೇರಿ ನಗರಸಭೆಯಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯಲ್ಲಿ ಪೂರ್ಣ ವ್ಯಕ್ತಿ ಭಾವಚಿತ್ರಣವಿದೆ. ಮುಖ್ಯ ಆಕೃತಿಯ ಮುಖವು ಯತಾವತ್ತಾಗಿ ಚಿತ್ರಿತವಾಗಿದೆ. ಹಾಗೂ ನೈಜತೆಯಿಂದ ಕೂಡಿದೆ. ಚಿತ್ರದಲ್ಲಿರುವ ವ್ಯಕ್ತಿಯು ಕೈಯಲ್ಲಿ ಕೊಡೆ ಇನ್ನೊಂದು ಕೈಯಲ್ಲಿ ಚಿಕ್ಕ ಪುಸ್ತಕವನ್ನು ಹಿಡಿದುಕೊಂಡು ನಿಂತಿರುವ ಆಕೃತಿಯು ಇದೆ. ಹಿನ್ನೆಲೆಯು ಅಷ್ಟೇ ಸುಂದರವಾಗಿ ಚಿತ್ರಿತಗೊಂಡಿದೆ.

೫. ರಾಣಾಪ್ರತಾಪ ಸಿಂಹ

ಈ ಪೂರ್ಣ ಭಾವಚಿತ್ರವು "೪x೬" ಅಳತೆಯ ಭವ್ಯ ಗಾತ್ರ ಹೊಂದಿದ್ದು, ಗದಗ ಬೇಟಗೇರಿ ನಗರಸಭೆಯಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯು ಮಹಾರಾಣಾಪ್ರತಾಪ ಸಿಂಹರವರ ಕಲಾಕೃತಿ ಇದ್ದು ಈ ಕಲಾಕೃತಿಯು ತೈಲವರ್ಣದಿಂದ ರಚನೆಯಾಗಿದೆ. ರಾಣಾಪ್ರತಾಪ ಸಿಂಹ ಕೈಯಲ್ಲಿ ಭರ್ಚಿಯನ್ನು ಹಿಡಿದು ಒಂದು ಪಾದವನ್ನು ಕಲ್ಲು ಬಂಡೆಯ ಮೇಲೆ ಇಟ್ಟು ನಿಂತಿರುವ ಕೃತಿಯಾಗಿದೆ. ಈ ಕೃತಿಯಲ್ಲಿ ಹೆಚ್ಚಾಗಿ ನೀಲಿ ಬಣ್ಣವನ್ನು ಬಳಕೆ ಮಾಡಿದ್ದಾರೆ. ಪ್ರತಾಪ ಸಿಂಹ ಧೈರ್ಯಶಾಲಿಯಾಗಿ ನಿಂತಿರುವ ಕಲಾಕೃತಿಯಾಗಿದೆ. ಈ ಕಲಾಕೃತಿಯಲ್ಲಿ ಎದೆಯ ಮೇಲಿನ ರಕ್ಷಾ ಕವಚವನ್ನು ಹಳದಿ ವರ್ಣದಿಂದ ರಚನೆಗೊಂಡಿದೆ. ಹಾಗೆಯೇ ಕಲಾಕೃತಿಯಲ್ಲಿ ಕೊರಳಲ್ಲಿ ಹಾಕಿದ ಮುತ್ತಿನ ಹಾರವನ್ನು ತುಂಬಾ

ಸುಂದರವಾಗಿ ಚಿತ್ರಿತವಾಗಿದೆ. ಕಲಾಕೃತಿಯ ಹಿಂಭಾಗ ಅರಮನೆಯ ಚಿತ್ರಣವಿದ್ದು ಅರಮನೆಯ ಚತ್ತಿನಲ್ಲಿ ಕೆಂಪು ಮತ್ತು ಕೇಸರಿ ವರ್ಣದ ಬಾವುಟ ಹಾರಾಡುತ್ತಿವೆ. ಮತ್ತು ಅರಮನೆಯ ಅಂಗಳದಲ್ಲಿ ಒಂದು ಬಿಳಿಯ ಕುದುರೆಯನ್ನು ಕೂಡ ಚಿತ್ರಿಸಲಾಗಿದೆ. ಒಟ್ಟಾರೆ ಕಲಾಕೃತಿ ಭಾವ ಪೂರ್ಣವಾಗಿ ರಚನೆಗೊಂಡಿದೆ. ಇದು ತೈಲವರ್ಣದಲ್ಲಿ ರಚನೆಗೊಂಡಿದೆ.

೬. ಶ್ರೀ ಚನಪ್ಪನವರ ಹುಯಿಲಗೋಳ

ಈ ಪೂರ್ಣಭಾವ ಚಿತ್ರವು “೪x೬” ಭವ್ಯ ಗಾತ್ರವನ್ನು ಹೊಂದಿದ್ದು ಕ್ಯಾನವಾಸ್‌ನ ಮೇಲೆ ತೈಲ ಮಾಧ್ಯಮದಿಂದ ರಚಿತಗೊಂಡಿದೆ. ಇದು ಗದಗ ಬೇಟಗೇರಿ ನಗರಸಭೆಯಲ್ಲಿ ಸಂಗ್ರಹಿತವಾಗಿದೆ. ಈ ಕಲಾಕೃತಿಯಲ್ಲಿ ಕುಳಿತಿರುವ ವ್ಯಕ್ತಿಯ ನಿಲುವು ಗಂಭೀರತೆಯಿಂದ ಕೂಡಿದ್ದು ಮುಖಭಂಗಿಯು ಸುಂದರವಾಗಿ ಚಿತ್ರಿತಗೊಂಡಿದೆ. ಹಿನ್ನೆಲೆಯು ಬಹುವರ್ಣಗಳಿಂದ ಕಂಗೊಳಿಸುವಂತೆ ಇದೆ. ಮುಖ್ಯ ಆಕೃತಿಯ ಪಕ್ಕದಲ್ಲಿ ಚಿಕ್ಕ ಟೇಬಲ್ ಇದ್ದು ಅದಕ್ಕೆ ಹೊದಿಸಿದ ವಸ್ತ್ರ ಹಾಗೂ ಹೂದಾನಿಯು ಅತಿ ಸುಂದರವಾಗಿ ಮೂಡಿಬಂದಿದೆ. ತೈಲವರ್ಣದಿಂದ ರಚಿತವಾದ ಈ ಕೃತಿ ಒಟ್ಟಾರೆ ನೋಡುಗರಿಗೆ ಮುದಗೊಳಿಸುವಂತೆ ಚಿತ್ರಿತವಾಗಿದೆ.

೭. ಶ್ರೀ ಚನಪ್ಪ ಫಕೀರಪ್ಪ ಹುಯಿಲಗೋಳ

ಈ ಪೂರ್ಣಭಾವ ಚಿತ್ರವು “೪x೬” ಅಳತೆಯ ಭವ್ಯ ಗಾತ್ರವನ್ನು ಹೊಂದಿದ್ದು, ಕ್ಯಾನವಾಸ್‌ನ ಮೇಲೆ ತೈಲ ಮಾಧ್ಯಮದಿಂದ ರಚಿತಗೊಂಡಿದೆ. ಈ ಕಲಾಕೃತಿಯು ಗದಗ ಬೇಟಗೇರಿ ನಗರಸಭೆಯಲ್ಲಿ ಸಂಗ್ರಹಗೊಂಡಿದೆ. ಮುಖ್ಯ ಆಕೃತಿಯ ಮುಖವು ಯತ್ತವತ್ತಾಗಿ ನೇರ ದೃಷ್ಟಿಯನ್ನು ಹೊಂದಿದೆ. ಕಣ್ಣುಗಳು, ಮೂಗು, ಕಿವಿ, ತುಟಿಗಳು ಸ್ಪಷ್ಟವಾಗಿ ಮೂಡಿಬಂದಿದೆ. ತಲೆಯ ಮೇಲೆ ಹಳದಿ ಪಟ್ಟಿಯ ಕೆಂಪು ವರ್ಣದ ರುಮಾಲು ಇದೆ. ಬಿಳಿ ಶರ್ಟ್ ಅದಕ್ಕೆ ಕೆಂಪು ವರ್ಣದ ಟೈ ಹಾಕಿದ್ದು ಕಂಡುಬರುತ್ತದೆ. ಅದರ ಮೇಲೆ ಕಪ್ಪು ಕಂದು ವರ್ಣದ ಕೋಟನ್ನು ಧರಿಸಿದ್ದಾರೆ. ಆಕೃತಿಯ ಪಕ್ಕದಲ್ಲಿ ಚಿಕ್ಕ ಟೇಬಲ್ ಇದ್ದು ಅದಕ್ಕೆ ಅಲಂಕೃತ ಹೊದಿಸಿದ್ದ ಬಟ್ಟೆ ಹಾಗೂ ಹೂದಾನಿಯು ಅತಿ ಸುಂದರವಾಗಿ ಮೂಡಿಬಂದಿವೆ. ಹಿನ್ನಲೆಯಲ್ಲಿ ನಕ್ಷೆಯುಳ್ಳ ಕಂಬಗಳು, ಅದರ ಹಿಂದೆ ನಿಸರ್ಗವನ್ನು ಹೊಂದಿದ್ದು, ಒಟ್ಟಾರೆ ನೋಡುಗರನ್ನು ಆಕರ್ಷಿತವಾಗಿ ಕಾಣುವಂತೆ ಕಲಾಕೃತಿಯು ರಚನೆಗೊಂಡಿದೆ.

೮. ಶ್ರೀ ವೀರಪ್ಪ ಕುಂದಗೋಳ

ಈ ಪೂರ್ಣಭಾವ ಚಿತ್ರವು “೪x೬” ಅಳತೆಯ ಭವ್ಯ ಗಾತ್ರವನ್ನು ಹೊಂದಿದ್ದು, ಕ್ಯಾನವಾಸ್‌ನ ಮೇಲೆ ತೈಲ ಮಾಧ್ಯಮದಿಂದ ರಚಿತಗೊಂಡಿದೆ. ಮುಖದಲ್ಲಿ ನೇರವಾಗಿ ದೃಷ್ಟಿಯಿದ್ದು, ಕಣ್ಣು, ಮೂಗು, ಬಾಯಿ, ಮೀಸೆ, ನೈಜವಾಗಿ ಮೂಡಿಬಂದಿದೆ. ಈ ಪೂರ್ಣಭಾವಚಿತ್ರವು ಎದ್ದು ನಿಂತಿದ್ದು, ಕಂದು ಕಪ್ಪು ವರ್ಣದ ಕೋಟನ್ನು ಧರಿಸಿದ್ದಾರೆ. ತಲೆಯ ಮೇಲೆ ಬಿಳಿ ರುಮಾಲು ಇದೆ. ಮೇಜಿನ ಮೇಲೆ ಪುಸ್ತಕವಿದ್ದು ಅದರ ಮೇಲೆ ಕೈಯನ್ನು ಇಟ್ಟು ನಿಂತಿರುವುದು. ಹಿನ್ನಲೆಯಲ್ಲಿ ಕಂದು ವರ್ಣದ ಗೋಡೆ

ಇದ್ದು ಅದಕ್ಕೆ ಕೆಂಪು ವರ್ಣದ ಬಟ್ಟೆ ಹಾಕಿದ್ದಾರೆ. ಮತ್ತೊಂದು ಭಾಗದಲ್ಲಿ ಮೇಜಿನ ಮೇಲೆ ಹಳದಿ ವರ್ಣದ ಬಟ್ಟೆಯನ್ನು ಹಾಕಿದ್ದು ಅದರ ಮೇಲೆ ಹೂದಾನಿ ಇದೆ. ನೆರಳು ಬೆಳಕಿನಿಂದ ನೈಜವಾಗಿ, ಸುಂದರವಾಗಿ ಕಾಣುವಂತೆ ಪಾಟೀಲರು ತಮ್ಮ ಕೌಶಲ್ಯದಿಂದ ರಚನೆ ಮಾಡಿದ್ದಾರೆ.

೯. ಶ್ರೀ ಪಂಡಿತ ಡಾ.ಪುಟ್ಟರಾಜ ಕವಿ ಗವಾಯಿ

ಈ ಕಲಾಕೃತಿ "೪x೬" ಅಡಿ ಭವ್ಯ ಗಾತ್ರವಿದ್ದು ಗವಾಯಿ ಮಠದಲ್ಲಿ ಸಂಗ್ರಹವಾಗಿದೆ. ಈ ಕಲಾಕೃತಿಯು ತೈಲವರ್ಣದಿಂದ ರಚಿತವಾಗಿದ್ದು, ಶ್ರೀ.ಡಾ.ಪುಟ್ಟರಾಜ ಸ್ವಾಮೀಜಿಯವರು ಕಟ್ಟಿಗೆಯ ಸಿಂಹಾಸನದ ಮೇಲೆ ಕುಳಿತಿರುವ ಭಂಗಿ ಇದೆ. ಹಿನ್ನೆಲೆಯಲ್ಲಿ ನಟರಾಜನ ವಿಗ್ರಹವಿದ್ದು ಕತ್ತಲೆಯಲ್ಲಿರುವಂತೆ ಇದೆ. ಕೊರಳಲ್ಲಿ ಕೆಂಪು ಬಣ್ಣ ಶಾಲ್ ಇದ್ದು ಹಳದಿ ವರ್ಣದ ನಕ್ಷೆಯನ್ನು ಹೋಂದಿದೆ. ಕಲಾವಿದರು ಈ ಕಲಾಕೃತಿಯಲ್ಲಿ ಮುಖ್ಯ ಆಕೃತಿಯನ್ನು ಪ್ರಧಾನಗೊಳಿಸಿದ್ದಾರೆ. ಒಟ್ಟಾರೆ ನೋಡುಗರಲ್ಲಿ ಭಕ್ತಿ ಮೂಡಿಸುವಷ್ಟು ನೈಜವಾಗಿ ಚಿತ್ರಿಸಿದ್ದಾರೆ.

೧೦. ಶ್ರೀ.ಡಾ.ಪಂಚಾಕ್ಷರಿ ಗವಾಯಿಗಳವರು

ಈ ಕಲಾಕೃತಿಯು "೪x೬" ಅಡಿ ಭವ್ಯಗಾತ್ರವಿದ್ದು ಗವಾಯಿ ಮಠದಲ್ಲಿ ಸಂಗ್ರಹವಾಗಿದೆ. ಕ್ಯಾನವಾಸ್ ಮೇಲೆ ತೈಲ ಮಾಧ್ಯಮದಿಂದ ರಚಿತವಾಗಿದೆ. ಶ್ರೀ.ಡಾ.ಪಂಚಾಕ್ಷರಿ ಗವಾಯಿಗಳವರು ಕಟ್ಟಿಗೆಯ ಸಿಂಹಾಸನದ ಮೇಲೆ ಕೈಯಲ್ಲಿ ಚಿತ್ರವನ್ನು ಹಿಡಿದುಕೊಂಡು ಕುಳಿತಿರುವ ಭಂಗಿ ಇದೆ. ಪಕ್ಕದಲ್ಲಿ ಸಣ್ಣ ಮೇಜಿನ ಮೇಲೆ ವಸ್ತ್ರ ಹೊದಿಸಿ ಅದರ ಮೇಲೆ ವೀಣೆಯನ್ನು ಹಿಡಿದು ನಿಂತಿರುವ ವಿಗ್ರಹವಿದೆ. ಹಿನ್ನಲೆಯಲ್ಲಿ ನೀಲಿ, ಕಪ್ಪು, ಹಸಿರು ಮಿಶ್ರಿತ ವರ್ಣವಿದ್ದು. ಈ ಕಲಾಕೃತಿಯಲ್ಲಿ ಮುಖ್ಯ ಆಕೃತಿಯನ್ನು ಪ್ರಧಾನಗೊಳಿಸಿದ್ದಾರೆ. ಒಟ್ಟಾರೆ ನೋಡುಗರಲ್ಲಿ ಭಕ್ತಿ ಮೂಡಿಸುವಷ್ಟು ಆಕರ್ಷಿತವಾಗಿ ಚಿತ್ರಿಸಿದ್ದಾರೆ.

೧೧. ಶ್ರೀಮನ್ ನಿರಂಜನ ಜಗದ್ಗುರು

ಈ ಕಲಾಕೃತಿಯು "೪x೬" ಅಡಿ ಭವ್ಯ ಗಾತ್ರ ಹೊಂದಿದ್ದು ಶ್ರೀ ಜಗದ್ಗುರು ತೋಂಟದಾರ್ಯ ಮಠದಲ್ಲಿ ಸಂಗ್ರಹವಿದೆ. ಕ್ಯಾನವಾಸ್ ಮೇಲೆ ತೈಲ ಮಾಧ್ಯಮದಿಂದ ರಚಿಸಲಾಗಿದೆ. ಮಹಾಸ್ವಾಮಿಗಳ ಮುಖದಲ್ಲಿ ಸಮಾಧಾನ, ಭಕ್ತಿಭಾವನೆ, ಮೂಡಿಬಂದಿದೆ. ಕಣ್ಣುಗಳು ನೇರ ದೃಷ್ಟಿಯಲ್ಲಿ ಮೂಗು ಬಾಯಿ ನೈಜವಾಗಿ ಚಿತ್ರಿಸಿದ್ದಾರೆ. ತಲೆಯ ಮೇಲೆ ಕೆಂಪು ಹಳದಿ ಪಟ್ಟೆಯ ರುಮಾಲು ಇದೆ. ಮೈ ಮೇಲೆ ಖಾವಿ ಬಣ್ಣದ ಬಟ್ಟೆಯನ್ನು ಧರಿಸಿದ್ದಾರೆ. ಒಂದರ ಮೇಲ್ಲೊಂದು ಕೈಯನ್ನು ಇಟ್ಟುಕೊಂಡು ಕಟ್ಟಿಗೆಯ ಸಿಂಹಾಸನದ ಮೇಲೆ ಕುಳಿತಿದ್ದಾರೆ. ಪಕ್ಕದಲ್ಲಿ ಕಂಬವಿದ್ದು ಗೋಡೆ ಮೇಲೆ ಅಲಂಕೃತ ನಕ್ಷೆಯುಳ್ಳ ಕೆಂಪು ಗೋಡೆಯ ಮಡಿಕೆಯುಳ್ಳ ವಸ್ತ್ರ ಹಾಕಿದ್ದಾರೆ. ಎರಡು ಬದಿಯಲ್ಲಿ ಹೂದಾನಿಯು ಇಟ್ಟಿದ್ದಾರೆ. ಪಾಟೀಲರು ತಮ್ಮ ಕಲಾ ಕೌಶಲ್ಯವನ್ನು ಒಟ್ಟಾರೆ. ನೋಡುಗರಿಗೆ ಭಕ್ತಿ ಮೂಡುವಷ್ಟು ಆಕರ್ಷಿತವಾಗಿ ರಚಿಸಿದ್ದಾರೆ.



೧. ಮೌಲನಾ ಅಬ್ದುಲ್ ಕಲಾಮ್ ಆಜಾದ




೨. ಲಾರ್ಡ್ ಬೇಡನ್ ಪಾವೆಲ್



೩. ಜನಾಬ ಮಹಮ್ಮದ ಬುಡನ್



೪. ಸಯ್ಯದ್ ತಾಜುದ್ದೀನ್



೫. ಶ್ರೀ ಶಂಕರಗೌಡ. ಹಿರೇಗೌಡರ



೬. ಶ್ರೀಮತಿ ಶಂಕರಗೌಡ. ಹಿರೇಗೌಡರ



೭. ಶ್ರೀ.ಕೆ.ಬಿ.ಅಂಗಡಿ



೮. ಶ್ರೀಮತಿ ಅಂಗಡಿ



೯. ಸರ್.ಎಂ.ವಿಶ್ವೇಶ್ವರಯ್ಯ

ಪೂರ್ಣಭಾವ ಚಿತ್ರಗಳು



೧೦. ಶ್ರೀ. ಕೆ.ಎಸ್.ಪಾಟೀಲ



೨. ಶ್ರೀ ರವೀಂದ್ರನಾಥ ಠ್ಯಾಗೋರ



೩. ಶ್ರೀ ನಾರಾಯಣರಾವ್ ಹುಯಿಲಗೋಳ



೪. ಶ್ರೀ ಸಿ.ಪಿ.ಮಾಳಶಟ್ಟಿ



೫. ಮಹರಾಣ ಪ್ರತಾಪಸಿಂಗ್



೬. ಶ್ರೀ ಚನ್ನಪ್ಪ ಹುಯಿಲಗೋಳ



೭. ಶ್ರೀ ಚನ್ನಪ್ಪ.ಪ.ಹುಯಿಲಗೋಳ



೮. ಶ್ರೀ ವೀರಪ್ಪ. ಕುಂದಗೋಳ



೯. ಡಾ. ಪಂಡಿತ ಪುಟ್ಟರಾಜ ಗವಾಯಿಗಳು



೧೦. ಡಾ. ಪಂಚಾಕ್ಷರಿ ಗವಾಯಿಗಳು



೧೧. ಶ್ರೀಮನ್ ನಿರಂಜನ ಜಗದ್ಗುರು ತೋಂಟದ ಮಹಾಸ್ವಾಮಿಗಳು



೧೨. ಶ್ರೀ ಹಾಲಕೇರಿ ಮಠದ ಸ್ವಾಮಿಗಳು




೧೩. ಶ್ರೀ ಸಚ್ಚಿದಾನಂದ ಸ್ವಾಮಿಗಳು


ದೇವತಾ ಚಿತ್ರಗಳು




೧. ಪ್ರಥಮವಾಗಿ ರಚಿಸಿದ ಶ್ರೀ ಭುವನೇಶ್ವರಿ ದೇವಿ



೨. ದ್ವಿತೀಯ ಭುವನೇಶ್ವರಿ ದೇವಿಯ ಕಲಾಕೃತಿ



ಕಲಾಕೃತಿಯೊಂದಿಗೆ ಸಂಶೋಧಕರು



೩. ತೃತೀಯ ಶ್ರೀ ಭುವನೇಶ್ವರಿ ದೇವಿ

೧೨. ಶ್ರೀ ಹಾಳಕೇರಿ ಮಠದ ಸ್ವಾಮಿಗಳು

ಈ ಕಲಾಕೃತಿಯು "೧೪x೧೮" ಇಂಚು ಅಳತೆಯ ಕ್ಯಾನವಾಸ ಮೇಲೆ ತೈಲಮಾಧ್ಯಮದಲ್ಲಿ ರಚಿತವಾಗಿದೆ. ಗದಗ ಹಾಳಕೇರಿ ಮಠದಲ್ಲಿ ಸಂಗ್ರಹಿತವಾಗಿದೆ. ಸ್ವಾಮಿಗಳವರು ಆಶ್ರಯ ಕೈಯನ್ನು ಹಿಡಿದುಕೊಂಡು ಬಂಗಾರ ಸಿಂಹಾಸನದ ಮೇಲೆ ಕುಳಿತಿದ್ದಾರೆ. ಮುಖದಲ್ಲಿ ಭಾವೋತ್ಮಕವಾಗಿದ್ದು ಕಣ್ಣುಗಳು ಚಿಕ್ಕದಾಗಿವೆ. ದಪ್ಪಾದ ಮೀಸೆ ಗಡ್ಡ ಮಿಶ್ರಿತವಾಗಿದ್ದು ಬಿಳಿ ವರ್ಣವಾಗಿದೆ. ಮೈ ತುಂಬಾ ಕಪ್ಪು ವರ್ಣ ಶಾಲನ್ನು ಹಾಕಿಕೊಂಡು ಕುಳಿತಿದ್ದಾರೆ. ಹಿನ್ನಲೆಯಲ್ಲಿ ಕಪ್ಪು ವರ್ಣವಿದ್ದು ನೈಜವಾಗಿ ಸುಂದರವಾಗಿ ಕಾಣುವಂತೆ ರಚಿಸಿದ್ದಾರೆ.

೧೩. ಶ್ರೀ ಸಚ್ಚಿದಾನಂದ ಸ್ವಾಮಿಗಳು

ಈ ಕಲಾಕೃತಿಯು "೩x೪" ಅಳತೆಯ ಹಾರ್ಡ್‌ಬೋರ್ಡ್ ಮೇಲೆ ಇತ್ತೀಚೆಗೆ ರಚಿಸಿದ ಕಲಾಕೃತಿಯಾಗಿದೆ. ಈ ಕಲಾಕೃತಿಯು ಶ್ರೀ ಸಚ್ಚಿದಾನಂದ ಮಠದಲ್ಲಿ ಸಂಗ್ರಹಿತವಾಗಿದೆ. ಸಚ್ಚಿದಾನಂದ ಸ್ವಾಮಿಗಳು ಪದ್ಮಾಸನವಾಗಿ ಹುಲಿಯ ತೊಗಲಿನ ಮೇಲೆ ಕುಳಿತಿದ್ದಾರೆ. ಮುಖದಲ್ಲಿ ಸಮಾಧಾನವಾಗಿ ಕಣ್ಣುಗಳು ದೃಷ್ಟಿ ನೇರವಾಗಿದ್ದು, ಮೂಗು ಬಾಯಿ ನೈಜವಾಗಿ ಚಿತ್ರಿಸಿದ್ದಾರೆ. ಕೊರಳಲ್ಲಿ ಮುತ್ತಿನ ಹಾರ ಮತ್ತು ರುದ್ರಾಕ್ಷಿ ಸರವಿದೆ. ಹಿನ್ನಲೆಯಲ್ಲಿ ನೀಲಿ ಮತ್ತು ಬಿಳಿ ಮಿಶ್ರಿತವಾದೆ ತಲೆಯ ಹಿಂದೆ ಬಿಳಿ ವರ್ಣ ವೃತ್ತಾಕಾರದ ಬಿಂಬಿಸುವಂತೆ ಕಾಣುತ್ತವೆ. ಈ ಕಲಾಕೃತಿಯು ಆಕರ್ಷಣೆಯಾಗಿ, ನೈಜವಾಗಿ, ನೆರಳು ಬೆಳಕು ಸಮಾಂತರವಾಗಿ ಚಿತ್ರಿಸಿದ್ದಾರೆ.

೫.೨.೩. ದೇವತಾ ಚಿತ್ರಗಳು

೧. ಭುವನೇಶ್ವರಿ ದೇವಿ

ಈ ಕಲಾಕೃತಿಯು "೪x೮" ಅಳತೆಯ ಭವ್ಯ ಗಾತ್ರವನ್ನು ಹೊಂದಿದ್ದು ಗದಗ ಬೇಟಗೇರಿ ನಗರಸಭೆಯಲ್ಲಿ ಸಂಗ್ರಹಗೊಂಡಿದೆ.

ಈ ಕಲಾಕೃತಿಯು ಭುವನೇಶ್ವರಿಯು ಕಲಾಕೃತಿ ಇದ್ದು ಕ್ಯಾನವಾಸ್ ಮೇಲೆ ತೈಲವರ್ಣದಿಂದ ರಚಿತವಾಗಿದೆ. ಮಾತೆ ಭುವನೇಶ್ವರಿಯು ನಿಂತ ಭಂಗಿಯು ಮನಮೋಹಕವಾಗಿ ಚಿತ್ರಣಗೊಂಡಿದೆ. ಭುವನೇಶ್ವರಿಯ ಕಲಾಕೃತಿಯಲ್ಲಿ ನಾಲ್ಕುಕೈಗಳ ಕಲಾಕೃತಿ ಇದ್ದು ಬಂಗಾರದ ಕಿರೀಟವನ್ನು ಧರಿಸಿದ್ದಾಳೆ ಮತ್ತು ಕೊರಳಲ್ಲಿಯ ಚಿನ್ನದ ಆಭರಣಗಳನ್ನು ತುಂಬಾ ನೈಜವಾಗಿ ಚಿತ್ರಣ ಮಾಡಿದ್ದಾರೆ. ಕೃತಿಯಲ್ಲಿ ಮುಖದ ಭಾವವು ತುಂಬಾ ನಗುವೊಗದಿಂದ ಕೂಡಿದ್ದು ಹಿಂಭಾಗದ ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದು ಮತ್ತು ಮುಂದಿನಭಾಗದ ಕೈಯು ಅಭಯ ಹಸ್ತವಾಗಿದೆ. ಇನ್ನೂ ಎಡಭಾಗದ ಹಿಂದಿನ ಕೈಯಲ್ಲಿ ಪುಸ್ತಕವನ್ನು ಮತ್ತು ಮುಭಾಗದ ಕೈಯಲ್ಲಿ ಕಮಲವನ್ನು ಹಿಡಿದ್ದಾಳೆ. ಕಲಾಕೃತಿಯ ಬಲಭಾಗಕ್ಕೆ ಒಂದು ಪುರಾತನ ದೇವಾಲಯದ ಕಂಬವನ್ನು ಬಳಸಿಕೊಂಡಿದ್ದಾರೆ. ಕೃತಿಯ ಮೇಲ್ಭಾಗದಲ್ಲಿ ಬೇಲೂರ, ಹಳೇಬೀಡು, ಹಂಪೆಯ ಗಣಪತಿ ಮತ್ತು ಕಲೆಯ ವೈಭವವನ್ನು ಚಿತ್ರಿಸಿದ್ದಾರೆ. ಮತ್ತು ಕೃತಿಯ ಹಿನ್ನೆಲೆಯ

ಎಡಭಾಗಕ್ಕೆ ಶ್ರವಣಬೆಳಗೊಳದ ಗೊಮ್ಮಟೇಶ್ವರ, ಜೋಗ ಜಲಪಾತ ಮತ್ತು ಇತಿಹಾಸ ಪ್ರಸಿದ್ಧವಾದ ಬಿಜಾಪುರದ ಗೋಲಗುಂಬಜಲವನ್ನು ಚಿತ್ರಿಸಿದ್ದಾರೆ. ಭೌಗೋಳಿಕ ವ್ಯಾಪ್ತಿಯಲ್ಲಿ ಒಟ್ಟಾರೆಯಾಗಿ ಕರ್ನಾಟಕ ಇತಿಹಾಸ ಪ್ರಸಿದ್ಧವಾದ ಸ್ಥಳಗಳನ್ನು ಈ ಕಲಾಕೃತಿಯಲ್ಲಿ ಚಿತ್ರಗೈದಿದ್ದಾರೆ. ಈ ಕಲಾಕೃತಿಯು ಕಲಾವಿದರಿಗೆ ತುಂಬಾ ಪ್ರಸಿದ್ಧಿಯನ್ನು ತಂದುಕೊಟ್ಟಿದೆ. ಅಲ್ಲದೇ ತಾವೇ ರಚಿಸಿದ ಈ ಕೃತಿಯನ್ನು ಹಲವಾರು ಬಾರಿ ಪ್ರತಿಕೃತಿ ಮಾಡಿದ್ದಾರೆ. ಪ್ರಥಮ ಕಲಾಕೃತಿಯು ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಚಿತ್ರಿತಗೊಂಡಿದ್ದು ದೊಡ್ಡಮೇಟಿ ಅಂದಾನಪ್ಪನವರ ಮನೆಯಲ್ಲಿದೆ ದ್ವಿತೀಯ ಕಲಾಕೃತಿಯು ಗದಗ ಬೇಟಗೇರಿ ನಗರಸಭೆಯಲ್ಲಿದೆ. ತೃತೀಯ ಕಲಾಕೃತಿಯು ಗದಗ ಎ.ಸಿ.ಆಫೀಸಿನಲ್ಲಿ ಸಂಗ್ರಹಗೊಂದಿದೆ.

೫.೨.೪. ಸಂಯೋಜನಾ ಚಿತ್ರಗಳು

೧. ಶ್ರೀ ಬಸವೇಶ್ವರರು

ಈ ಕಲಾಕೃತಿಯು "೪x೬" ಅಡಿ ಭವ್ಯ ಗಾತ್ರವಾಗಿದ್ದು. ಶ್ರೀ ಜಗದ್ಗುರು ತೋಂಟದಾರ್ಯ ಮಠದಲ್ಲಿ ಸಂಗ್ರಹಗೊಂಡಿದೆ.

ಈ ಕಲಾಕೃತಿಯು ತೈಲವರ್ಣದಿಂದ ರಚನೆಯಾಗಿದೆ. ಕೃತಿಯ ಎಲ್ಲಾ ಭಾಗದಲ್ಲಿ ದಾರ ಮತ್ತು ಮುತ್ತುಗಳನ್ನು ಬಳಸಿಕೊಂಡು ಚಿತ್ರ ರಚನೆಯಾಗಿದೆ. ಕಲಾವಿದನ ಕುಸುರಿನ ಕೆಲಸದ ಜಾಣ್ಮೆಯನ್ನು ವ್ಯಕ್ತಪಡಿಸುತ್ತದೆ. ಹಿಂಭಾಗದಲ್ಲಿ ಕೂಡಲ ಸಂಗಮದ ನದಿಯಲ್ಲಿ ಐಕ್ಯ ಮಂಟಪವನ್ನು ಚಿತ್ರಿಸಿದ್ದಾರೆ. ಈ ಚಿತ್ರದ ಕೆಳಗೆ ನಕ್ಷತ್ರದ ಚಿತ್ರವನ್ನು ಚಿತ್ರಿಸಿ ಅದಕ್ಕೆ ಸೂರ್ಯನ ಆಕೃತಿಯನ್ನು ಮಾಡಿಕೊಂಡು ಸೂರ್ಯ ಭಾಗದಲ್ಲಿ ಪ್ರಾಣಲಿಂಗ, ಶರಣ, ಪ್ರಸಾದಿ, ಮಹೇಶ, ಭಕ್ತ ಎಂದು ಬರೆಯಲಾಗಿದೆ. ಸಿಂಹಾಸನದ ಮೇಲೆ ಕುಳಿತಿರುವ ಬಸವೇಶ್ವರರ ಚಿತ್ರ ನೋಡುಗರನ್ನು ಮಂತ್ರ ಮುಗ್ಧರನ್ನಾಗಿ ಮಾಡುವಂತಿದೆ. ಈ ಚಿತ್ರದಲ್ಲಿಯೂ ಕೂಡಾ ಕೃತಿಯ ಬಲಭಾಗದಲ್ಲಿ ಒಂದು ಮೇಜಿನ ಮೇಲೆ ಪುಸ್ತಕವನ್ನು ಇಟ್ಟಿದ್ದಾರೆ. ಕೃತಿಯು ತುಂಬಾ ಆಕರ್ಷಣೀಯವಾಗಿದೆ. ಕೃತಿ ಜಲವರ್ಣದಲ್ಲಿ ರಚನೆಯಾಗಿದೆ.

೨. ಎಡೆಯೂರ ಸಿದ್ಧಲಿಂಗೇಶ್ವರರು

ಈ ಕಲಾಕೃತಿಯು ತೈಲವರ್ಣದಲ್ಲಿ ರಚನೆಯಾಗಿದೆ. "೪x೬" ಅಡಿ ಭವ್ಯ ಗಾತ್ರವಾಗಿದೆ. ಹಾರ್ಡ್ ಬೋರ್ಡ್‌ಮೇಲೆ ಕ್ಯಾನವಾಸ್ ಅಂಟಿಸಿ ಪ್ರತಿಯೊಂದು ದೃಶ್ಯವನ್ನು ಬೇರೆ ಬೇರೆ ಮಾಡಿ ಸಂಯೋಜನೆಯೊಂದಿಗೆ ಕಲಾಕೃತಿಯನ್ನು ರಚಿಸಿದ್ದಾರೆ. ಎಡೆಯೂರ ಸಿದ್ಧಲಿಂಗೇಶ್ವರರು ಹುತ್ತಿನೊಳಗೆ ಪೂಜೆಗೆ ಕುಳಿತುಕೊಂಡಿದ್ದಾರೆ. ಕುಳಿತಂತಹ ಭಂಗಿಯು ಸುಂದರವಾಗಿ ರಚನೆಯಾಗಿದೆ. ಹುತ್ತಿನ ಮೇಲೆ ಒಂದು ಆಕಳು ಹಾಲನ್ನು ಕರೆಯುತ್ತಿದೆ. ಆಕಳವು ಸ್ವಾಮಿಗಳನ್ನು ನೋಡುತ್ತಿದ್ದು ಈ ಆಕಳದ ನಿಂತ ಶೈಲಿಯು ತುಂಬಾ ಆಕರ್ಷಣೆಯವಾಗಿದೆ. ಕೃತಿಯ ಹಿಂಭಾಗದಲ್ಲಿ ಸೂರ್ಯೋದಯವಾಗುತ್ತಿರುವಂತೆ ಕೃತಿಯಲ್ಲಿ ಚಿತ್ರಿಸಿದ್ದಾರೆ. ಹುತ್ತಿನ ಮೇಲೆ ಹಾವುಗಳು ಹೆಡೆಎತ್ತಿ ನಿಂತಿದೆವೆ. ಒಟ್ಟಾರೆಯಾಗಿ ಕೃತಿಯು

ತುಂಬಾ ಮನಮೋಹಕವಾಗಿ ರಚನೆಯಾಗಿದೆ. ಹಾಗೂ ತೈಲವರ್ಣವಾದ ಈ ಕಲಾಕೃತಿಯು ಪೂರ್ಣಗೊಂಡ ನಂತರ ಅದಕ್ಕೊಂದು ಪ್ರತ್ಯೇಕ ಕಮಾನು ಮಾಡಿ ಅದಕ್ಕೆ ಮುತ್ತುಗಳು ಹಾಗೂ ಸ್ವರ್ಣವರ್ಣದ ಎಳೆಯಿಂದ ಕುಸುರಿ ಕಲೆಯನ್ನು ಅತಿಸೂಕ್ಷ್ಮವಾಗಿ ಮಾಡಿದ್ದಾರೆ. ಈ ತಂತ್ರವನ್ನು ಕಲಾಕೃತಿಯಲ್ಲಿಯೂ ಮಾಡಿರುವುದು ಕಂಡು ಬರುತ್ತದೆ. ಈ ರೀತಿ ಪೂರ್ಣವಾಗಿ ತಯಾರಾದ ಕೃತಿ ನೋಡಲು ತುಂಬಾ ಸುಂದರವಾಗಿ ವಿಶೇಷತೆಯನ್ನು ಪಡೆಯುವಂತೆ ಮಾಡಿದ್ದಾರೆ. ಈ ಕೃತಿಯು ಕೂಡ ಶ್ರೀ ಜಗದ್ಗುರು ತೋಂಟದಾರ್ಯಮಠ ಗದಗದಲ್ಲಿ ಸಂಗ್ರಹವಾಗಿದೆ.

೩. ಶ್ರೀ ಬಸವೇಶ್ವರರು

ಈ ಕಲಾಕೃತಿಯು "೪x೮" ಅಡಿ ಭವ್ಯ ಗಾತ್ರವಾಗಿದೆ. ಈ ಕಲಾಕೃತಿಯು ಜಗಜ್ಯೋತಿ ಬಸವೇಶ್ವರರ ಕೃತಿ ಇದ್ದು ತೈಲವರ್ಣದಲ್ಲಿ ರಚಿತವಾಗಿದೆ. ಈ ಕೃತಿಯಲ್ಲಿ ಸುಂದರವಾದ ವೇಷ ಭೂಷಣಗಳಿಂದ ಕೂಡಿದ್ದಾಗಿದೆ. ಈ ಕಲಾಕೃತಿಯಲ್ಲಿ ಕಿರೀಟವನ್ನು ಕೆಂಪು ಮಿಶ್ರ ಹಳದಿ ವರ್ಣದಿಂದ ಕೂಡಿದೆ. ಇದರಲ್ಲಿ ಅನೇಕ ಸೂಕ್ಷ್ಮವಾದ ನಕ್ಷೆಗಳನ್ನು ಒಳಗೊಂಡಿದೆ. ಉದ್ದವಾದ ಅಂಗಿಯನ್ನು ಧರಿಸಿದ್ದಾರೆ. ಈ ಅಂಗಿಯ ತೋಳುಗಳಲ್ಲಿ ಸುಂದರವಾದ ನಕ್ಷೆಯನ್ನು ಚಿತ್ರಿಸಲಾಗಿದೆ. ಈ ನಕ್ಷೆಯಲ್ಲಿ ಕೆಂಪು ಹಸಿರು, ನೀಲಿ ವರ್ಣ ಮುತ್ತುಗಳಂತೆ ಕಾಣುವ ಆಕಾರವನ್ನು ಈ ಅಂಗಿಯ ಪಟ್ಟಿಕೆಯನ್ನು ಸುಂದರವಾಗಿ ಕಾಣುವಂತೆ ಮಾಡಿದ್ದಾರೆ. ಕೃತಿಯ ಎಡಭಾಗದಲ್ಲಿ ಖಡ್ಗವನ್ನು ಸಹ ರಚನೆಯಾಗಿದೆ. ಖಡ್ಗದಲ್ಲಿಯೂ ಕೂಡಾ ಖಡ್ಗದ ಕವಚದ ಮೇಲೆ ಸುಂದರವಾದ ನಕ್ಷೆಯನ್ನು ಚಿತ್ರಿಸಿದೆ. ಎಡಭಾಗದಲ್ಲಿ ಒಂದು ಅಲಂಕಾರಿಕ ಮೇಜಿನ ಮೇಲೆ ನಕ್ಷೆಯುಳ್ಳ ಅರಿವೆಯನ್ನು ಹೊದಿಸಿ ಅದರ ಮೇಲೆ ಪುಸ್ತಕವನ್ನು ಇಟ್ಟಿದ್ದಾರೆ. ಒಟ್ಟಾರೆಯಾಗಿ ಕಲಾಕೃತಿಯು ಸುಂದರವಾಗಿ ರೂಪಗೊಂಡಿದೆ. ಈ ಕಲಾಕೃತಿಯು ಗದುಗಿನ ತೋಂಟದಾರ್ಯ ಮಠದಲ್ಲಿ ಸಂಗ್ರಹಗೊಂಡಿದೆ.

೪. ಪುಜ್ಯರು

ಈ ಕಲಾಕೃತಿಯು "೧೪x೧೮" ಇಂಚು ಅಳತೆಯಾಗಿದ್ದು, ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯದಿಂದ ರಚಿಸಲಾಗಿದೆ. ಕೈಯಲ್ಲಿ ಪ್ರಭಾವಳಿಯನ್ನು ಚಿತ್ರಸಲಾಗಿದೆ. ಪ್ರಭಾವಳಿಯ ನಕ್ಷೆಯಲ್ಲಿ ಬಣ್ಣ ಬಣ್ಣದ ಮುತ್ತುಗಳನ್ನು ಬಳಸಿಕೊಂಡು ಅಲಂಕೃತವಾಗಿ ರಚಿಸಿದ್ದಾರೆ. ಪೂಜ್ಯರು ಪದ್ಮಾಸನ ಭಂಗಿಯಲ್ಲಿ ಚರ್ಮದ ಆಸನದ ಮೇಲೆ ಕುಳಿತುಕೊಂಡಿದ್ದಾರೆ. ದೇಹ ಮತ್ತು ಅಂಗಗಳನ್ನು ನೈಜವಾಗಿದೆ. ಹಣೆಯ ಮೇಲೆ ವಿಭೂತಿ ಹಚ್ಚಿ ಕೊರಳಲ್ಲಿ ರುದ್ರಾಕ್ಷಿ ಸರವನ್ನು ಧರಿಸಿದ್ದಾರೆ. ಮುಖದಲ್ಲಿ ಭಕ್ತಿಭಾವನೆ ಕಾಣುತ್ತದೆ. ಪಕ್ಕದಲ್ಲಿ ಕಮಂಡಲವಿದ್ದು ಹಿನ್ನಲೆಯಲ್ಲಿ ನೀಲಿ ವರ್ಣವಿದೆ. ಶಿರಭಾಗದ ಹಿಂದೆ ಹಳದಿ ವರ್ಣದಿಂದ ಸೂರ್ಯ ಪ್ರಕಾಶನ ಇರುವಂತೆ ವೃತಾಕಾರದಲ್ಲಿದೆ. ನೋಡುಗರಿಗೆ ಭಕ್ತಿ ಭಾವನೆ ಆಕರ್ಷಿಸುವಂತೆ ಪಾಟೀಲರು ತಮ್ಮ ಕಲಾಕೌಶಲ್ಯದಿಂದ ಸುಂದರವಾಗಿ ರಚಿಸಿದ್ದಾರೆ. ಈ ಕಲಾಕೃತಿಯು ಶ್ರೀ ಜಗದ್ಗುರು ತೋಂಟದಾರ್ಯ ಸ್ವಾಮಿಗಳ ಮಠದಲ್ಲಿ ಸಂಗ್ರಹಗೊಂಡಿದೆ.

[illegible]

೫. ಸಾರು ಹೇಳುವವರು

ಈ ಕಲಾಕೃತಿಯು "೧೪x೨೦" ಅಳತೆಯನ್ನು ಹೊಂದಿದ್ದು ೧೯೯೧ರಲ್ಲಿ ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಯೋಗಿಗಳು ತ್ರಿಶೂಲವನ್ನು ಹಿಡಿದುಕೊಂಡು ಮಳಿಗಳ ನಾಟ ಮೇಲೆ ನಿಂತಿದ್ದಾರೆ. ಇವರ ಮುಖದಲ್ಲಿ ಗಂಭೀರವಾಗಿ ನೇರ ದೃಷ್ಟಿಯಾಗಿದೆ. ಬಿಳಿ ವರ್ಣದ ದಪ್ಪನೆಯ ಮೀಸೆ ಮತ್ತು ಗಡ್ಡವಿದೆ. ತಲೆಯ ಮೇಲೆ ಹಳದಿ ವರ್ಣದ ರುಮಾಲಿದೆ. ಎಡಭಾಗದ ಕೈಯನ್ನು ಮುಷ್ಠಿಯಾಗಿ ಅರ್ಧಭಾಗ ಮಡಚಿದ್ದಾರೆ. ಕೆಂಪು ಮತ್ತು ಹಸಿರು ಮಿಶ್ರಿತ ಬಟ್ಟೆ ಧರಿಸಿದ್ದಾರೆ. ಕೊರಳಲ್ಲಿ ಕಂದು ವರ್ಣದ ಬಟ್ಟೆ ಹಾಕಿದ್ದಾರೆ. ಬಿಗಿಯಾದ ಹಳದಿ ಪಾಯಿಜಾಮ್ ಧರಿಸಿದ್ದಾರೆ. ಹಿನ್ನಲೆಯಲ್ಲಿ ದೇವಸ್ಥಾನಕ್ಕೆ ಹೋಗುತ್ತಿರುವ ಜನರು, ಮನೆಗಳು, ಆಕಾಶವನ್ನು ಯಥಾದರ್ಶನ ತೋರಿಸಿದ್ದಾರೆ. ಈ ಕಲಾಕೃತಿಯು ಸೌತ್ತ ನಾಗಪೂರ ಅಕಾಡೆಮಿಯಲ್ಲಿ ಪ್ರದರ್ಶಿತಗೊಂಡಿದೆ.

೬. ಅಥಣಿ ಶಿವಯೋಗಿಗಳು

ಈ ಕಲಾಕೃತಿಗಳಲ್ಲಿ ಸ್ವಾಮಿಯವರು ಆರ್ಶೀವಾದ ಭಂಗಿ ಇದ್ದು ಹಿನ್ನೆಲೆಯ ದೊಡ್ಡ ಮರ ಗಿಡ ನದಿ ಸುಂದರವಾಗಿ ಚಿತ್ರಿಸಲ್ಪಟ್ಟಿವೆ. ಜಿಂಕೆ, ಹಾವು, ಹುಲಿಗಳ ಚಿತ್ರಣವಿದ್ದು ಹುಲಿಯು ಸ್ವಾಮಿಜಿಯವರಿಗೆ ನಮಸ್ಕರಿಸುವಂತೆ ಚಿತ್ರಿಸಲಾಗಿದೆ. ಈ ಕೃತಿಯು ಕಾಲನ ಕೈಗೆ ಸಿಕ್ಕಿದ್ದರಿಂದಲೋ ಸಂರಕ್ಷಣೆ ರಹಿತದಿಂದಲೋ ಅಸ್ಪಷ್ಟವಾಗಿದೆ. ಆದರೂ ಕಲಾವಿದರ ನೈಜ ಚಿತ್ರಣ ಇದೆ. ಈ ಕಲಾಕೃತಿಯನ್ನು ಒಟ್ಟಾರೆ ನೋಡಲಾಗಿ ವ್ಯಾಘ್ರ ಮೃಗವೊಂದು ಸ್ವಾಮೀಜಿಯವರಿಗೆ ಶರಣಾದಂತೆ ಸ್ವಾಮೀಜಿಯವರ ಪ್ರಭಾವ ಮತ್ತು ಭಕ್ತರಸ ಉತ್ಪನ್ನವಾಗುವಂತೆ ಚಿತ್ರ ರಚನೆಯಾಗಿದ್ದು ಕಾಣಸಿಗುತ್ತದೆ. ಇದು ತೈಲವರ್ಣದಲ್ಲಿ ರಚನೆಗೊಂಡಿದೆ.

೭. ಶ್ರೀ ಹಾನಗಲ್ ಕುಮಾರ ಸ್ವಾಮಿಗಳು

ಈ ಕಲಾಕೃತಿಯು "೧೬x೨೪" ಇಂಚು ಅಳತೆಯ ಗಾತ್ರವಿದ್ದು ಪೇಪರಿನ ಮೇಲೆ ಜಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಕುಮಾರ ಸ್ವಾಮಿಗಳು ಸಣ್ಣ ಮೇಜಿನ ಮೇಲೆ ಗ್ರಂಥವಿದ್ದು ಅದರ ಮೇಲೆ ಕೈಗಳನ್ನು ಇಟ್ಟುಕೊಂಡು ಪದ್ಮಾಸನ ಭಂಗಿಯಲ್ಲಿ ಕುಳಿತ್ತಿದ್ದಾರೆ. ಮುಖದಲ್ಲಿ ಭಕ್ತಿ ಭಾವನೆ ಕಾಣುವಂತೆ. ಹಣೆಗೆ ವಿಭೂತಿ, ಕಣ್ಣುಗಳು ನೇರ ದೃಷ್ಟಿಯಾಗಿ, ಮೂಗು, ಭಾಯಿ ನೈಜವಾಗಿ ಕಾಣುತ್ತವೆ. ಮೈ ಮೇಲೆ ಖಾವಿ ಬಟ್ಟೆಯನ್ನು ಧರಿಸಿದ್ದಾರೆ. ನೀಲಿ, ಕೆಂಪು ಮತ್ತು ಬಿಳಿ ಮಿಶ್ರಿತ ಏಕ ವರ್ಣವನ್ನು ಪ್ರಮುಖವಾಗಿ ಬಳಸಿದ್ದಾರೆ. ಹಿನ್ನಲೆಯಲ್ಲಿ ಪಕ್ಷಿನೋಟ ಕಮಲ ಹೂವನ್ನು ಕಮಲ ಹೂವಿನ ಮೊಗ್ಗುಗಳಿವೆ. ಮುಖ್ಯ ಆಕೃತಿಯ ಸುತ್ತಲೂ ಶಬ್ದವನ್ನು ರಚಿಸಿದ್ದಾರೆ. ಈ ಕಲಾಕೃತಿಯು ಭಾಪ್ ಮೇಥೆಡ್ ಪದ್ಧತಿಯನ್ನು ಬಳಸಿದ್ದಾರೆ. ಆಕರ್ಷಿತವಾಗಿ ಸುಂದರವಾಗಿ ಕಾಣುವಂತೆ ರಚಿಸಿದ್ದಾರೆ. ಈ ಕಲಾಕೃತಿಯು ಮುಂಡರಗಿ ಅನ್ನದಾನೇಶ್ವರ ಮಠದಲ್ಲಿ ಸಂಗ್ರಹಗೊಡಿದೆ.

೮. ಶ್ರೀ ಬಸವೇಶ್ವರರು

ಈ ಕಲಾಕೃತಿಯು "೪x೬" ಅಡಿ ಅಳತೆಯ ಗಾತ್ರವಿದ್ದು ಕ್ಯಾನವಾಸ್ ಮೇಲೆ ತೈಲ ವರ್ಣಮಾಧ್ಯಮದಲ್ಲಿ ರಚಿಸಲಾಗಿದೆ. ಜಗಜ್ಯೋತಿ ಬಸವೇಶ್ವರರು ಸುಂದರವಾದ ವೇಷ ಭೂಷಣಗಳಿಂದ ಕೂಡಿದ್ದಾಗಿದೆ. ಕಿರೀಟದಲ್ಲಿ ಕೆಂಪು ಮಿಶ್ರ ಹಳದಿ ವರ್ಣವಿದ್ದು ಅನೇಕ ಸೂಕ್ಷ್ಮವಾದ ನಕ್ಷೆಗಳನ್ನು ಒಳಗೊಂಡಿದೆ. ಉದ್ದವಾದ ಅಂಗಿಯನ್ನು ಧರಿಸಿದ್ದು ತೋಳುಗಳು ಸುಂದರವಾದ ನಕ್ಷೆಯನ್ನು ಚಿತ್ರಿಸಲಾಗಿದೆ. ಬಲಗಾಲನ್ನು ಪಾದ್ಮಾಸನದ ಮೇಲೆ ಇಟ್ಟು ಸಿಂಹಾಸನದ ಮೇಲೆ ಕುಳಿತಿದ್ದಾರೆ. ಬಲಭಾಗದಲ್ಲಿ ಒಂದು ಮೇಜಿನ ಮೇಲೆ ನಕ್ಷೆಯುಳ್ಳ ಅಲಂಕಾರಿಕ ಬಟ್ಟೆಯನ್ನು ಹೊದಿಸಿ ಅದರ ಮೇಲೆ ಪುಸ್ತಕವನ್ನು ಇಟ್ಟಿದ್ದಾರೆ. ಹಿನ್ನಲೆಯಲ್ಲಿ ಕೂಡಲ ಸಂಗಮದ ನದಿಯಲ್ಲಿ ಐಕ್ಯಮಂಟಪವನ್ನು ಚಿತ್ರಿಸಿದ್ದಾರೆ. ನೋಡುಗರಿಗೆ ಆಕರ್ಷಿತವಾಗಿ ಭಕ್ತಿ ಮುಗ್ಧರನ್ನಾಗಿ ಕಾಣುತ್ತದೆ. ಈ ಕಲಾಕೃತಿಯು ಅನ್ನದಾನೇಶ್ವರ ಮಠ ಮುಂಡರಗಿಯಲ್ಲಿ ಸಂಗ್ರಹಗೊಂಡಿದೆ.

೯. ಶ್ರೀ ಚಂದ್ರಶೇಖರ ಶರಣರು

ಈ ಕಲಾಕೃತಿಯು "೧೪x೨೨" ಇಂಚು ಅಳತೆಯಾಗಿದ್ದು ಕ್ಯಾನವಾಸ್ ಮೇಲೆ ತೈಲವರ್ಣದಿಂದ ರಚಿತವಾಗಿದೆ. ಶರಣರ ಸುತ್ತ ನಲ್ವತ್ತಾಡ ಶರಣರು ಇತರೇ ಇಬ್ಬರು ಶರಣಮ್ಮನವರು, ಈಶ್ವರಲಿಂಗ ಕೆಳಗಡೆ ಶರಣರ ಪೂಜಾ ಸಾಮಗ್ರಿಗಳು ನೈಜವಾಗಿ ಚಿತ್ರಿತಗೊಂಡಿವೆ. ನೋಡುಗರನ್ನು ಭಕ್ತಿ ಭಾವದಿಂದ, ತನ್ಮಯತೆಯಿಂದ ನೋಡುವಂತೆ ಚಿತ್ರಿಸಲ್ಪಟ್ಟಿದೆ.

ಈ ಕಲಾಕೃತಿಯ ವೀರೇಶ್ವರ ಮಠ ನರಾಸಾಪೂರದಲ್ಲಿ ಸಂಗ್ರಗೊಂಡಿದೆ.

೧೦. ವಿಶ್ರಮಿಸುತ್ತಿರುವ ರಾಧಾ

ಈ ಕಲಾಕೃತಿಯು "೨೦x೩೦" ಇಂಚು ಅಳತೆಯ ಗಾತ್ರವಿದೆ. ಸಿ.ಎನ್.ಪಾಟೀಲರು ಈ ಕಲಾಕೃತಿಯನ್ನು ಬಂಗಾಲಿ ಶೈಲಿಯಲ್ಲಿ ರಚಿಸಿರುತ್ತಾರೆ. ಪೇಪರಿನ ಮೇಲೆ ಜಲವರ್ಣದಿಂದ ಚಿತ್ರಿಸಿ, ಪ್ರಧಾನ ರೇಖೆರಹಿತ ರಚನೆಯು ಈ ಶೈಲಿಯ ಪ್ರಮುಖ ಲಕ್ಷಣವಾಗಿದೆ. ಹೀಗಾಗಿ ಸಿ.ಎನ್.ಪಾಟೀಲರು ಈ ಕಲಾಕೃತಿಯಲ್ಲಿ ಮಹಿಳೆ ಅವಳ ಹಿಂದಿರುವ ಕಮಲದ ದೊಡ್ಡ ಹೂ ಹಾಗೂ ಅವಳ ಕೆಳಗೆ ಒಂದು ತಂಬೂರಿ, ಹಿನ್ನೆಲೆಯಲ್ಲಿ ಬಿಳಿ ಪಕ್ಷಿಗಳನ್ನು ತುಂಬಾ ಸುಂದರ ಹಾಗೂ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಜಲವರ್ಣವನ್ನು ವಾಶ್‌ಮೆಥೇಡ್‌ನಲ್ಲಿ ಬಳಸಿ ನೋಡುಗರನ್ನು ಆಕರ್ಷಿಸುವಂತೆ ಮಾಡಿದ್ದಾರೆ. ಈ ಕಲಾಕೃತಿಯು ವಿಜಯಕಲಾ ಮಂದಿರದಲ್ಲಿ ಸಂಗ್ರಹಗೊಂಡಿದೆ.

೧೧. ಶ್ರೀ ತೋಡಿ ರಾಗ

ಈ ಕಲಾಕೃತಿಯು "೨೪x೩೦" ಇಂಚು ಅಳತೆಯದಾಗಿದ್ದು ಪೇಪರಿನ ಮೇಲೆ ಜಲವರ್ಣ ಮಧ್ಯದಲ್ಲಿ ರಚಿಸಿದ್ದಾರೆ. ಪ್ರಧಾನ ರೇಖೆರಹಿತ ರಚನೆಯು ಈ ಶೈಲಿಯ ಪ್ರಮುಖ ಲಕ್ಷಣವಾಗಿದೆ. ಈ ಕಲಾಕೃತಿಯಲ್ಲಿ ಮಹಿಳೆ ಕಟ್ಟೆಯ ಮೇಲೆ ಒಂದು ಕೈಯಲ್ಲಿ ವೀಣೆಯನ್ನು ಹಿಡಿದುಕೊಂಡು

ಕುಳಿತಿರುವುದು ಮತ್ತೊಂದು ಕೈಯಿಂದ ಜಿಂಕೆಗೆ ಹುಲನ್ನು ತಿನಿಸುತ್ತಿರುವುದು ಮತ್ತೊಂದು ಜಿಂಕೆಯು ಮೇಲೆ ಮುಖ ಮಾಡಿ ಅವಳನ್ನು ನೋಡುತ್ತಿದೆ. ಹಿನ್ನಲೆಯಲ್ಲಿ ಹಸಿರು ವರ್ಣ ಮಿಶ್ರಿತ ಸಂಪ್ರದಾಯಿಕ ಎಲೆಗಳ ಗಿಡಗಳಿವೆ. ದೂರದಲ್ಲಿ ಗುಡ್ಡಗಳು ಮಧ್ಯದಲ್ಲಿ ನದಿ ಹರಿದು ಬಂದು ಬಿಳುತ್ತೀರುವುದು ಯಥಾದರ್ಶನವಾಗಿ ನೈಜವಾಗಿ, ಅಲಂಕಾರಿಕ, ಸುಂದರವಾಗಿ, ಚಿತ್ರಿಸಿದ್ದಾರೆ. ಬಿಳಿ ಮಿಶ್ರಿತ ಥಾಪಮೇಥೇಡ್ ಪದ್ಧತಿಯಲ್ಲಿ ಬಳಸಿದ್ದಾರೆ. ಈ ಕಲಾಕೃತಿಯು ದೆಹಲಿ ಅಕಾಡೆಮಿಯಲ್ಲಿ ಸಂಗ್ರಹಗೊಂಡಿದೆ.

೧೨. ಸುಗ್ಗಿಯ ಕಾಲ

ಈ ಕಲಾಕೃತಿಯು ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಹೊಲದಲ್ಲಿ ದೃಷ್ಟಿಗೊಂಬೆಯನ್ನು ನಿಲ್ಲಿಸಿದ್ದು ಎಡಭಾಗದಲ್ಲಿ ದೊಡ್ಡ ಮರವಿದೆ. ಅದರ ಹಿಂಭಾಗದಲ್ಲಿ ಒಂದು ಗುಡಿಸಲು ಇದ್ದು ಇಬ್ಬರು ವ್ಯಕ್ತಿಗಳು ಕೆಲಸದಲ್ಲಿ ನಿರತರಾಗಿದಆರೆ. ಹಿನ್ನಲೆಯಲ್ಲಿ ಇಬ್ಬರು ಮಹಿಳೆಯರು ತಲೆಯ ಮೇಲೆ ಬಿಂದಿಗೆಯನಿಟ್ಟುಕೊಂಡು ಬರುತ್ತಿರುವುದು, ಪಕ್ಕದಲ್ಲಿ ದನಗಳು ಹಿನ್ನಲೆಯಲ್ಲಿ ದೂರವಿರುವ ಗುಡ್ಡವಿದೆ. ಯಥಾದರ್ಶವಾಗಿ ಸಂಯೋಜನೆಯೊಂದಿಗೆ ಆಕರ್ಷಕವಾಗಿ ಚಿತ್ರಿಸಿದ್ದಾರೆ. ಬೆಂಗಳೂರು ಲಲಿತಕಲಾ ಅಕಾಡೆಮಿಯಲ್ಲಿ ಸಂಗ್ರಹಗೊಂಡಿದೆ.

೫.೨.೫. ನಿಸರ್ಗ ಚಿತ್ರಗಳು

ನಿಸರ್ಗ ಚಿತ್ರಗಳನ್ನು ಹಿಂದಿನಿಂದ ಇಂದಿನವರೆಗೂ ಒಂದೇ ರೀತಿಯಲ್ಲಿ ರಚಿಸುತ್ತಾ ಬಂದಿದ್ದಾರೆ. ಭಾರತೀಯ ಭೂದೃಶ್ಯ ಕಲೆ ತನ್ನದೇ ಆದ ವೈಶಿಷ್ಟ್ಯ, ಸೂಚಕ ಶೈಲಿಯನ್ನು ಇಂದಿಗೂ ಕಂಡುಕೊಂಡಿಲ್ಲ, ಇಂಪ್ರೇಷನಿಷ್ಟರ ತಂತ್ರಗಳಲ್ಲಿ ಚಿತ್ರಿಸುತ್ತಿರುವ ಈ ಕಲಾವಿದರು ಭಾರತೀಯ ಭೂದೃಶ್ಯಗಳನ್ನು ಯೂರೋಪಿನ ಕಲಾವಿದರು ಪರಿಭಾವಿಸುವಂತೆಯೇ ಚಿತ್ರಿಸುತ್ತಿದ್ದಾರೆ. ಎನ್ನುವ ಮಾತುಸತ್ಯ ಅದೇ ಪಾಶ್ಚಾತ್ಯ ಶೈಲಿಯ ಕಲಾಶಾಲೆಯಲ್ಲಿ ಸಿ.ಎನ್.ಪಾಟೀಲರ ಕಲಿತದ್ದರಿಂದ ಅವರ ನಿಸರ್ಗ ಚಿತ್ರದಲ್ಲಿ ಆ ಪ್ರಭಾವ ಕಂಡು ಬರುತ್ತದೆ.

ಸಂಯೋಜನಾ ಚಿತ್ರಗಳಲ್ಲಿ ಹಿನ್ನಲೆಯಾಗಿ ಹಿನ್ನಲೆಯಾಗಿ ಈ ನಿಸರ್ಗವನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ. ಅಲ್ಲಿ ನಮ್ಮ ಭಾರತೀಯ ಶೈಲಿಯ ಕಿರುರೂಪ ಚಿತ್ರದ ಪ್ರಭಾವ ಕಂಡುಬರುತ್ತದೆ. ಗಿಡ, ಮರ, ಬಳ್ಳಿ ಪಕ್ಷಿಗಳು ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ಇವರು ಚಿತ್ರಿಸಿದ ನಿಸರ್ಗ ಚಿತ್ರದ ವಸ್ತುಗಳು ಹೆಚ್ಚಾಗಿ ಗಿಡಮರಗಳು, ಹಾಳು ಕೋಟೆ, ಮಸೀದಿ, ಮಂಟಪ ಹೊಂಡ, ದೇವಾಲಯದ ಒಳಭಾಗ, ಹೊರಭಾಗ, ಒಳಗೊಂಡಿದೆ. ಸಿ.ಎನ್.ಪಾಟೀಲರು ತಮ್ಮದೇ ಆದ ವೈಯಕ್ತಿಕ ಶೈಲಿಯಲ್ಲಿ ಕಲಾಕೃತಿ ರಚಿಸಿದ್ದಾರೆ. ಈ ಅಧ್ಯಯನಕ್ಕೆ ಒಳಗೊಂಡಿದೆ.

೧. ಶಿರಹಟ್ಟಿಯ ಫಕೀರೇಶ್ವರ ಸ್ವಾಮಿ ಗದ್ದುಗೆ

ಈ ಕಲಾಕೃತಿಯು ಜಲವರ್ಣ ಮಧ್ಯದಲ್ಲಿ ಪೇಪರಿನ ಮೇಲೆ ರಚಿಸಿದ್ದಾರೆ. ಬಿಳಿ ವರ್ಣ ಮಿಶ್ರಿತ ಬಂಗಾಲ ಶೈಲಿ (ಬಿಪೆಕ್ಕೂ)ಯಲ್ಲಿದೆ, ಹಿನ್ನಲೆಯಲ್ಲಿ ಅಲಂಕಾರಿಕ ನಕ್ಷೆಯುಳ್ಳ ಗೋಡೆಯು ಇದ್ದು ಅಕ್ಕ

[illegible]

ಪಕ್ಕದಲ್ಲಿ ಹಳದಿ, ಜಾಬ್ಳಿ, ಕೇಸರಿ ವರ್ಣ ಮಿಶ್ರಿತ ಗಿಡಮರಗಳಿವೆ, ಫಕೀರೇಶ್ವರ ಸ್ವಾಮಿಗಳ ಗದ್ದುಗೆ ಬಿಳಿ ವರ್ಣದಲ್ಲಿ ರಚಿಸಿದ್ದಾರೆ. ಅದರ ಮೇಲೆ ಗೋಪುರವಿದೆ. ಗದ್ದುಗೆ ದರ್ಶನಕ್ಕೆ ಸಾಲಾಗಿ ಹೋಗುತ್ತಿರುವ ಜನರಿದ್ದಾರೆ. ಬಿಳಿ, ಕೆಂಪು, ಹಸಿರು, ನೀಲಿ ವರ್ಣಗಳಿಂದ ತೋರಿಸಿದ್ದಾರೆ. ಮುಂದೆ ಹಸಿರು ಹಳದಿ ಮಿಶ್ರಿತ ನೆಲವನ್ನು ಒಟ್ಟಾರೆ ದೂರ ಸಮೀಪದ ಯಥಾದರ್ಶನ ಪರಿಕಲ್ಪನೆ ನೈಜವಾಗಿ ಮೂಡಿ ಬಂದಿದೆ.

೨. ಫಕಿರೇಶ್ವರ ಸ್ವಾಮಿ ಗದ್ದುಗೆ ಇನ್ನೊಂದು ನೋಟ

ಈ ಕಲಾಕೃತಿಯಲ್ಲಿ ಹೊರಭಾಗದ ದ್ವಾರಬಾಗಿಲ ಮುಂದೆ ಇರುವ ಗಿಡಮರಗಳು ಜನದಟ್ಟಣೆಯಲ್ಲಿ ಒಳಗೆ ಹೋಗುತ್ತಿರುವ ಜನರನ್ನು ಬಿಳಿ, ಹಳದಿ, ಹಸಿರು ಕೆಂಪು, ನೀಲಿ, ವರ್ಣಗಳಿಂದ ಚಿತ್ರಿಸಿಲಾಗಿದೆ. ಹಿನ್ನೆಲೆಯಲ್ಲಿ ಫಕೀರಸ್ವಾಮಿ ಗದ್ದುಗೆ, ಮಸೀದಿ ದೂರದ ಗುಡ್ಡ, ಗಿಡ ಮರಗಳನ್ನು ವರ್ಣಗಳಿಂದ ಯಥಾದರ್ಶನ ಪರಿಕಲ್ಪನೆ ಮೂಡಿಬಂದಿದೆ. ಬಿಳಿ ವರ್ಣ ಮಿಶ್ರಿತ ಜಲವರ್ಣ (ಜಾಪೆಕ್ಯೋ) ಪದ್ಧತಿಯಲ್ಲಿ ರಚಿಸಿದ್ದಾರೆ. ನೋಡುಗರಿಗೆ ಆಕರ್ಷಣೆಯಾಗುವಂತೆ ಕಾಣುತ್ತದೆ.

೩. ಅಜಂತಾ ಪರಿಸರದ ಭೂದೃಶ್ಯ

ಈ ಕಲಾಕೃತಿಯಲ್ಲಿ ಗುಡ್ಡ ದೇವಾಲಯಗಳು ಮತ್ತು ಇದರ ಹಿನ್ನಲೆ ಮತ್ತು ಮನೆಯನ್ನು ಬಹಳ ಸುಂದರವಾಗಿ ಕಲಾವಿದರು ರಚಿಸಿದ್ದಾರೆ. ಈ ಕಲಾಕೃತಿಯು ಕ್ಯಾನವಾಸ್ ಮೇಲೆ ತೈಲವರ್ಣದ ಮಾಧ್ಯಮದಲ್ಲಿ ರಚಿಸಿದ್ದಾರೆ. ವಿವಿಧ ರೀತಿಯ ಹೂಗಿಡಗಳ ಮತ್ತು ವಿವಿಧ ಮರಗಳ ಗುಂಪು ದಿಗುತಕ್ಕೆ ಕಾಣುವ ಹಾಗಿ ಚಿತ್ರಿಸಿದ್ದಾರೆ. ಒಟ್ಟು ಚಿತ್ರ ಮಧ್ಯದಲ್ಲಿ ಆಕಾಶವನ್ನು ಮುಚ್ಚಿ ಹಾಗೆ ಬೆಟ್ಟ ಅದರ ಮೇಲೆ ಒಂದು ಮಂಟಪ. ಅದಕ್ಕೆ ಎಂಟು ಕಂಬಗಳಿದ್ದು ವೃತ್ತಾಕಾರದಲ್ಲಿದೆ. ಕಂಬಿಗಳು ಬಿಳಿ ಮತ್ತು ಆಕಾಶ ನೀಲಿ ವರ್ಣದಲ್ಲಿ ತೋರಿಸಿದ್ದಾರೆ. ಬೆಟ್ಟದ ಸುತ್ತಲೂ ಹರಿಯುವ ನದಿ, ನದಿಯೂ ದೂರದಿಂದ ಬಂದಂತೆ ಬೆಟ್ಟವನ್ನು ಸುತ್ತು ಹಾಕಿ ಹೋದಂತೆ ಚಿತ್ರಿಸಿದ್ದಾರೆ. ಇದಲ್ಲದೆ ಮುಂದೆ ಮತ್ತು ಅಕ್ಕಪಕ್ಕಕ್ಕೆ ಬೃಹತ್ ಆಕಾರದ, ಬಂಡೆಗಳಿದ್ದು ಬಂಡೆಗಳನ್ನು ತೊರೆದು ಅದರಲ್ಲಿಯೇ ಮಂಟಪ ಮಾಡಿರುವ ದೃಶ್ಯವಂತೂ ಮನ್ಮೋಹಕವಾಗಿದೆ, ಬಂಡೆಯ ಮೇಲೆ ಹತ್ತಿ ಮಂಟಪಗಳನ್ನು ವೀಕ್ಷಿಸಲು ಸಾಲಾಗಿ ಜನರು ಹೋಗುತ್ತಿರುವುದು ಸುಂದರವಾಗಿ ಮೂಡಿಬಂದಿದೆ ಬಯಲು ಹೂಗಿಡಗಳು ವರ್ಣಮಯ ದೃಶ್ಯಕ್ಕೆ ವಿಶಿಷ್ಟ ಆಯಾಮ ಕಲ್ಪಿಸಿ ಚಿತ್ರದ ಒಟ್ಟು ಸೌಂದರ್ಯ ಹೆಚ್ಚಿಸಿದೆ, ಒಟ್ಟಾರೆ ವರ್ಣಗಳ ಸಂಯೋಜನೆಯು ಯಥಾದರ್ಶನ ಪರಿಕಲ್ಪನೆ ಈ ಕಲಾಕೃತಿಯಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ.

೪. ದೇವಾಲಯ

ಈ ಕಲಾಕೃತಿಯ ಪೇಪರಿನ ಮೇಲೆ ಜಲವರ್ಣ ಮಾಧ್ಯಮದಲ್ಲಿ ಚಿತ್ರಿಸಲಾಗಿ ಬಿಳಿ ವರ್ಣ ಮಿಶ್ರಿತ (ಔಪೆಕ್ಯೂ) ಪದ್ಧತಿ ಬಳಸಲಾಗಿದೆ. ಮೂರ್ತಿ ಶಿಲ್ಪ, ನಕ್ಷೆ, ಗುಮ್ಮಟ ಆಕಾರದ ಗೋಪುರವಿದ್ದು ಐತಿಹಾಸಿಕ ದೇವಸ್ಥಾನವಾಗಿದೆ. ನೀಲಿ, ಕೆಂಪು, ಕಪ್ಪು ಮತ್ತು ಬಿಳಿ ಮಿಶ್ರಿತ ವರ್ಣದಿಂದ ರಚಿಸಲಾಗಿದ್ದು

ಉಬ್ಬು ತಗ್ಗನ್ನು ನೈಜವಾಗಿ ರಚಿಸಲಾಗಿದೆ. ಎಡಭಾಗದ ಹಿಂಭಾಗದಲ್ಲಿ ಇನ್ನೊಂದು ಐತಿಹಾಸಿಕ ದೇವಸ್ಥಾನವಿದ್ದು ಅದರ ಪಕ್ಕದಲ್ಲಿ ಹಳದಿ, ಹಸಿರು, ಮಿಶ್ರಿತ ಗಿಡಮರಗಳಿವೆ, ಬಲಭಾಗದಲ್ಲಿಯೂ ಕೂಡ ಗಿಡಮರಗಳನ್ನು ತೋರಿಸಿದ್ದಾರೆ. ಹಿನ್ನಲೆಯಲ್ಲಿ ನೀಲಿ ಮತ್ತು ಬಿಳಿ ಆಕಾಶ ದೂರವಿರುವ ಬೆಟ್ಟ ದೇವನಾದ ಮುಂದೆ ದರ್ಶನಕ್ಕೆ ಬರುತ್ತಿರುವ ಜನರನ್ನು ತೋರಿಸಿದ್ದಾರೆ. ಎಡಭಾಗ ಮತ್ತು ಬಲಭಾಗದಲ್ಲಿ ಸಣ್ಣ ಸಣ್ಣ ಗಿಡಗಳನ್ನು ಹೂ ಬಳಿಗಳನ್ನು ತೋರಿಸಿದ್ದಾರೆ ಮಧ್ಯದಲ್ಲಿ ದಾರಿ ಇದ್ದು ಎಡಭಾಗದ ಸಮೀಪ ಆಂಜನಯ ಮೂರ್ತಿಯು ಇದೆ. ಒಟ್ಟಾರೆ ಯಥಾದರ್ಶನ ಪರಿಕಲ್ಪನೆ ವಿನ್ಯಾಸವನ್ನು ಮೂಡಿ ಬಂದಿದೆ. ತಮ್ಮದೇ ಆದ ಶೈಲಿಯಲ್ಲಿ ಪಾಟೀಲರು ನೈಜವಾಗಿ ಸುಂದರವಾಗಿ ಚಿತ್ರಿಸಿದ್ದಾರೆ.

೫. ನಿಸರ್ಗ ಚಿತ್ರ

ಈ ನಿಸರ್ಗ ಚಿತ್ರಣದಲ್ಲಿ ಗಿಡಮರಗಳು ಮಧ್ಯದಲ್ಲಿ ದೂರದಿಂದ ಹರಿದು ಬರುವ ನದಿಯು ಪ್ರಮುಖವಾಗಿ ಚಿತ್ರಿಸಿದ್ದಾರೆ. ಈ ಕಲಾಕೃತಿಯ ಜಲವರ್ಣ ಮಧ್ಯದಲ್ಲಿ ಪೇಪರಿನ ಮೇಲೆ ಚಿತ್ರಿಸಲಾಗಿದೆ. ಎಡಭಾಗದಲ್ಲಿ ದೊಡ್ಡ ದೊಡ್ಡ ಬಂಡೆಗಳಿದ್ದು ಅದರ ಹಿಂಭಾಗ ಗಿಡ, ಮರಗಳಿವೆ ಮಧ್ಯದಲ್ಲಿ ನದಿಯು ಹರಿದು ಬರುವಂತೆ ಕಾಣುತ್ತದೆ. ಬಲಭಾಗದ ಗೋಪುರ ಆಕಾರದ ಗುಡಿಗಳಿದ್ದು ಅದರ ಮುಂದೆ ವ್ಯಕ್ತಿಗಳು ನಿಂತಿರುವುದು ರಚಿಸಲಾಗಿದೆ. ಗುಡಿಸಲ ಹಿಂಭಾಗದಲ್ಲಿ ಗಿಡ ಮರಗಳು ಹಳದಿ ಹಸಿರು ವರ್ಣದಿಂದ ರಚಿಸಲಾಗಿದೆ. ದೂರವಿರುವ ಯಥಾದರ್ಶನ ಪರಿಕಲ್ಪನೆ ನೈಜವಾಗಿ ಮೂಡಿ ಬಂದಿವೆ.

೬. ಕಾರವಾರ ನಿಸರ್ಗ ಚಿತ್ರಣ

ಈ ಚಿತ್ರವು ಕಲಾಚಾರ್ಯ ಸಿ.ಎನ್.ಪಾಟೀಲರು ಕಾರವಾರದ ಕಲಾ ಕಾರ್ಯಾಗಾರದಲ್ಲಿ ಚಿತ್ರಿಸಿದ್ದು. ಈ ಚಿತ್ರಣವನ್ನು ನಸುಕಿನಲ್ಲಿ ಕಾರವಾರದ ಸೌಂದರ್ಯವನ್ನು ಅನುಭವಿಸಲು ಹೋಗಿದ್ದರು. ಆ ಕಾರವಾರದ ಪ್ರಕೃತಿಯ ಸೌಂದರ್ಯವನ್ನು ಅನುಭವ ಸೆರೆಹಿಡಿದು ತೈಲವರ್ಣ ಮಾಧ್ಯಮದಲ್ಲಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ನೋಡಿದರೆ ಸಮುದ್ರದ ಅಲೆಗಳು, ದಡಕ್ಕೆ ಅಪ್ಪಳಿಸುತ್ತಾ ಬರುತ್ತಿರುವುದು, ಸಮುದ್ರದಲ್ಲಿ ದೂರವಿರುವ ಹಡಗುಗಳು ಹಡಗಿನಲ್ಲಿ ಮೀನುಗಾರರು, ಹಿನ್ನಲೆಯಲ್ಲಿ ದೂರದಲ್ಲಿ ಕಣ್ಣ ದೊಡ್ಡ ದೊಡ್ಡ ಹಡಗುಗಳು, ಗುಡ್ಡೆಗಳು ಯಥಾದರ್ಶನದ ಪರಿಕಲ್ಪನೆಯ ಸ್ಪಷ್ಟವಾಗಿ ಮೂಡಿ ಬಂದಿದೆ. ಚಿತ್ರದ ಎಡಭಾಗದಲ್ಲಿ ಗಿಡ ಮರಗಲಿದ್ದು ಹಳದಿ ಹಸಿರ ಬಿಳಿ ಮಿಶ್ರಿತ ವರ್ಣಗಳಿಂದ ರಚಿಸಲಾಗಿದೆ. ಅದರ ಮುಂದೆ ಹುಲ್ಲು ಹೂವಿನ ಗಿಡಗಳಿವೆ. ಬಲಭಾಗದಲ್ಲಿ ಜನರು ಕುತಿರುವ ಸಮೂಹವಿದೆ. ಈ ಕಲಾಕೃತಿಯಲ್ಲಿ ಪಾಶ್ಚಾತ ಕಲಾವಿದ ಗೋಯಾ ಅವರ ಪ್ರಭಾವವನ್ನು ತೋರಿಸುತ್ತದೆ.

೭. ಗೋಳಗುಮ್ಮಜ, ಬಿಜಾಪುರ

ಈ ಕಲಾಕೃತಿಯಲ್ಲಿ ಗೋಳಗುಮ್ಮಜಕ್ಕೆ ಹೋಗುವ ಮುನ್ನ ಹಾಳು ಬಿದ್ದಿರುವ ಕಮಾನು ಇದೆ. ಅದರಲ್ಲಿ ಹಾದುಹೋಗುವ ದಾರಿಯಿದ್ದು, ದೂರವಿರುವ ಗೋಳಮ್ಮಜ ಕಾಣುತ್ತಿರುವುದು ಜಲವರ್ಣ ಮಾಧ್ಯಮದಲ್ಲಿ ಪೇಪರಿನ ಮೇಲೆ ಚಿತ್ರಿಸಲಾಗಿದೆ. ಹಾಳು ಬಿದ್ದು ಕಮಾನವನ್ನು ಕೆಂಪು, ಮಿಶ್ರಿತ ನೀಲಿ,

ವರ್ಣಗಳಿಂದ ರಚಿಸಲಾಗಿದೆ. ಮುಂದೆ ಗಿಡ ಬಳ್ಳಿಗಳಿದ್ದು ಹಿನ್ನಲೆಯಲ್ಲಿ ನಿಸರ್ಗದಿಂದ ಗುಡಿದ ಗೋಳಗುಮ್ಮಜವನ್ನು ತೋರಿಸಿದ್ದಾರೆ. ವರ್ಣಗಳ ಸಂಯೋಜನೆ ದೂರ ಮತ್ತು ಸಮೀಪದ ಪರಿಕಲ್ಪನೆ ಸ್ಪಷ್ಟವಾಗಿ ಮೂಡಿ ಬಂದಿದೆ. ಈ ಕಲಾಕೃತಿಯು ಬೆಂಗಳೂರು ಲಲಿತ ಕಲಾ ಅಕಾಡೆಮಿಯಲ್ಲಿ ಸಂಗ್ರಹಗೊಂಡಿದೆ.

೮. ನಿಸರ್ಗ ದೃಶ್ಯ

ಈ ಕಲಾಕೃತಿಯು ಪೇಪರಿನ ಮೇಲೆ ಜಲವರ್ಣ ಮಾಧ್ಯಮದಲ್ಲಿ ಪೇಪರಿನ ಮೇಲೆ ರಚಿಸಲಾಗಿದೆ. ಬಿಳಿ ವರ್ಣ ಮಿಶ್ರಿತ ಜಿಪೆಕ್ಕೊ ಪದ್ಧತಿಯನ್ನು ಬಳಸಿಕೊಂಡಿದ್ದಾರೆ. ಈ ಕಲಾಕೃತಿಯಲ್ಲಿ ಗಿಡ ಮರಗಳ ಮಧ್ಯದಲ್ಲಿ ನದಿಯು ಹರಿದು ಒಂದು ಎತ್ತರವಾಗಿ ಬಂಡೆಗಳ ಮೇಲಿಂದ ಬೀಳುತ್ತಿರುವಂತೆ ಚಿತ್ರಿಸಲಾಗಿದೆ. ಇಂದೊಂದು ದಬೆ ಪಾಲ್ಸ್ ಅನಿಸುತ್ತದೆ. ಕೆಳಭಾಗದ ಹಳದಿ ಹಸಿರು ಕೇಸರಿ ಮಿಶ್ರಿತ ಒಂದು ಭಾಗದಲ್ಲಿದ್ದು ಇನ್ನೊಂದು ಭಾಗದಲ್ಲಿ ಕಪ್ಪು ನೀಲಿ, ತಿಳಿನೀಲಿ, ಹಸಿರು ಮಿಶ್ರಿತ ಸಣ್ಣ ಸಣ್ಣಗಿಡಗಳಿದ್ದು ಅದರ ನಡುವೆ ಮೇಲಿಂದ ಬಿದ್ದ ನೀರು ಹರಿದು ಬರುವಂತೆ ತೋರಿದ್ದಾರೆ. ಹಿನ್ನಲೆಯಲ್ಲಿ ನಿಸರ್ಗ ದುಂಬಿದ ಗುಡ್ಡಗಳ ಸಮೀಪದಲ್ಲಿರುವ ಕಲ್ಲು ಬಂಡೆಗಳು ಯಥಾದರ್ಶನ ಪರಿಕಲ್ಪನೆ ವಿನ್ಯಾಸ ನೈಜವಾಗಿ, ಸುಂದರವಾಗಿ ಮೂಡಿಬಂದಿದೆ.

೯. ನಿಸರ್ಗ ದೃಶ್ಯ

ಈ ಕಲಾಕೃತಿಯ ಪೇಪರಿನ ಮೇಲೆ ಬಿಳಿ ವರ್ಣ ಮಿಶ್ರಿತ ಜಲವರ್ಣ ಮಧ್ಯದಲ್ಲಿ ಚಿತ್ರಿಸಲಾಗಿದೆ. ದೂರದಲ್ಲಿರುವ ಬೃಹತ್ ಆಕಾರದ ಗುಡ್ಡವಿದ್ದು ಅದರ ಮೇಲೆ ಒಂದು ದೇವಸ್ಥಾನವಿದೆ. ಕೆಳಭಾಗಕ್ಕೆ ಒಂದರಂತೆ ನಿಸರ್ಗ ಹಸಿರು ಹಳದಿ ಕೆಂಪು, ಮಿಶ್ರಿತ ನಿಸರ್ಗ ತುಂಬಿದ್ದು ಅಲ್ಲೊಂದು ದೇವಸ್ಥಾನವಿದೆ. ಸಮೀಪಕ್ಕೆ ಒಂದರಂತೆ ಎಡಭಾಗದಲ್ಲಿ ಮತ್ತು ಮಧ್ಯಭಾಗದಲ್ಲಿ ದೇವಸ್ಥಾನವಿದೆ. ಅದರ ಮುಂದೆ ದಾರಿ ಇದ್ದು ಬಲಭಾಗದಲ್ಲಿ ಮನೆ ಮತ್ತು ದ್ವಾರಬಾಗಿಲು ಇದೆ. ಸಮೀಪದಲ್ಲಿ ಸಣ್ಣ ಸಣ್ಣ ಹೂವಿನ ಗಿಡಗಳ ಕೆಂಪು, ಹಳದಿ, ಹಸಿರು ಮಿಶ್ರಿತ ವರ್ಣದಲ್ಲಿ ರಚಿಸಲಾಗಿದೆ. ಈ ಕಲಾಕೃತಿಯಲ್ಲಿ ಯಥಾದರ್ಶನ ಪರಿಕಲ್ಪನೆ ನೈಜವಾಗಿದ್ದು ಸುಂದರವಾಗಿ ಕಾಣಿಸುತ್ತದೆ.

೧೦. ನಿಸರ್ಗದೃಶ್ಯ

ಈ ಕಲಾಕೃತಿಯನ್ನು ಬಿಳಿ ಮಿಶ್ರಿತ ಜಲವರ್ಣ ಮಧ್ಯದಲ್ಲಿ ಪೇಪರಿನ ಮೇಲೆ ರಚಿಸಲಾಗಿದೆ. ಎಡಭಾಗ ಮತ್ತು ಬಲಭಾಗದಲ್ಲಿ ಗಿಡಮರಗಳಿಂದ ತುಂಬಿದೆ. ಹಸಿರು, ಕೆಂಪು, ಕಂದು, ಹಳದಿ ಮತ್ತು ಬಿಳಿ ಮಿಶ್ರಿತ ವರ್ಣಗಳಿಂದ ಚಿತ್ರಿಸಲಾಗಿದೆ. ಮಧ್ಯದಲ್ಲಿ ದೂರದಿಂದ ನದಿಯು ಹರಿದಿದ್ದು ಮುಂದೆ ಬಂದಂತೆ ಎತ್ತರದಿಂದ ಕೆಳಗಡೆ ನೀರು ಬೀಳುವಂತೆ ತೋರಿಸಿದ್ದಾರೆ. ಬಿದ್ದ ನೀರು ಹರಿದು ಬಂಡೆಗಳ ನಡುವೆ ಹಾದು ಹೋಗುವಂತೆ ಚಿತ್ರಿಸಿದ್ದಾರೆ. ದೂರವಿರುವ ಗುಡ್ಡಗಳು ಅದರ ಹಿನ್ನಲೆಯಲ್ಲಿ ಆಕಾಶವನ್ನು ಸಮೀಪದವರೆಗೆ ಯಥಾದರ್ಶನದ ಪರಿಕಲ್ಪನೆ ವಿನ್ಯಾಸವನ್ನು ನೈಜವಾಗಿ ಸುಂದರವಾಗಿ ತೋರಿಸಲಾಗಿದೆ.

[illegible]

೧೧. ಗೋಳಗುಮ್ಮಜ ಬಿಜಾಪುರ

ಈ ಕಲಾಕೃತಿಯನ್ನು ಬಿಳಿ ಮಿಶ್ರಿತ ಜಲವರ್ಣ ಮಧ್ಯದಲ್ಲಿ ಪೇಪರಿನ ಮೇಲೆ ರಚಿಸಲಾಗಿದೆ. ಗೋಳಗುಮ್ಮಜದ ಅಕ್ಕ ಪಕ್ಕದಲ್ಲಿ ನಿಸರ್ಗವು ಹಳದಿ, ಹಸಿರು, ಕೇಸರಿ, ಕೆಂಪು ವರ್ಣಗಳಿದ್ದು ಕೂಡಿದ್ದು ಎಡಭಾಗದಲ್ಲಿ ನಾಲ್ಕು ಕಮಾನುಗಳು ಮಸೀದಿ ತೋರಿಸಿದ್ದಾರೆ. ಗೋಳಗುಮ್ಮಜ ಬೃಹದಾಕಾರವಿದ್ದು, ಅದಕ್ಕೆ ನಾಲ್ಕು ಅಂಚಿನಲ್ಲಿ ದೊಡ್ಡ ಆಕಾರ ಕಂಬಗಳಿದ್ದು ಮೇಲೆ ಹತ್ತಲು ಭಾಗಿಲುಗಳನ್ನು ಹಂತ ಹಂತದಲ್ಲಿದೆ, ನಾಲ್ಕು ಭಾಗದಲ್ಲಿ ದೊಡ್ಡದಾದ ದ್ವಾರಬಾಗಿಲು ಇದೆ. ಅದರಲ್ಲಿ ಅಲಂಕೃತ ನಕ್ಷೆಯು ರಚಿಸಿದ್ದಾರೆ. ನಕ್ಷೆಯು ಸ್ಪಷ್ಟವಾಗಿ ಕಾಣುತ್ತಿಲ್ಲ ಮುಂದೆ ಹಸಿರು ನೆಲವಿದು ಜನರು ಗೋಳಗುಮ್ಮಜ ವಿಕ್ಷೀಸುವಂತೆ ರಚಿಸಿದ್ದಾರೆ. ನೈಜವಾಗಿ ಆಕರ್ಷಿತವಾಗಿ ಕಾಣುವಂತೆ ಚಿತ್ರಿಸಿದ್ದಾರೆ.

೧೨. ಕಲ್ಲಿನ ರಥ, ಹಂಪಿ

ಐತಿಹಾಸಿಕ ಚಿತ್ರಗಳಲ್ಲಿ ವಿಜಯನಗರವನ್ನು ಸಾರುವ ಹಂಪಿ ಐತಿಹಾಸಿಕ ಸ್ಥಳಗಳಲ್ಲಿ ವಿಜಯ ವಿಠ್ಠಲ ಮಂದಿರದಲ್ಲಿರುವ ಕಲ್ಲಿನ ರಥವನ್ನು ಅದು ಇದ್ದ ರೂಪವನ್ನು ತೊರೆದು ತಮ್ಮದೇ ಆದ ರೇಖೆ ಮತ್ತು ವರ್ಣಗಳಿಂದ ಬಿಡಿಸಿದ್ದಾರೆ. ವರ್ಣಗಳಲ್ಲಿಯೂ ಇದ್ದ ಬಣ್ಣವನ್ನು ಬಿಟ್ಟು ಸಾಂಪ್ರದಾಯಕ ಶೈಲಿಯಲ್ಲಿ ಕೆಂಪು ಮತ್ತು ಕಂದು, ಹಳದಿ, ಮಿಶ್ರಿತ ವರ್ಣಗಳಿಂದ ಇಡಿ ಭಾಗವನ್ನು ತುಂಬಿ ಅದರ ಮೇಲೆ ಕಪ್ಪು ನೇರಳೆ ಬಣ್ಣದಿಂದ ನಕ್ಷೆಗಳನ್ನು ಬಿಡಿಸಿ ಅವುಗಳಿಗೆ ಬಿಳಿ ಮಿಶ್ರಿತ ಬಣ್ಣದಿಂದ ನಕ್ಷೆಗಳನ್ನು ಬಿಡಿಸಿ ಅವುಗಳಿಗೆ ಬಿಳಿ ಮಿಶ್ರಿತ ಬಣ್ಣದಿಂದ ಹೊಳಪು ಕಾಣುವಂತೆ ರಚಿಸಿದ್ದಾರೆ. ಉಳಿದಂತೆ ಗಿಡ, ಮರಗಳನ್ನು ತೋರಿಸಿದ್ದಾರೆ, ತಮ್ಮದೇ ಆದ ವೈಯಕ್ತಿಕ ಶೈಲಿಯನ್ನು ಬಳಸಿಕೊಂಡು ಸಿ.ಎನ್.ಪಾಟೀಲರು ನೋಡುಗರಿಗೆ ಆಕರ್ಷಿತವಾಗಿ ನೈಜವಾಗಿ ರಚಿಸಿದ್ದಾರೆ.

೧೩. ದೇವಸ್ಥಾನ

ಈ ಕಲಾಕೃತಿಯನ್ನು ಪ್ರಧಾನವಾಗಿ ಆಕೃತಿಯನ್ನು ಬಿಳಿ ವರ್ಣವಿದ್ದು, ದೇವಸ್ಥಾನಕ್ಕೆ ಮೆಟ್ಟಿಲುಗಳು ಹತ್ತಿ ಜನರನ್ನು ಕೆಂಪು, ಹಳದಿ, ನೀಲಿ, ವರ್ಣದಿಂದ ರಚಿಸಲಾಗಿದೆ. ಅಕ್ಕಪಕ್ಕದಲ್ಲಿ ನಿಸರ್ಗ ಕೂಡಿದ ಗಿಡಮರಗಳು ಹಳದಿ, ಕೆಂಪು, ಹಸಿರು, ವರ್ಣಗಳಿಂದ ರಚಿಸಿದ್ದಾರೆ. ಹಿನ್ನಲೆಯಲ್ಲಿ ದೂರದ ಗುಡ್ಡ ಗಿಡ ಮರಗಳು, ಮತ್ತು ಆಕಾಶವನ್ನು ನೀಲಿ, ಬಿಳಿ, ಹಸಿರು ವರ್ಣಮಿಶ್ರಿತವಿದೆ. ದೂರ ಮತ್ತು ಸಮೀಪ ಯಥಾದರ್ಶನದ ಪರಿಕಲ್ಪನೆ ನೈಜವಾಗಿ ಸುಂದರವಾಗಿ ಚಿತ್ರಿಸಿದ್ದಾರೆ.

೧೪. ದೇವಸ್ಥಾನ ಲಕ್ಕುಂಡಿ

ಈ ಕಲಾಕೃತಿಯಲ್ಲಿ ಐತಿಹಾಸಿಕ ಸ್ಥಳವಾದ ಲಕ್ಕುಂಡಿಯ ದೇವಾಸ್ಥಾನವನ್ನು ಬಿಳಿ, ವರ್ಣ ಮಿಶ್ರಿತ ಜಲವರ್ಣ ಮಧ್ಯದಲ್ಲಿ ಚಿತ್ರಿಸಲಾಗಿದೆ. ದೇವಸ್ಥಾನದ ಸುತ್ತಲೂ ವಾಸ್ತು ಶಿಲ್ಪ, ಮೂರ್ತಿಶಿಲ್ಪ ಮತ್ತು ಅಲಂಕೃತ ನಕ್ಷೆಯು ಇದ್ದು ನೀಲಿ, ಕಪ್ಪು, ಮತ್ತು ಬಿಳಿ ಮಿಶ್ರಿತ ವರ್ಣದಿಂದ ಉಬ್ಬು, ತಗ್ಗನ್ನು ತೋರಿಸಿದ್ದಾರೆ. ಎಡಭಾಗದಲ್ಲಿ ದ್ವಾರ ಬಾಗಿಲಿದೆ. ಬಲಭಾಗದಲ್ಲಿ ಮತ್ತೊಂದು ಮಹತ್ವವಿದೆ.

ಹಿನ್ನಲೆಯಲ್ಲಿ ದೂರವಿರು ಗಿಡ ಮರಗಳನ್ನು ಯಥಾದರ್ಶನ ಪರಿಕಲ್ಪನೆ ಮೂಡಿ ಬಂದಿದೆ. ದೇವಸ್ಥಾನದ ಮುಂದೆ ದರ್ಶನಕ್ಕೆ ಬರುವರು ಮತ್ತು ಹೋಗುವವರು, ವೀಕ್ಷಣೆ ಮಾಡುವವರು ಚಿತ್ರಿಸಿದ್ದಾರೆ. ಈ ಕಲಾಕೃತಿ ತಮ್ಮದೇ ಆದ ವೈಯಕ್ತಿಕ ಶೈಲಿಯಿಂದ ಆಕರ್ಷಕವಾಗಿ ಸುಂದರವಾಗಿ ಮೂಡಿ ಬಂದಿದೆ.

೧೫. ವೀರನಾರಾಯಣ ದೇವಸ್ಥಾನ

ಈ ಕಲಾಕೃತಿಯನ್ನು ಬಿಳಿ ವರ್ಣ ಮಿಶ್ರಿತ ಜಲವರ್ಣ ಮಾಧ್ಯಮದಲ್ಲಿ ಪೇಪರಿನ ಮೇಲೆ ಚಿತ್ರಿಸಲಾಗಿದೆ. ಪ್ರಧಾನ ಆಕೃತಿಯು ಬಿಳಿ ವರ್ಣದಿಂದ ರಚಿಸಲಾಗಿದೆ. ಇದರೂ ಉಬ್ಬು ಶಿಲ್ಪ ಅಲಂಕೃತ ನಕ್ಷೆಯನ್ನು ಬಿಳಿ, ನೀಲಿ, ಮತ್ತು ಕಪ್ಪು ವರ್ಣಗಳಿಂದ ರಚಿಸಿದ್ದಾರೆ. ಎಡಭಾಗದಲ್ಲಿ ಹೂವಿನ ಸಣ್ಣ ಗಿಡಗಳಿದ್ದು ಕೇಸರಿ, ಕೆಂಪು, ಹಳದಿ ಮಿಶ್ರಿತ ವರ್ಣಗಳಿಂದ ರಚಿಸಲಾಗಿದೆ. ಹಿನ್ನಲೆಯಲ್ಲಿ ದೂರವಿರುವ ಗುಡ್ಡ ಹಸಿರು ವರ್ಣ ನಿಸರ್ಗ ತುಂಬಿದೆ, ದೇವಸ್ಥಾನದ ಹಿಂಭಾಗದಲ್ಲಿ ಕೆಂಪು, ಕೇಸರಿ, ವರ್ಣಗಳಿಂದ ರಚಿಸಿದ ಮರಗಳಿವೆ, ವರ್ಣಗಳು ಸಂಯೋಜನೆಯಲ್ಲಿ ಯಥಾದರ್ಶನದ ಪರಿಕಲ್ಪನೆ ಮೂಡುವಂತೆ ಚಿತ್ರಿಸಿದ್ದಾರೆ.

೧೬. ನಿಸರ್ಗ ಚಿತ್ರ

ಈ ಕಲಾಕೃತಿಯನ್ನು ಜಲವರ್ಣ ಮಧ್ಯದಲ್ಲಿ ಪೇಪರಿನ ಮೇಲೆ ಬಿಳಿ ವರ್ಣಮಿಶ್ರಿತ ಒಪ್ಪೆಕ್ಯೋ ಪದ್ಧತಿಯಲ್ಲಿ ಚಿತ್ರಿಸಲಾಗಿದೆ. ಗಿಡಗಳು, ಮರಗಳು, ಮಧ್ಯದಲ್ಲಿ ಸಣ್ಣ ದೇವಸ್ಥಾನವಿದ್ದು ಹಳದಿ, ಕಂದು, ಬಿಳಿ, ಮತ್ತು ನೀಲಿ ವರ್ಣಗಳಿಂದ ಚಿತ್ರಿಸಿದ್ದಾರೆ. ಹಿನ್ನಲೆಯಲ್ಲಿ ಹಸಿರು ನಿಸರ್ಗ ತುಂಬಿದ ಗುಡ್ಡಗಳು ಸಮೀಪದಲ್ಲಿರುವ ಹೂವಿನ ಗಿಡಗಳು ನೈಜವಾಗಿ ಚಿತ್ರಿಸಿದ್ದಾರೆ. ಮುಂದೆ ಜನರಿದ್ದು ಯಥಾದರ್ಶನ ಪರಿಕಲ್ಪನೆ ಮೂಡಿ ಬಂದಿವೆ.

೧೭. ನಿಸರ್ಗ ಚಿತ್ರ

ಈ ಕಲಾಕೃತಿಯಲ್ಲಿ ಮಧ್ಯದಲ್ಲಿರುವ ಮಂಟಪ ನೀಲಿ, ಕಂದು, ಕಪ್ಪು, ಬಿಳಿ ವರ್ಣಗಳಿಂದ ಅಲಂಕೃತ ನಕ್ಷೆಯನ್ನು ಚಿತ್ರಿಸಲಾಗಿದೆ. ಎಡಭಾಗದಲ್ಲಿ ಬಂಡೆ ಕಲ್ಲುಗಳು ಅದರ ಹಿಂದೆ ಒಂದು ಐತಿಹಾಸಿಕ ದೇವಸ್ಥಾನವಿದೆ. ಬಲಭಾಗದಲ್ಲಿ ಮನೆಯಲ್ಲಿ ತಂದು, ಕಪ್ಪು, ಮತ್ತು ಬಿಳಿ ಮಿಶ್ರಿತ ವರ್ಣದಿಂದ ಚಿತ್ರಿಸಿದ್ದಾರೆ. ದೂರದಲ್ಲಿರು ಹಸಿರು ನಿಸರ್ಗ, ಗುಡ್ಡಗಳು, ನೀಲಿ ಮತ್ತು ಬಿಳಿ ಮಿಶ್ರಿತ ಆಕಾಶವನ್ನು ನೈಜವಾಗಿ ಸುಂದರವಾಗಿ ಯಥಾದರ್ಶನದ ಪರಿಕಲ್ಪನೆ ಮೂಡಿ ಬಂದಿದೆ.

೧೮. ನಿಸರ್ಗ ಚಿತ್ರ

ಈ ಕಲಾಕೃತಿಯಲ್ಲಿ ಊರಿನ ಹೊರಭಾಗದಲ್ಲಿರುವ ದ್ವಾರಭಾಗಿಲು ಊರೊಳಗೆ ಹೋಗುತ್ತಿರುವ ಜನರು ಊರಲ್ಲಿರುವ ಮನೆಗಳು ಗಿಡ, ಮರಗಳು, ಹಳದಿ, ಕೇಸರಿ, ಹಸಿರು, ಬಿಳಿ, ಮತ್ತು ನೀಲಿ ಕಪ್ಪು ವರ್ಣಗಳಿಂದ ರಚಿಸಿದ್ದಾರೆ. ಹಿನ್ನಲೆಯಲ್ಲಿರುವ ಆಕಾಶ ನೀಲಿ ಮತ್ತು ಬಿಳಿ ಹಳದಿ ಮಿಶ್ರಿತ ವರ್ಣಗಳಲ್ಲಿಂದ ಚಿತ್ರಿಸಿದ್ದಾರೆ. ಯಥಾದರ್ಶನದ ಪರಿಕಲ್ಪನೆ ಸುಂದರವಾಗಿ ಮೂಡಿಬಂದಿದೆ.

೧೯. ತ್ರಿಕೂಟೇಶ್ವರ ದೇವಸ್ಥಾನ

ಈ ಕಲಾಕೃತಿಯಲ್ಲಿ ದೇವಸ್ಥಾನವು ಐತಿಹಾಸಿಕ ಹಿನ್ನಲೆಯಾಗಿದ್ದ ಗದುಗಿನಲ್ಲಿದೆ. ದೇವಸ್ಥಾನದ ಸುತ್ತಲೂ ಮೂರ್ತಿಶಿಲ್ಪ, ವಾಸ್ತುಶಿಲ್ಪ, ಅಲಂಕೃತ ನಕ್ಷೆಯನ್ನು ಬಿಳಿ, ನೀಲಿ, ಕೆಂಪು, ಕಪ್ಪು ವರ್ಣಗಳಿಂದ ಉಬ್ಬು ತಗ್ಗುಗಳನ್ನು ರಚಿಸಿದ್ದಾರೆ. ಎಡಭಾಗದಲ್ಲಿ ದ್ವಾರ ಭಾಗಲಿದೆ ಮುಂದೆ ದೇವಸ್ಥಾನ ವೀಕ್ಷಣೆಗೆ ಬಂದ ಜನರು, ಆಟವಾಡುತ್ತಿರುವ ಹುಡುಗರು ಇರುವುದನ್ನು ಕಾಣುತ್ತವೆ. ಹಿನ್ನಲೆಯಲ್ಲಿ ಒಂದು ಮಂಟಪ ಹಸಿರು ನಿಸರ್ಗದಿಂದ ಕೂಡಿದೆ. ನೈಜವಾಗಿ ಸುಂದರವಾಗಿ, ಯಥಾದರ್ಶನದ ಪರಿಕಲ್ಪನೆ ಮೂಡಿಬಂದಿದೆ.

ಪ್ರತಿಮೆಗಳು

೧. ಈಶ್ವರನ ಪ್ರತಿಮೆ

ಈ ಈಶ್ವರನ ಪ್ರತಿಮೆಯನ್ನು ಪ್ಲಾಸ್ಟರ್ ಮಾಧ್ಯಮದಲ್ಲಿ ರಚಿಸಿದ್ದಾರೆ. ಮುಖದಲ್ಲಿ ನೀಲಿ ವರ್ಣವಿದ್ದು ಹಣೆಯಲ್ಲಿ ವಿಭೂತಿ ಮತ್ತು ಮೂರನೆ ಕಣ್ಣನ್ನು ತೋರಿಸಿದ್ದಾರೆ. ಕಣ್ಣುಗಳು ಮುಚ್ಚಿವೆ. ಮೂಗು ಭಾಯಿ ನೈಜವಾಗಿ ಮೂಡಿದ್ದಾರೆ. ಕೊರಳಲ್ಲಿ ಹಾವು ಸುತ್ತಿಕೊಂಡಿರುವುದು, ತಲೆಯ ಮೇಲೆ ಅರ್ಧಚಂದ್ರನ ಮತ್ತು ಗಂಗಾ ಮಾತೆಯ ಮುಖವಿದೆ ವರ್ಣ ಸಂಯೋಜನೆಯಲ್ಲಿ ಮೂರ್ತಿ ರಚಿಸಿದ್ದಾರೆ.


೨. ಬುದ್ಧನ ಪ್ರತಿಮೆ

ಬುದ್ಧನ ಮುಖದಲ್ಲಿ ಸಮಾಧಾನವಾಗಿ ಭಕ್ತಿಭಾವನೆ ಮೂಡುವಂತಿದೆ. ಈ ಪ್ರತಿಮೆಯನ್ನು ಪ್ಲಾಸ್ಟರ್ ಮಧ್ಯದಲ್ಲಿ ಬಳಸಿಕೊಂಡು ರಚಿಸಲಾಗಿದೆ. ತಲೆಯ ಕೂದಲುಗಳು ವೃತ್ತಾಕಾರದಲ್ಲಿರುವಂತೆ ರಚಿಸಿದ್ದಾರೆ. ಮೂಗು ಭಾಯಿ ಕಣ್ಣು, ಕಿವಿ, ನೈಜವಾಗಿ ಸುಂದರವಾಗಿ ರಚಿಸಲಾಗಿದೆ.

ಪುಸ್ತಕ ಮುಖಪುಟ

೧೯೭೫ರಲ್ಲಿ ಆರ್.ಎಚ್.ಕಿವಿಯಾರುರವರು ಗದಗ ಬೇಟಗೇರಿ ಹಿನ್ನಲೆ. ಐತಿಹಾಸಿಕ ಹಿನ್ನಲೆ ಸ್ಥಳಗಳು ಅಂಗಡಿಗಳು ಕಲಾವಿದರು, ಕಲಾಸಾಹಿತಿಕಾರರು ಸಂಗೀತಕಾರರು ಗಣ್ಯ ವ್ಯಕ್ತಿಗಳ ಹಿನ್ನಲೆಯನ್ನು ಸಂಗ್ರಹಣೆ ಮೂಡಿ ನಮ್ಮ ಗದಗ ಬೇಟಗೇರಿ ಡೈರೆಕ್ಟರಿ ಗ್ರಂಥವನ್ನು ಬಿಡುಗಡೆ ಮಾಡಿದರು. ಇದರ ಮುಖಪುಟವು ಕಲಾಚಾರ್ಯ ಸಿ.ಎನ್.ಪಾಟೀಲರು ರಚನೆ ಮಾಡಿದ್ದಾರೆ. ಇದರಲ್ಲಿ ಗದುಗಿನ ಐತಿಹಾಸಿಕ ಸ್ಥಳಗಳು, ಚರ್ಚ್, ವೀರಭದ್ರೇಶ್ವರ ದೇವಸ್ಥಾನ ಗಾಂಧಿಸರ್ಕಲ್, ವೀರನಾರಾಯಣ ದೇವಸ್ಥಾನ ಶ್ರೀ ಜಗದ್ಗುರು ತೋಂಟದಾರ್ಯ ಮಠ, ಜಮ್ಮಾ ಮಸೀದಿ, ಲಕ್ಕುಂಡಿ ದೇವಸ್ಥಾನ ರಾಚೋಟೇಶ್ವರ ದೇವಸ್ಥಾನ ಮುಖಪುಟದಲ್ಲಿ ಕೆಂಪು ವರ್ಣದಿಂದ ರೇಖಾ ವಿನ್ಯಾಸದಲ್ಲಿ ರಚಿಸಿದ್ದಾರೆ. ಹಿನ್ನಲೆಯಲ್ಲಿ ಗದಗ ಜಿಲ್ಲೆಯ ನಕ್ಷೆ ಹಳದಿ ವರ್ಣವಿದ್ದು ಉಳಿದ ಭಾಗ ಹಸಿರು ವರ್ಣವಿದೆ. ನೋಡುಗರಿಗೆ ಐತಿಹಾಸಿಕ ಹಿನ್ನಲೆ ಸಂಗ್ರಹಗೊಂಡ ಗ್ರಂಥವೆನ್ನಿಸುತ್ತದೆ.

ಸಂಯೋಜನಾ ಚಿತ್ರಗಳು




೧. ಶ್ರೀ ಬಸವೇಶ್ವರರು



೨. ಶ್ರೀ ಯಡೆಯೂರ ಸಿದ್ದಲಿಂಗೇಶ್ವರರು




೩. ಶ್ರೀ ಬಸವೇಶ್ವರರು



೪. ಶ್ರೀ ಪೂಜ್ಯರು



೫. ಸಾರು ಹೇಳುವವರು



೬. ಅಥಣಿ ಶಿವಯೋಗಿಗಳು



೭. ಶ್ರೀ ಹಾನಗಲ್ ಕುಮಾರಸ್ವಾಮಿಗಳು



೮. ಶ್ರೀ ಬಸವೇಶ್ವರರು



೯. ಶ್ರೀ ಚಂದ್ರಶೇಖರ ಶರಣರು



೧೦. ವಿಶ್ರಮಿಸುತ್ತಿರುವ ರಾಧಾ



೧೧. ಶ್ರೀ ತೋಡಿ ರಾಗ



೧೨. ಸುಗ್ಗಿಯ ಕಾಲ

ನಿಸರ್ಗ ಚಿತ್ರಗಳು



೧. ಶಿರಹಟ್ಟಿಯ ಫಕೀರೇಶ್ವರಸ್ವಾಮಿ ಗದ್ದುಗೆ



೨. ಪಕೀರೇಶ್ವರಸ್ವಾಮಿ ಗದ್ದುಗೆ ಇನ್ನೊಂದು ನೋಟ



೩. ಅಜಂತಾ ಪರಿಸರದ ಭೂದೃಶ್ಯ



೪. ದೇವಾಲಯ




೫. ನಿಸರ್ಗ ಚಿತ್ರ



೬. ಕಾರವಾರ ನಿಸರ್ಗ ಚಿತ್ರ




೭. ಗೋಲಗುಮ್ಮಜ ಬಿಜಾಪೂರ



೮. ನಿಸರ್ಗ ದೃಶ್ಯ




೯. ನಿಸರ್ಗ ದೃಶ್ಯ



೧೦. ನಿಸರ್ಗ ದೃಶ್ಯ



೧೧. ಬಿಜಾಪೂರ ಗೋಲಗುಮ್ಮಜ



೧೨. ಕಲ್ಲಿನ ರಥ ಹಂಪಿ



೧೩. ದೇವಸ್ಥಾನ



೧೪. ದೇವಸ್ಥಾನ ಲಕ್ಕುಂಡಿ



೧೫. ವೀರನಾರಾಯಣ ದೇವಸ್ಥಾನ



೧೬. ನಿಸರ್ಗ ಚಿತ್ರ



೧೭. ನಿಸರ್ಗ ಚಿತ್ರ



೧೮. ನಿಸರ್ಗ ಚಿತ್ರ




೧೯. ತ್ರಿಕೂಟೇಶ್ವರ ದೇವಸ್ಥಾನ



ಈಶ್ವರನ ಪ್ರತಿಮೆ



ಬುದ್ದನ ಪ್ರತಿಮೆ



ಪುಸ್ತಕದ ಮುಖಪುಟ ಚಿತ್ರಕಲೆ

ಅಧ್ಯಾಯ - ೬

ಸಿ.ಎನ್. ಪಾಟೀಲರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರಗಾರಿಕೆ, ಶೈಲಿ

ಅಧ್ಯಾಯ - ೬

ಸಿ.ಎನ್. ಪಾಟೀಲರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರಗಾರಿಕೆ, ಶೈಲಿ

ಕಲಾವಿದನಿಗೆ ತನ್ನ ಸುತ್ತಮುತ್ತಲಿನ ಪರಿಸರ, ಜನಜೀವನಗಳು, ನಿಸರ್ಗ, ಪ್ರಭಾವ ಬೀರುವಂತೆ ಜನ ಸಾಮಾನ್ಯರಲ್ಲೂ ಪ್ರಭಾವ ಬೀರುತ್ತವೆ. ಜನ ಸಾಮಾನ್ಯರಿಗೆ ನಿಸರ್ಗದ ರಮ್ಯತೆ ಮುದ ನೀಡಿದರೆ ದೈನಂದಿನ ಜನಜೀವನ ವಿಚಾರಿಸುವಂತೆ ಕಲಾವಿದನನ್ನು ಆ ರಮ್ಯತೆ ವಿಚಾರಗಳನ್ನು ತನ್ನ ಸಂವೇದನಾಶೀಲತೆಯಿಂದ ಬಣ್ಣಗಳ ಮೂಲಕ ಕ್ಯಾನವಾಸ ಮೇಲೆ ಮೂಡಿಸುವುದೇ ಜನಸಾಮಾನ್ಯರಿಗೆ ಕಲಾವಿದರಿಗೆ ಇರುವ ವ್ಯತ್ಯಾಸ. ಕಲಾವಿದರಲ್ಲಿ ಪ್ರಭಾವಗೊಳಿಸುವ ಸುತ್ತಮುತ್ತಲಿನ ನಿಸರ್ಗ, ಘಟನೆಗಳು ಮಾಧ್ಯಮದ ಮೂಲಕ ಪ್ರಕಟವಾಗಿ ಕಲಾಕೃತಿ ಎನಿಸುತ್ತವೆ. ಶ್ರೀ ಸಿ.ಎನ್. ಪಾಟೀಲರು ಕಲಾಕೃತಿ ರಚನೆಯಲ್ಲಿ ತಮ್ಮದೇ ಆದ ತಂತ್ರಗಾರಿಕೆಯನ್ನು ತಂದುಕೊಂಡಿದ್ದಾರೆ. ಅವರದು ಶಿರಹಟ್ಟಿ ತಾಲೂಕಿನ ಬಟ್ಟೂರು ಹಳ್ಳಿಯ ಪರಿಸರದಲ್ಲಿ ಬೆಳೆದುಬಂದ ಬಾಲ್ಯದ ನಂತರ ಗದಗ ಪಟ್ಟಣದ ಪರಿಸರ, ಗಣ್ಯ ವ್ಯಕ್ತಿಗಳ ಮಠಾಧೀಶರ ಸಾಮೀಪ್ಯವು ಲಭಿಸಿರುವುದರಿಂದ ಹಳ್ಳಿಯ ನಿಸರ್ಗ ಚಿತ್ರಗಳು. ಪಟ್ಟಣದಲ್ಲಿ ವ್ಯಕ್ತಿಗಳ ಪೂರ್ಣಭಾವ ಚಿತ್ರಗಳು, ಮಠಾಧೀಶರ, ಶರಣರ ಚಿತ್ರಗಳು ಇವರ ಕುಂಚದಿಂದ ಮೂಡಿರುತ್ತವೆ, ಕಲಾವಿದರು ತೈಲವರ್ಣ, ಜಲವರ್ಣ, ನಿಸರ್ಗ ಚಿತ್ರಣಗಳಲ್ಲದೇ ಕೆಲವು ಮಿಶ್ರ ಮಾಧ್ಯಮದಲ್ಲೂ ಸಾಕಷ್ಟು ಚಿತ್ರಗಳನ್ನು ಚಿತ್ರಿಸಿದ್ದಾರೆ. ಅವರ ಕಲಾ ಅಭ್ಯಾಸವು ಜೆ.ಜೆ. ಕಲಾಶಾಖೆಯ ಬ್ರಿಟಿಷ್ ಅಕಾಡೆಮಿಕ್ ಪದ್ಧತಿಯಲ್ಲಿ ಆಗಿರುವುದರಿಂದ ಅಲ್ಲಿನ ಪಾಶ್ಚಾತ್ಯ ಕಲಾವಿದರ ಪ್ರಭಾವವು ಆಗಿರುವುದು ಕಂಡುಬರುತ್ತದೆ. ಪಾಶ್ಚಾತ್ಯ ಪ್ರಭಾವ ಇದ್ದರೂ ನಿಸರ್ಗ ಚಿತ್ರಣ, ವ್ಯಕ್ತಿ, ಭಾವಚಿತ್ರಗಳನ್ನು ಕಲಾವಿದರು ಭಾರತೀಯತೆಯ ಸೊಗಡನ್ನು ಕಲಾಕೃತಿಗಳಲ್ಲಿ ಮೂಡಿಸಿರುವುದು ವಿಶೇಷತೆಯನ್ನು ತಂದುಕೊಟ್ಟಿದೆ.

ಪ್ರಭಾವ

ಕಲಾವಿದನಾದವನು ತನ್ನ ಸಮಕಾಲೀನ ಕಲಾವಿದರಾಗಲಿ ಅಥವಾ ಕಲಿಕಾ ಹಂತದಲ್ಲಿನ ಗುರು ಕಲಾವಿದರಾಗಲಿ ಒಂದಲ್ಲಾ ಒಂದು ರೀತಿಯಲ್ಲಿ ಇಷ್ಟಪಟ್ಟು ಅವರ ಕಲಾಕೃತಿ ರಚನೆಗಳು ಒಬ್ಬರಿಗಿಂತ ಒಬ್ಬರಲ್ಲಿ ಪ್ರಭಾವ ಬೀರುಸುವುದು. ಕಲಾಕ್ಷೇತ್ರದಲ್ಲಿ ನಡೆದು ಬಂದ ರೀತಿಯಾದರೂ, ನಂತರ ತಮ್ಮದೇ ಆದ ಶೈಲಿಯಿಂದ ಪ್ರಸಿದ್ಧಿ ಪಡೆದಿರುವವರಾಗಿರುತ್ತಾರೆ. ಇದಕ್ಕೆ ಶ್ರೀ ಸಿ.ಎನ್. ಪಾಟೀಲರು ಹೊರತಾಗಿಲ್ಲ. ಪ್ರಭಾವದಿಂದ ಒಂದು ವಿಶೇಷತೆ ಹೊರಹೊಮ್ಮುವ ಪ್ರಕ್ರಿಯೆ ಇದೆ. ಇದರಿಂದ ಕಲಾವಿದನು ಬೆಳೆಯುತ್ತಾನೆ. ಹೊರಹೊಮ್ಮಿದ ಪರಿಣಾಮವು ಬೆಳೆಯುತ್ತದೆ. ಹಾಗೂ ಪ್ರಭಾವವು ಸಂವೇದನಾಶೀಲತೆಯನ್ನು ಸೂಕ್ಷ್ಮ ಮನೋಸ್ಥಿತಿಯವರನ್ನು ಅಪ್ಪಿಕೊಳ್ಳುತ್ತದೆ. ಇದರಿಂದ ಕಲಾವಿದನು ಕಲಾಕೃತಿ ರೂಪದಲ್ಲಿ ಸಮಾಜಕ್ಕೆ ಕೊಡುಗೆ ಕೊಡುತ್ತಾನೆ.

ಪ್ರಭಾವವು ಕಲಾವಿದರನ್ನು ಆದಾಗ ಆ ತುಡಿತಗಳು ಕಲಾಕೃತಿಗಳಲ್ಲಿ ಒಡಮೂಡುತ್ತದೆ. ಶ್ರೀ ಸಿ.ಎನ್. ಪಾಟೀಲರ ಕೃತಿಗಳನ್ನು ಅವಲೋಕಿಸಿದಾಗ ಅವರ ಕೃತಿಗಳಲ್ಲಿ ಸಹಜವಾಗಿಯೇ ತಮ್ಮ ಸಮಕಾಲೀನ ಕಲಾವಿದರಿಂದ, ಕಲಾ ಗುರುಗಳಿಂದ ಶೈಲಿಯ ಯೂರೋಪಿಯನ್ ರೋಮಾಂಟಿಕ್ (ರಮ್ಯಶೈಲಿ) ಪ್ರಭಾವಗಳು ತಮ್ಮ ಹಳ್ಳಿಯ ಸುಂದರ ನಿಸರ್ಗದ ವಾತವರಣಗಳು, ಗದಗ ಶಹರಕ್ಕೆ ಬಂದಾಗಿನಿಂದ ಅವರು ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ಆ ಸಂದರ್ಭದಲ್ಲಿ ಗಣ್ಯವ್ಯಕ್ತಿಗಳ ಪರಿಚಯವಾಗಿ ನೂರಾರು ವ್ಯಕ್ತಿ ಚಿತ್ರಗಳನ್ನು ಮಾಡಲು ಪ್ರರೇಪಿಸಿದ್ದು ಈ ಎಲ್ಲಾ ಪ್ರಭಾವಗಳಿಂದ ಎನ್ನುವುದು ಸರ್ವವಿದಿತ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಶ್ರೀ ಅಂದಾನಪ್ಪ ದೊಡ್ಡಮೇಟಿಯವರ ಸಂಘದಿಂದ ನಾಡಿನ ಪ್ರೀತಿಯಿಂದ ಪ್ರಭಾವಕ್ಕೆ ಒಳಗಾಗಿ ಶ್ರೀ ಭುವನೇಶ್ವರಿ ಕೃತಿ ರಚಿಸಿದರು. ಪ್ರಾರಂಭದ ಕೃತಿಗಳು ಚಿಕ್ಕ ಗಾತ್ರಗಳಿಂದ್ದ ಕೂಡಿದ್ದು ನಂತರದ ಕಲಾಕೃತಿಗಳು ದೊಡ್ಡ ಅಳತೆಯಲ್ಲಿ ರಚಿಸಿದ್ದಾರೆ. ಪಾಟೀಲರು ತಮ್ಮ ಕಲಾ ಶೈಲಿಯಿಂದ ನೋಡುಗರನ್ನು ಆಕರ್ಷಿಸುತ್ತಾರೆ. ಕಲಾಕೃತಿಗಳೆಲ್ಲವನ್ನು ನೋಡಿದಾಗ ಸಿ.ಎನ್. ಪಾಟೀಲರ ಶೈಲಿಯು ಸ್ವಂತಿಕೆಯಿಂದ ಕೂಡಿದ್ದರಿಂದ ಅವುಗಳೆಲ್ಲ ಅವರ ಕೃತಿಗಳೇ ಎಂದು ನಿಖರವಾಗಿ ಹೇಳುವಂತಿರುತ್ತವೆ.

ಪ್ರೇರಣೆ

ಪ್ರಸ್ತುತ ಭಾಗದಲ್ಲಿ ಶ್ರೀ ಸಿ.ಎನ್. ಪಾಟೀಲರು ಪಡೆದಿರಬಹುದಾದ ಪ್ರೇರಣೆ ಜೀವಂತ ಕಲಾವಿದನೊಬ್ಬನು ನಿರಂತರ ಕ್ರಿಯಾಶೀಲವಾಗಿ ಸ್ಪಂದನಪೂರ್ಣ ಮನಸುಳ್ಳ ಕಲಾವಿದನು ಪಡೆಯುವ ಪ್ರೇರಣೆಯಾಗಿದೆ. ಸಿ.ಎನ್. ಪಾಟೀಲರ ಕಲಾಬದುಕಿನ ಪ್ರತಿಯೊಂದು ಹಂತದಲ್ಲಿಯೂ ವಿವಿಧ ಮೂಲಗಳಿಂದ ಈ ಪ್ರೇರಣೆಯು ಅವರಿಗೆ ದೊರೆತಿರುವುದು ಅವರ ಕಲಾಬದುಕನ್ನು ಅಧ್ಯಯನ ಮಾಡಿದಾಗ ನಮಗೆ ತಿಳಿದುಬರುತ್ತದೆ. ಶ್ರೀಯುತರು ತಮ್ಮ ಬಾಲ್ಯದಲ್ಲಿ ಬಟ್ಟೂರಿನ ಹೊಲಗದ್ದೆಗಳು,

[illegible]

ಹಸಿರಿನಿಂದ ಕಂಗೊಳಿಸುವ ನಿಸರ್ಗ ಹಾಗೂ ಪಕ್ಕದಲ್ಲಿ ಹಳ್ಳಿಯಲ್ಲಿನ ಒಂದು ಹಳ್ಳ ಆದರ ಹಿನ್ನಲೆಯಲ್ಲಿ ಹಸಿರಿನಿಂದ ಕೂಡಿದ ಹೊಲಗಳು, ಮೇಲೆ ಸ್ವಚ್ಛವಾದ ಶುಭ್ರ ಮೋಡಗಳು ಹೀಗೆ ವರ್ಣಮಯ ದೃಶ್ಯಗಳಿಂದ ಪ್ರಭಾವಗೊಂಡಿದ್ದರಿಂದ ಇಷ್ಟೊಂದು ಪ್ರಭುದ್ಧ ಕಲಾವಿದರೆನಿಸಿಕೊಳ್ಳಲು ಸಾಧ್ಯವಾಯಿತು. ಶ್ರೀ ಪಾಟೀಲರು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ಆಗಿನ ಶಿಕ್ಷಣ ಸಚಿವರಾದ ಶ್ರೀ ಸರ್. ಸಿದ್ಧಪ್ಪ ಕಂಬಳಿಯವರ ಭಾವಚಿತ್ರವನ್ನು ರಚಿಸಿದ್ದರು. ಇದರಿಂದ ಅವರಿಗೆ ಶಭಾಷ್‌ಗಿರಿ ದೊರಕಿತ್ತು. ಆ ಶಭಾಷ್‌ಗಿರಿಯು ಅವರಿಗೆ ಒಂದು ಪ್ರೇರಣೆಯ ರೂಪದಲ್ಲಿ ಬಂದು ಸಾಕಷ್ಟು ಕೆಲಸಗಳನ್ನು ಮಾಡಲು ತೊಡಗಿದ್ದರು. ಶ್ರೀಯುತರು ಪಠ್ಯಪುಸ್ತಕಗಳಲ್ಲಿನ ಚಿತ್ರಗಳನ್ನು ನೋಡಿ ಚಿತ್ರಿಸುತ್ತಿದ್ದರು. ಇದನ್ನು ಅವರ ವರ್ಗದ ಗುರುಗಳು ನೋಡಿ ತುಂಬಾ ಪ್ರೋತ್ಸಾಹ ನೀಡಿದ್ದರಿಂದ ನಿರಂತರ ಚಿತ್ರ ರಚಿಸಲು ಪ್ರೇರಣೆಯಾಯಿತು ಎಂದು ನೆನಪಿಸಿಕೊಳ್ಳುತ್ತಾರೆ.

ಸರ್ ಜೆ.ಜೆ. ಕಲಾಶಾಲೆಯಲ್ಲಿ ತಮ್ಮ ಗುರುಗಳಾದ ಶ್ರೀ ಜಗನ್ನಾತ ಅಹಿವಾಸಿ ಮತ್ತು ಶ್ರೀ ಎ.ಎ.ಬೋಸ್ಲೆಯವರ ಚಿತ್ರರಚನಾ ವೈಖರಿಯಿಂದ ಪ್ರೇರಣೆಗೊಂಡು ತಮ್ಮ ಕಲಾಭ್ಯಾಸವನ್ನು ಇನ್ನಷ್ಟು ಚುರುಕುಗೊಳಿಸಿದ್ದರು. ಮುಂಬೈ ಕಲಾಶಾಲೆಯಲ್ಲಿ ನೋಡಿದ ಕಲಾಕೃತಿಗಳು, ಅಲ್ಲಿ ನಡೆಯುತ್ತಿದ್ದ ಕಲಾ ಚಟುವಟಿಕೆಗಳು, ವಿಭಿನ್ನ ರೀತಿಯ ಪ್ರಯೋಗಗಳು ಇವರ ಮನಸ್ಸಿಗೆ ಪ್ರೇರಣೆ ನೀಡಿದ್ದರಿಂದಲೇ ಶ್ರೀ ಸಿ. ಎನ್ ಪಾಟೀಲರು ವ್ಯಾಸಂಗ ಮುಗಿಸಿ ಪೌಢಶಾಲಾ ಶಿಕ್ಷಕರಾದರೂ ಸತತ ಚಿತ್ರ ರಚನೆಯಲ್ಲಿ ತೊಡಗಿಸಿಕೊಂಡಿರುವುದನ್ನು ನೋಡಿದರೆ ಮುಂಬೈನ ಕಲಾವಾತಾವರಣದಿಂದ ಎಷ್ಟೊಂದು ಪ್ರೇರಣೆಗೆ ಒಳಗಾಗಿದ್ದರು ಎಂಬುದು ಅವರ ಕಲಾಕೃತಿಗಳನ್ನು ವಿಕ್ಷೀಸಿದಾಗ ತಿಳಿದುಬರುತ್ತದೆ.

ಭಾರತೀಯ ಪುನರುಜ್ಜೀವನ ಕಾಲದ ಕಲಾವಿದರ ಕೃತಿಗಳು ಬಂಗಾರ ವರ್ಣ ಲೇಪನ ಮತ್ತು ವಾಶ್‌ಮೆಥೆಡ್‌ನಿಂದ ರಚಿತವಾಗಿವೆ. ಇದರಿಂದ ಪ್ರೇರಣೆಗೊಂಡ ಶ್ರೀಯುತ ಪಾಟೀಲರು ಇಂಥ ಕೃತಿಗಳನ್ನು ಸಾಕಷ್ಟು ರಚಿಸಿದ್ದಾರೆ. ವಿಶ್ರಮಿಸುತ್ತಿರುವ 'ರಾಧ' ಎಂಬ ಕೃತಿಯನ್ನು ಇದೇ ಪ್ರೇರಣೆಯಿಂದ ರಚಿಸಿದ್ದಾರೆ. ಹೀಗೆ ಅವರು ಬಳಸುತ್ತಿದ್ದ ಹಾಗೂ ಆಯ್ದುಕೊಳ್ಳುತ್ತಿದ್ದ ವಿಷಯಗಳು ಸಹ ಸಿ.ಎನ್. ಪಾಟೀಲರನ್ನು ಬೆಳೆಯುವಂತೆ ಪ್ರೇರೆಪಿಸಿದ ಸಂಗತಿಗಳೆನ್ನಬಹುದು. ಇದೇ ಪ್ರೇರಣಾ ಬೆಳಕು ಗದುಗಿಗೆ ಬಂದು ಕರ್ನಾಟಕದಾದ್ಯಂತ ಪಸರಿಸಿ ಅವರ ಕಲಾಕೃತಿಗಳನ್ನು ವೀಕ್ಷಿಸಿದಾಗ ಇನ್ನೊಬ್ಬರಿಗೆ ಇವರ ಕೃತಿಗಳು ಪ್ರೇರಣಾ ಬಲವಾಗಿ ಹೊರಹೊಮ್ಮಿವೆ ಎಂದೂ ಹೇಳಬಹುದು.

ತಂತ್ರ

ಪ್ರತಿಯೊಂದು ಕ್ಷೇತ್ರಗಳಲ್ಲಿ ಆಯಾ ವಿಷಯಕ್ಕನುಗುಣವಾಗಿ ತಂತ್ರಗಳಿದ್ದಂತೆ ಚಿತ್ರರಚನಾ ಹಂತದಲ್ಲಿಯೂ ತಂತ್ರಗಾರಿಕೆಯೂ ಇದೆ. ನೈಜ ಶೈಲಿಗಿಂತ ಇತ್ತೀಚಿನ ನವ್ಯ ಕಲಾ ಪಂಥಗಳಲ್ಲಿ ತಂತ್ರಗಾರಿಕೆಯು ಹೇರಳವಾಗಿ ಕಾಣಸಿಗುತ್ತದೆ. ಶ್ರೀ ಸಿ.ಎನ್. ಪಾಟೀಲರ ನೈಜ ಕಲಾಕೃತಿಗಳಲ್ಲಿ ಹಾಗೂ

ನಿಸರ್ಗ ಚಿತ್ರಗಳಲ್ಲಿ ವಿಶೇಷ ತಂತ್ರಗಾರಿಕೆಯೂ ಕಂಡುಬರುತ್ತದೆ. ಪ್ರತಿಯೊಬ್ಬ ಕಲಾವಿದನ ಕಲಾಕೃತಿಯೂ ಸಹ ಅವರವರ ತಂತ್ರದ ಮೂಲಕವೇ ರಚನೆಗೊಂಡಿರುತ್ತದೆ. ಕಲಾವಿದನ ಭಾವನೆಗಳು ರೂಪುಗೊಂಡು ತುಡಿತದಿಂದ ಮಾಧ್ಯಮದ ಮೂಲಕ ಹೊರಹೊಮ್ಮುವಾಗಿನ ಹಂತದಲ್ಲಿ ತಂತ್ರಗಳು ಮೂಡಿಬರುತ್ತವೆ. ಕಲಾವಿದ ಶ್ರೀ ಸಿ.ಎನ್. ಪಾಟೀಲರ ಕಲಾಕೃತಿಗಳಲ್ಲಿಯೂ ಇದೇ ರೀತಿಯಾಗಿ ಮೂಡಿ ಬಂದಿರುವುದು ಕಾಣಸಿಗುತ್ತದೆ. ತಂತ್ರಕೌಶಲ್ಯವಿಲ್ಲದೆ ಕಲಾ ಪ್ರಜ್ಞೆಯು ಕೇವಲ ಮಾನಸಿಕ ಮಟ್ಟದಲ್ಲಿಯೇ ಉಳಿಯುತ್ತದೆ. ಆದರೆ ಹೊಸ ರೂಪು ಪಡೆದು ಮೂಡಿ ಬರಲಾರದು. ಸಿ.ಎನ್. ಪಾಟೀಲರು ಯಾವುದೆ ಕಲಾಕೃತಿ ರಚನೆ ಯಾವುದೇ ಪೂರ್ವದಲ್ಲಿ ಅದರ ಪೆನ್ಸಿಲ್‌ನಿಂದ ಅಂಕನೆ ಚಿತ್ರವನ್ನು ಚಿತ್ರಿಸಿ ಅದಕ್ಕೆ ತೈಲ ವರ್ಣವನ್ನು ಲಘುವಾಗಿ ಲೇಪಿಸಿ ನಂತರ ದಪ್ಪವಾಗಿ ವರ್ಣ ಲೇಪನ ಮಾಡುತ್ತಿದ್ದರು. ಶ್ರೀಯುತರು ಹಲವಾರು ತೈಲವರ್ಣ ಕಲಾಕೃತಿಗಳಲ್ಲಿ ಸಣ್ಣ ಸಣ್ಣ ಮುತ್ತು, ಸ್ವರ್ಣವರ್ಣದ ಎಳೆಯಂತಿರುವ ಜರಿಯಿಂದ ಸೂಕ್ಷ್ಮವಾಗಿ ಕಲಾಕೃತಿಯಲ್ಲಿ ಅಳವಡಿಸಿದ್ದಾರೆ. ಉದಾಹರಣೆಗೆ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ಕೃತಿ ಹಾಗೂ ಶ್ರೀ ಬಸವೇಶ್ವರರ ಕಲಾಕೃತಿಗಳಲ್ಲಿ ಈ ತಂತ್ರ ಕಾಣಬಹುದು. ಬಸವೇಶ್ವರರ ಕೀರಿಟ, ಮೈಮೇಲಿರುವ ಬಟ್ಟೆಯ ಹಂಚಿನಲ್ಲಿ ಸೂಕ್ಷ್ಮವಾಗಿ ಅಳವಡಿಸಿ ಕೃತಿಗಳನ್ನು ಮೆರಗುಗೊಳಿಸಿದ್ದಾರೆ. ಈ ತಂತ್ರವು ನೋಡುಗರಿಗೆ ವಿಶೇಷತೆಯನ್ನು ಕೊಡುತ್ತದೆ. ಜಲವರ್ಣ ಮಾಧ್ಯಮದಲ್ಲಿ ರಚಿಸಿದ ನಿಸರ್ಗ ಚಿತ್ರಣಗಳಲ್ಲಿ ಹಚ್ಚ ಹಸಿರು ವರ್ಣಗಳಿಂದ ಕಂಗೊಳಿಸುವ ದೃಶ್ಯಗಳನ್ನು ಕಲಾವಿದರು ಪೆಂಟಾಲಿಸಂ ಶೈಲಿಯಲ್ಲಿ ಚಿತ್ರಿಸಿ ಸಣ್ಣ ಸಣ್ಣ ಚಿಕ್ಕೆಗಳಿಂದ ನಿರ್ಮಿಸಿದಂತೆ ಕಾಣುತ್ತದೆ. ಈ ತಂತ್ರಗಾರಿಕೆಯಿಂದ ಅವರ ತೈಲವರ್ಣ ಚಿತ್ರಗಳು ಹಾಗೂ ಜಲವರ್ಣ ಚಿತ್ರಗಳು ನೋಡುಗರಿಗೆ ಆನಂದವನ್ನುಂಟು ಮಾಡುತ್ತವೆ. ಕಲಾವಿದರು ಇಂಥಹ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಕೆಲವನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಲಾಗಿದೆ.

ಶ್ರೀ ಸಿ.ಎನ್. ಪಾಟೀಲರು ಸಾವಿರಾರು ಹೆಚ್ಚು ಕಲಾಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ರೇಖಾ ಚಿತ್ರಣಗಳು, ಭಾವಚಿತ್ರಗಳು, ನಿಸರ್ಗ ಚಿತ್ರಗಳು, ವ್ಯಕ್ತಿ ಚಿತ್ರಗಳು ಪ್ರಮುಖವಾಗಿವೆ.

ಶೈಲಿ

ಶ್ರೀ ಸಿ.ಎನ್. ಪಾಟೀಲ ಬೆಳೆದ ರೀತಿ ಹಲವಾರು ಕ್ಷೇತ್ರಗಳಲ್ಲಿ ಅವರಿಗಿದ್ದ ಜ್ಞಾನದಿಂದ ಅವರ ಚಿತ್ರ ರಚನೆಗಳಲ್ಲಿ ಸೂಕ್ಷ್ಮತೆ ಬಂದಿರುವುದು ಕಂಡುಬರುತ್ತದೆ. ರಾಮಾಯಣ, ಮಹಾಭಾರತ, ವೇದ, ಉಪನಿಷತ್ತುಗಳನ್ನು ಕಂಠಪಾಠ ಮಾಡಿಕೊಂಡಿದ್ದರು. ಹೀಗಾಗಿ ಭಾಷಣಗಳಲ್ಲಿ ಗಂಟೆಗಟ್ಟಲೆ ನಿರರ್ಗಳವಾಗಿ ಮಾತಾಡುತ್ತಿದ್ದರು. ಇಷ್ಟೊಂದು ಆಳವಾಗಿ ವಿಷಯಗಳನ್ನು ತಿಳಿದುಕೊಂಡಿದ್ದರಿಂದಲೇ ಅವರು ದೇವರು, ದೇವತೆಗಳ ಚಿತ್ರಗಳು ಹಾಗೂ ಪುಣ್ಯ ಪುರುಷರು, ಶರಣರು ಹೀಗೆ ಆಧ್ಯಾತ್ಮಿಕತೆಗೆ ಹತ್ತಿರವಾಗಿರುವನ ಚಿತ್ರಕಲಾ ವಿಷಯಗಳನ್ನೆ ಆಯ್ದುಕೊಂಡಿದ್ದಾರೆ. ಶ್ರೀಯುತರು ಹೆಚ್ಚಾಗಿ ತೈಲವರ್ಣ ಚಿತ್ರಗಳನ್ನು

ಮಾಡಿರುತ್ತಾರೆ ಹಾಗೂ ಆ ತೈಲವರ್ಣ ಚಿತ್ರಗಳಲ್ಲಿ ಆಕೃತಿಯ ಹಿನ್ನಲೆಗಳನ್ನು ಮುಖ್ಯ ಆಕೃತಿಗೆ ಸಂಬಂಧಪಟ್ಟ ಚಿಕ್ಕ ಚಿಕ್ಕ ಆಕೃತಿಗಳನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಅಲ್ಲದೇ ಆ ಚಿಕ್ಕ ಚಿತ್ರಗಳು ಎಷ್ಟು ದೂರವಿದ್ದರೂ ಸಾಂಪ್ರದಾಯಿಕ ಚಿತ್ರಗಳಲ್ಲಿನ ಹಿನ್ನಲೆಯಂತೆ ಸ್ಪಷ್ಟವಾಗಿರುವುದು ಕಂಡುಬರುತ್ತದೆ. ಪಾಟೀಲರು ಚಿತ್ರಿಸಿದ ಭುವನೇಶ್ವರಿ ಚಿತ್ರಗಳಲ್ಲಿ ಕನ್ನಡಾಂಬೆಯ ಸುತ್ತ ಕರ್ನಾಟಕದ ವಿವಿಧ ಪ್ರಸಿದ್ಧ ಸ್ಥಳಗಳನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಸಿ.ಎನ್. ಪಾಟೀಲರದು ನವ್ಯ ಶೈಲಿಗೆ ಹತ್ತಿರವಿದ್ದರೂ ತಮ್ಮ ಕಲಾಕೃತಿಗಳಲ್ಲಿ ಭಾರತೀಯ ಸಾಂಪ್ರದಾಯಕ ಶೈಲಿಯು ಅಲ್ಲಲ್ಲಿ ಕಂಡುಬರುತ್ತದೆ. ಅವರು ಹಲವಾರು ಕೃತಿಗಳು ರಾಗಮಾಲ, ಪೆಂಟಾಲಿಸಂ ಶೈಲಿಯಲ್ಲಿ ಮೂಡಿಬಂದಿರುವುದು ಕಂಡುಬರುತ್ತದೆ. ಅವರ ನಿಸರ್ಗ ಚಿತ್ರಗಳಲ್ಲಿ ಪೆಂಟಾಲಿಸಂ ಶೈಲಿಯು ಪ್ರಮುಖವಾಗಿ ಕಾಣಿಸುತ್ತದೆ. ಅವರು ಚಿತ್ರಿಸಿದ ನಿಸರ್ಗ ಚಿತ್ರಗಳಲ್ಲಿ ಬರುವ ದೂರದ ಗಿಡ, ಮನುಷ್ಯ, ಆಕೃತಿಗಳು ಸ್ಪಷ್ಟವಾಗಿ ಕಾಣಿಸುತ್ತದೆ. ಶ್ರೀಯುತರು ತಮ್ಮ ನೈಜ ಶೈಲಿಯಲ್ಲಿಯೂ ತಮ್ಮದೇ ಆದ ಒಂದು ಸಾಂಕೇತಿಕತೆಯನ್ನು ಮೂಡಿಸಿರುವುದು ಕಂಡುಬರುತ್ತದೆ.

ಸಿ.ಎನ್. ಪಾಟೀಲರ ಚಿತ್ರ ಕಲಾಶಿಕ್ಷಣದಿಂದ ಅವರ ಜೀವನದುದ್ದಕ್ಕೂ ರಚಿಸಿದ ಕಲಾಕೃತಿಗಳಿಂದ ಇಲ್ಲಿಯವರೆಗೆ ತಮ್ಮ- ಸುತ್ತ ಮುತ್ತಲಿನ ಪರಿಸರದಲ್ಲಿ ಮಾಧ್ಯಮವಾರು ಕಲಾಕೃತಿಗಳನ್ನು ರಚನೆಗೆ ಅವರ ಮೇಲಾದ ಪ್ರೇರಣೆಗಳು, ಪ್ರಭಾವಗಳು, ಶೈಲಿಗಳು ಉಂಟಾಗಿರುವುದನ್ನು ನೋಡಬಹುದಾಗಿದೆ. ಇವರ ಕಲಾಕೃತಿಗಳಲ್ಲಿ ಇರುವ ನೈಜತೆಯಲ್ಲೂ ತಮ್ಮದೇ ಒಂದು ಸಾಂಕೇತಿಕತೆ ಇರುವುದು ಕಾಣಸಿಗುತ್ತದೆ. ಉದಾಹರಣೆಗೆ ಚಿತ್ರಕಲಾಕೃತಿಯಲ್ಲಿ ಮುಖ್ಯ ಆಕೃತಿಗಳ ಹಿನ್ನಲೆ ದೃಶ್ಯ ಎಷ್ಟೇ ದೂರವಿದ್ದರೂ ಸ್ಪಷ್ಟತೆ ಇರುವುದು. ನಿಸರ್ಗ ಕೃತಿಗಳಲ್ಲಿ ಪೆಂಟಾಲಿಸಂ ಶೈಲಿ ಬಳಸಿರುವುದು ತಿಳಿಯುತ್ತದೆ. ಒಟ್ಟಿನಲ್ಲಿ ಇವರದೆ ಕೃತಿ ಎಂದು ಗುರುತಿಸುವ ಶೈಲಿಯ ಅಂಶ ಎಲ್ಲ ಕೃತಿಗಳಲ್ಲಿ ಕಾಣುತ್ತದೆ.

ಅಧ್ಯಾಯ - ೭

ಸಮಾರೋಪ

ಅಧ್ಯಾಯ - ೭

ಸಮಾರೋಪ

ಗದಗ ಜಿಲ್ಲೆಯ ಪರಿಸರವು ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಶಿಲ್ಪ ಹೀಗೆ ಅನೇಕ ಸೃಜನಶೀಲರಿಗೆ ನೆಲೆ ಒದಗಿಸಿಕೊಟ್ಟಿದೆ, ಅದರಂತೆ ಚಿತ್ರಕಲೆಗೆ ಪ್ರೇರಣೆ ನೀಡಿದ ನೆಲವೂ ಹೌದು. ಈ ನೆಲದಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬೆಳದವರು ಸಿ.ಎನ್. ಪಾಟೀಲರು, ಈ ನೆಲದಲ್ಲಿ ಹುಟ್ಟಿ ಈ ನೆಲದಲೇ ಅಂತ್ಯಗೊಳ್ಳುವ ಬಗೆಯನ್ನು ಇಂದು ನಾವು ನೋಡಬಹುದಾಗಿದೆ. ಸಿ.ಎನ್. ಪಾಟೀಲರು ಸೃಷ್ಟಿಸಿದ್ದು ಸಾಕಷ್ಟು, ಆದರೆ ಲಭ್ಯವಾಗುವುದು ಎಳ್ಳಷ್ಟು. ಅವರೂ ಎಷ್ಟೋ ಕಲಾಕೃತಿಗಳು ಮಣ್ಣಲ್ಲಿ ಒಂದಾಗಿದೆ. ಉಳಿದಿದ್ದು ಕೆಲವು ಮಾತ್ರ! ಅವೇ ಅಧ್ಯಯನದ ಆಹಾರ.

ಗದುಗಿನ ನೆಲದಲ್ಲಿ ಆಗಿ ಹೋದ ಕಲಾವಿದರು ಸಾವಿರಕ್ಕೂ ಹೆಚ್ಚು ಜನ; ಚಿರಸ್ಥಾಯಿಯಾದವರು ಕೆಲವು ಜನ. ಅವರಲ್ಲಿ ಸಿ.ಎನ್. ಪಾಟೀಲರು ಕೂಡಾ ಒಬ್ಬರು, ಸಿ.ಎನ್. ಪಾಟೀಲರು ಒಬ್ಬ ವ್ಯಕ್ತಿಯಾಗಿ ಗೋಚರವಾಗಲಿಲ್ಲ. ಶಕ್ತಿಯಾಗಿ, ಸ್ಫೂರ್ತಿಯಾಗಿ, ಕಲಾವಿದರಾಗಿ ಅವರ ಸೃಜನ ಶೀಲತೆಯಲ್ಲಿ ವ್ಯಕ್ತಿತ್ವವು ಬೆಳಸಿಕೊಂಡವರು. ರಾಷ್ಟ್ರದ ಶ್ರೇಷ್ಠ ಕಲಾವಿದರ ಸಾಲಿನಲ್ಲಿ ಹೆಸರು ಪಡೆದಿರುವ ಕಲಾವಿದ ಸಿ.ಎನ್. ಪಾಟೀಲರು, ಬಹುಮುಖ ವ್ಯಕ್ತಿತ್ವದ ದಣಿವರಿಯದ ಸತತ ಕ್ರಿಯಾಶೀಲರಾಗಿರುವ ಬದುಕು.

“ಹಲವಾರು ಗಣ್ಯರಿಗೆ ತಮ್ಮ ಕಲೆಯಲ್ಲಿ ಸೃಷ್ಟಿಸಿದ ಸೌಂದರ್ಯವಾದ ಚಿತ್ರಗಳನ್ನು ನೀಡುವುದು. ಈ ಮೂಲಕ ಅತ್ಯಂತ ವ್ಯವಸ್ಥಿತವಾದ ಚಿತ್ರಗಳನ್ನು ಬಿಡಿಸಿ ಅದರಲ್ಲಿ ಕಲಾವಂತಿಕೆಯ ಜೀವ ತುಂಬಿದ ಹಿರಿಯ ಕಲಾವಿದರಾದ ಸಿ.ಎನ್. ಪಾಟೀಲರು ನಾಟಕ ರಚನಾಕಾರರಾಗಿ, ನಿರ್ದೇಶಕರಾಗಿ, ನಟರಾಗಿ, ಕೃಷಿಕರಾಗಿ, ಕ್ರೀಡಾಪಟುಗಳಾಗಿ, ಬಡ ವಿದ್ಯಾರ್ಥಿಗಳ ಪೋಷಕರಾಗಿ, ಕಲಾ ಸಿರಿವಂತಿಕೆ ಮನಸ್ಸಿನ ಸಿ.ಎನ್. ಪಾಟೀಲರು ಅತ್ಯುತ್ತಮ ಭಾಷಣಕಾರರು ಕೂಡಾ ಆಗಿದ್ದರು. ಹಲವಾರು ಕಲಾ ಮಂದಿರಗಳನ್ನು ಸ್ಥಾಪಿಸುವ ಮೂಲಕ ಅದರಲ್ಲಿ ಅತ್ಯುತ್ತಮ ಕಲೆ ಅರಳುವಂತೆ ಮಾಡಿ ತನ್ಮೂಲಕ ಅವುಗಳಿಗೆ ಖ್ಯಾತಿ ಒದಗಿಸಿದ್ದಾರೆ. ಸಿ.ಎನ್. ಪಾಟೀಲರು ಬೆಂಗಳೂರು ಉಚ್ಚ ಚಿತ್ರಕಲಾ ಪರೀಕ್ಷೆ, ಕೇಂದ್ರದ ಪ್ರಥಮ

[illegible]

[illegible]

[illegible]

[illegible]

ಸಂಚಾಲಕರು, ಶಿಕ್ಷಣ ಪ್ರೇಮಿಗಳಾಗಿ, ರಾಜ್ಯ ಪಠ್ಯಪುಸ್ತಕ ಸಮಿತಿಯ ಹಾಗೂ ಶಾಲಾ ಸುಧಾರಣಾ ಸಮಿತಿಯ ಸದಸ್ಯರು ಕೂಡಾ ಆಗಿದ್ದರು, ಸಿ.ಎನ್. ಪಾಟೀಲರು ಸಾಹಿತ್ಯದ ಎಂಥ ಪ್ರಕಾರವಿದ್ದರೂ ಯಾರೇ ಬರೆದಿದ್ದರೂ ಅದರ ಕುರಿತು ಅತ್ಯಂತ ಸುಂದರವಾಗಿ ಪಾಂಡಿತ್ಯ ಪೂರ್ಣವಾಗಿ ವಿದ್ವಾಂಸರ ಸಮನಾಗಿ ಮಾತನಾಡುವ ಪ್ರಬುದ್ಧತೆ, ಜಾಣ್ಮೆ ಹಾಗೂ ಪಕ್ವತೆಯನ್ನು ಹೊಂದಿದವರಾಗಿದ್ದರು".

"ಕನ್ನಡದ ನೆಲದ ದುರಂತವೋ ಏನೋ.... ಈ ನೆಲದ ಕಲಾವಿದರು ಎಷ್ಟೇ ಪ್ರತಿಭಾವಂತರಾಗಿದ್ದರೂ ಕೂಡಾ ಅವರನ್ನು ಚಿರಸ್ಥಾಯಿಯನ್ನಾಗಿಸುವ ಕಾರ್ಯ ಕನ್ನಡಿಗರಿಂದ ಆಗಿಲ್ಲವೆಂದು ದಿಟ್ಟತನದಿಂದ ಹೇಳಬಹುದು.

ಹಿಂದಿನ ಶತಮಾನದ ಸುಮಾರು ೭೦ರ ದಶಕದಲ್ಲಿ ಕಲಾವಿದರ ಕುರಿತು ಪರಿಚಯಾತ್ಮಕ ಗ್ರಂಥಗಳನ್ನು ಲಲಿತಕಲಾ ಅಕಾಡೆಮಿ ಪ್ರಕಟಿಸಿದ್ದೇ ಅದ್ಭುತ ಸಾಧನೆಯಾಯಿತು. ಪಾಶ್ಚಾತ್ಯರಲ್ಲಿದ್ದಂತೆ ಸಮಗ್ರವಾಗಿ ಕಲಾವಿದರ ಕಲಾಕೃತಿಗಳನ್ನು ದಾಖಲಿಸುವ ಕಾರ್ಯ ನಮ್ಮಲ್ಲಿ ನಡೆದದ್ದು ತುಂಬ ಅಪರೂಪ.

ಆದರೆ ೯೦ರ ದಶಕದ ಆರಂಭದಲ್ಲಿ ಕಲೆಯ ಕುರಿತಾದ ಸಂಶೋಧನಾತ್ಮಕ ಪ್ರಬಂಧಗಳು ಮೆಲ್ಲ ಮೆಲ್ಲಗೆ ಬೆಳಕಿಗೆ ಬರುತ್ತಲಿವೆ. ಕಾರಣ ಕನ್ನಡ ವಿಶ್ವವಿದ್ಯಾಲಯದಲ್ಲಿ ಲಲಿತಕಲೆ ಕುರಿತು ಸ್ನಾತಕೋತ್ತರ ಪದವಿ ತರಗತಿಗಳು ಪ್ರಾರಂಭವಾಗಿ, ಪಿಎಚ್.ಡಿ., ಅಧ್ಯಯನಕ್ಕೆ ತಾತ್ವಿಕವಾಗಿ ಒಪ್ಪಿಗೆ ದೊರೆತ ಮೇಲೆ ಸಂಪ್ರಬಂಧಗಳು, ಮಹಾಪ್ರಬಂಧಗಳು ರೂಪುಗೊಳ್ಳುತ್ತಿಲಿವೆ. ಹೀಗೆ ಸಿದ್ಧಗೊಳ್ಳುತ್ತಿರುವ ಪ್ರಬಂಧಗಳಲ್ಲಿ ಸಿ.ಎನ್. ಪಾಟೀಲರವರ ಪ್ರಬಂಧವೂ ಒಂದು.

ಚಿತ್ರಕಲಾ ಪರಂಪರೆಯು ಬೆಳೆದು ನಮ್ಮ ಜೀವನದ ಒಂದು ಅಂಶವಾಗಿ ನೋವು ನಲಿವುಗಳ ಪ್ರತಿಧ್ವನಿಯಾಗಿ ಅವುಗಳ ಅಭಿವ್ಯಕ್ತಿಯಾಗಿ ಕೆಲವು ಸಲ ಬದುಕಿಗೆ ಬೇಕಾದ ಆಸ್ತಿ, ಭರವಸೆಗಳ ಮೂಲವಾಗಿ ಕಲೆಯು ಪರಿಗಣಿತವಾಗಿದೆ. ಈ ಕಲೆಯ ನೋವನ್ನು ಕೂಡಾ ಸಂತೋಷವಾಗಿ ಸ್ವೀಕರಿಸುವುದರೊಂದಿಗೆ ವ್ಯಕ್ತಿಯೊಬ್ಬನಿಗೆ ಸಂಸ್ಕಾರ ಮತ್ತು ಸೌಜನ್ಯತೆಗಳನ್ನು ಕೊಡುತ್ತವೆ. ಇಂತಹ ಕಲೆ ಮಾಡುವುದು ಸೂಕ್ಷ್ಮ ಮನಸ್ಸಿನ ಹಾಗೂ ಸೃಜನ ಶಿಲತೆಯುಳ್ಳ ಕಲಾವಿದನಲ್ಲಿ ಮಾತ್ರ. ಈ ಕಲಾ ಪ್ರವಾಹವು ಬಡತನ ಸಿರಿತನಗಳನ್ನು ಮೀರಿ ಯೋಗ್ಯದಲ್ಲಿ ಪ್ರವಹಿಸುತ್ತದೆ. ಈ ಪ್ರವಾಹವನ್ನು ಪಡೆದಿರುವವನೇ ಕಲಾವಿದ. ಆತ ಸಮಾಜದಿಂದ ಏನನ್ನು ಬಯಸದೇ ಸಮಾಜಕ್ಕೆ ತಾನು ಪಡೆದುಕೊಂಡದ್ದನೆಲ್ಲ ಕಲಾಕೃತಿಗಳ ಮೂಲಕ ಕೊಡುತ್ತಾನೆ. ಇಂತಹ ವ್ಯಕ್ತಿತ್ವವುಳ್ಳ ಕಲಾವಿದರ ಸಾಲಿಗೆ ಸಿ.ಎನ್. ಪಾಟೀಲರು ಸೇರುತ್ತಿದ್ದರಿಂದ ಸಿ.ಎನ್. ಪಾಟೀಲರ ಬಗ್ಗೆ ಅವರ ಕಲೆ ಮತ್ತು ಬದುಕನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕನ್ನಡ ನಾಡಿನಲ್ಲಿ ಸಾಂಸ್ಕೃತಿಕ ಚರಿತ್ರೆಯಲ್ಲಿ ಬಂದಿರುವ ಗದಗು. ಇದರ ಪ್ರಾಚಿನತೆ ಹಿನ್ನಲೆಯನ್ನು ಹೇಳಲಾಗಿದೆ. ಹಲವಾರು ಕವಿರತ್ನರರಿಗೆ ಕಲಾವಿದರಿಗೆ ಜನ್ಮಸ್ಥಳವಾಗಿದ್ದು,

[illegible]

ಗದಗ ಜಿಲ್ಲೆ ಸಾಹಿತ್ಯ, ಜಾನಪದ ಸಾಹಿತ್ಯ, ಸಂಗೀತ, ವಾದ್ಯಸಂಗೀತ ನಾಟಕ ರಂಗಭೂಮಿ ಈ ಹಾಗೂ ಕ್ರಿಡಾಕೂಟಗಳಲ್ಲಿ ಪ್ರಸಿದ್ಧಿಯನ್ನು ಪಡೆದು ಇಂದಿಗೂ ಆ ಪರಂಪರೆ ಅನುಸಾರವಾಗಿ ಬೆಳೆದು ಬಂದಿರುವುದಾಗಿದೆ. ಅದಲ್ಲದೇ ನಿರ್ವರ್ಥಗಳ ಶಾಂತಿನೆಲೆಯನೊಳ್ಳಗೊಂಡು ವಾತಾವರಣ ಗದುಗಿನ ಚಿತ್ರಕಲೆ ಬೆಳವಣಿಗೆಯ ವಿವರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದಲ್ಲದೆ ಕರ್ನಾಟಕದ ಕೆಲವು ಶ್ರೇಷ್ಠ ಕಲಾವಿದರಲ್ಲಿ ಸಿ.ಎನ್. ಪಾಟೀಲರು ಒಬ್ಬರಾಗಿದ್ದರು ಎಂಬುದನ್ನು ಪ್ರಸ್ತುತ ಪ್ರಬಂಧದ ಮೂಲಕ ಕಂಡುಕೊಳ್ಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಿ.ಎನ್. ಪಾಟೀಲರ ಬಾಲ್ಯದ ದಿನಗಳು, ಅವರ ಮೇಲೆ ಬೀರಿದ ಪರಿಸರ, ಅಂದಿನ ನಿಸರ್ಗ ಹಾಗೂ ಅವರ ಸುತ್ತಲೂ ಇದ್ದಂತಹ ಕಲಾಮಯ ವಾತಾವರಣ, ಕಲೆಯನ್ನೆ ತಮ್ಮ ಬದುಕಾಗಿಸಿಕೊಂಡಿದ್ದುದರ ಬಗ್ಗೆ ಕುರಿತು ಅಧ್ಯಯನ ಮಾಡಲಾಗಿದೆ. ಜೊತೆಗೆ ಕಲಾವಿದರ ಶಿಕ್ಷಣದ ಬಗ್ಗೆ ಸಮಗ್ರವಾಗಿ ಅಧ್ಯಯನ ಕೈಗೊಳ್ಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಸಿ.ಎನ್. ಪಾಟೀಲರ ವೃತ್ತಿಜೀವನದಲ್ಲಿ ಗೋಚರಿಸಿದ ಸಂಗತಿಗಳು, ಅವರು ಬೆಳೆದು ಬಂದ ಬಗೆ, ಕಲೆಯ ಬಗೆಗಿನ ನಿಸ್ವಾರ್ಥ ಭಾವ, ಶ್ರದ್ಧಾಪೂರ್ಣ ಅಧ್ಯಯನದಿಂದ ಅವರೊಬ್ಬ ಪರಿಪೂರ್ಣ ಕಲಾವಿದರಾಗಿ ರೂಪಗೊಂಡಿದ್ದು ಈ ಕಲೆಯನ್ನೇ ನಂಬಿ ವಿವಿಧ ಕಲಾ ಚಟುವಟಿಕೆಗಳಲ್ಲಿ ಕೆಲಸ ಮಾಡಿದ್ದು ಹಾಗೂ ಅನೇಕ ಕಲಾ ಸಂಸ್ಥೆಗಳನ್ನು ಕಟ್ಟಿ ಬೆಳಸಿದ ಬಗ್ಗೆ, ನಾಟಕ, ಕವನ, ಕಥೆಗಳನ್ನು ಬರೆದು ಅವುಗಳನ್ನು ಉಳಿಸಿ ಬೆಳಸಿಕೊಂಡ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸಿ.ಎನ್. ಪಾಟೀಲರು ಒಬ್ಬ ಕಲಾವಿದನಾಗಿ ಎಲ್ಲ ಮೂಲಗಳಿಂದ ಪ್ರೇರಣೆ ಹಾಗೂ ಶಕ್ತಿಗಳನ್ನು ಮೈಗೂಡಿಸಿಕೊಂಡು ಸಮಾಜದ ಋಣವನ್ನು ತನ್ನ ಕಲಾಕೃತಿಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಈ ಕಾರಣದ ಇವರು ಈ ನಾಡಿಗೆ ಉತ್ತಮ ಕಲಾಕೃತಿಗಳನ್ನು ನೀಡಿದ್ದಾರೆ. ಹಾಗೂ ಶ್ರೀ ಪಾಟೀಲರು ನಾಡಿನ ಅನೇಕ ಕಡೆ ಕಲಾಕೃತಿಗಳನ್ನು ರಚಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇದನ್ನು ತಿಳಿದುಕೊಳ್ಳುವ ಸಲುವಾಗಿ ಕಲಾಕೃತಿಗಳ ವಸ್ತು ವಿಷಯಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸಿ.ಎನ್. ಪಾಟೀಲರ ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆ ತಂತ್ರಗಾರಿಕೆ ಹಾಗೂ ಶೈಲಿ. ಇವರು ರಚಿಸಿರುವ ಕಲಾಕೃತಿಗಳ ಕುರಿತು ಶಾಸ್ತ್ರೀಯವಾಗಿ ವರ್ಗೀಕರಣ ಮಾಡಿಕೊಂಡು ಅಲ್ಲಿ ಬಳಕೆಯಾದ ಮಾದ್ಯಮಗಳು, ಉಪಯೋಗಿಸದ ವಿಧಾನ, ಆಯ್ದ ವಸ್ತು ವಿಷಯಗಳನ್ನು ಕುರಿತು ಅಧ್ಯಯನ ಮಾಡಲಾಗಿದ್ದು ತೈಲವರ್ಣ, ಜಲವರ್ಣ ಮಾಧ್ಯಮಗಳಲ್ಲಿರುವ ಭಾವಚಿತ್ರಗಳು, ಪೂರ್ಣ ವ್ಯಕ್ತಿಚಿತ್ರಗಳು, ನಿಸರ್ಗ ಚಿತ್ರಗಳು, ಸಂಯೋಜನಾ ಚಿತ್ರಗಳು ಹೀಗೆ ಕಲೆಯ

ಎಲ್ಲ ಪ್ರಕಾರಗಳನ್ನು ಅವರು ರಚಿಸಿದ ಕಲಾಕೃತಿಗಳನ್ನು ಮಾಧ್ಯಮವಾರುಗಳಾಗಿ ವಿಂಗಡಿಸಿಕೊಂಡು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸಮಾರೋಪವಿದ್ದು, ಪ್ರಸ್ತುತ ಪ್ರಬಂಧದ ಎಲ್ಲ ಅಧ್ಯಾಯಗಳ ಫಲಿತಗಳಿವೆ.

ಪ್ರಸ್ತುತ ಅಧ್ಯಯನದ ಕೆಲವು ಪ್ರಮುಖ ಫಲಿತಗಳು

* ಸಿ.ಎನ್. ಪಾಟೀಲರು ತಮ್ಮ ಬಾಲ್ಯದಲ್ಲಿಯೇ ಕಲೆಯ ಅಭಿರುಚಿಯನ್ನು ಬೆಳೆಸಿಕೊಂಡು ಒಬ್ಬ ಪ್ರಸಿದ್ಧ ಕಲಾವಿದರಾಗಿ ಈ ಕ್ಷೇತ್ರಕ್ಕೆ ಉತ್ತಮ ಕಲಾಕೃತಿಗಳನ್ನು ನೀಡಿದ್ದಾರೆ.
* ಸಿ.ಎನ್. ಪಾಟೀಲರ ಸಾವಿರಾರು ಕಲಾಕೃತಿಗಳಲ್ಲಿ ತೈಲವರ್ಣ ಮಾಧ್ಯಮದಿಂದ ರಚಿತವಾದ ಕಲಾಕೃತಿಗಳೇ ಹೆಚ್ಚು. ಇವರಿಗೆ ಪ್ರಸಿದ್ಧಿ ತಂದ ಕಲಾಕೃತಿಗಳು ಈ ಮಾಧ್ಯಮದಿಂದಲೇ ಚಿತ್ರಿತವಾಗಿವೆ.
* ಸಿ.ಎನ್. ಪಾಟೀಲರು ಮುಂಬೈ ಜೆ.ಜೆ.ಕಲಾಶಾಲೆಯಲ್ಲಿ ಕಲಾ ವಿದ್ಯಾರ್ಥಿಯಾಗಿದ್ದಾಗ ಕಲಾಶಾಲೆಯ ಪ್ರಖ್ಯಾತ ಗುರುಗಳಾದ ಶ್ರೀ ಜಗನ್ನಾಥ ಅಹಿವಾಸಿ ಮತ್ತು ಎ.ಎ.ಬೋಸ್ಲೆಯವರ ಮಾರ್ಗದರ್ಶನದಲ್ಲಿ ಚಿತ್ರ ಕಲೆಯನ್ನು ಶಿಸ್ತುಬದ್ಧವಾಗಿ ಕಲಿತು ಅವರೀರ್ವರಿಗೆ ಪ್ರೀತಿ ಪಾತ್ರರಾಗಿದ್ದಾರೆ.
* ಸಿ.ಎನ್. ಪಾಟೀಲರು ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಗ್ರೇಡ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು ಉತ್ತಮ ಚಿತ್ರಕಲಾ ಬೋಧನೆಯನ್ನು ನೀಡುತ್ತಿದ್ದರು.
* ಕಲಾವಿದರು ಚಿತ್ರಕಲೆಯ ಬಗ್ಗೆ ರಾಜ್ಯದ ಅನೇಕ ಕಡೆ ಉಪನ್ಯಾಸ ಮಾಡಿದ್ದಾರೆ.
* ಕಲಾವಿದರು ಚಿತ್ರಕಲಾ ಕ್ಷೇತ್ರದಲ್ಲಷ್ಟೇ ಅಲ್ಲದೇ ಸಾಹಿತ್ಯ, ನಾಟಕ, ಅಧ್ಯಾತ್ಮ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.
* ಸಿ.ಎನ್. ಪಾಟೀಲರು ಪ್ರಸಿದ್ಧ ಕಲಾವಿದರು, ಸಾಹಿತಿಗಳು, ರಾಷ್ಟ್ರಮಟ್ಟದ ಆಟಗಾರರು, ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಪ್ರಮುಖರೆನಿಸಿದ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಇನ್ನೂ ಹಲವಾರು ಪ್ರಮುಖ ವ್ಯಕ್ತಿಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದವರಾಗಿದ್ದರು.
* ಸಿ.ಎನ್. ಪಾಟೀಲರು ಅನೇಕ ಕವನ, ನಾಟಕ ರಚನೆ ಮಾಡಿ ಪ್ರಕಟಿಸಿದ್ದಾರೆ.
* ಶ್ರೀಯುತರು ವಿಜಯಕಲಾ ಮಂದಿರ ಗದಗ ಇದರ ಪ್ರಥಮ ಪ್ರಾಚಾರ್ಯರಾಗಿ, ಬಿಜಾಪುರದ ಸಿದ್ಧೇಶ್ವರ ಕಲಾಶಾಲೆಯ ಸಂಸ್ಥಾಪಕ ನಿರ್ದೇಶಕರಾಗಿ ಹಾಗೂ ದಾವಣಗೇರಿ ಸರಕಾರಿ ಕಲಾಶಾಲೆಯ ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿ ಇನ್ನು ಹಲವಾರು ಸಂದರ್ಭಗಳಲ್ಲಿ ಕಲೆಗಾಗಿ ಉತ್ತಮ ಸೇವೆ ಗೈದಿದ್ದಾರೆ.

* ಸಿ.ಎನ್. ಪಾಟೀಲರ ಕಲಾಕೃತಿಗಳು ರಾಜ್ಯ ಮತ್ತು ದೇಶದ ವಿವಿಧ ದೇಶದ ಕಡೆಗಳಲ್ಲಿ ಪ್ರದರ್ಶನಗೊಂಡಿವೆ.
* ಸಿ.ಎನ್. ಪಾಟೀಲರು ವಿವಿಧ ಸಂಘ ಸಂಸ್ಥೆಗಳಲ್ಲಿ ಭಾಗವಹಿಸಿ ಬಹುಮುಖ ಸೇವೆಗೈದಿದ್ದಾರೆ.
* ಶ್ರೀಯುತರು ಹಲವಾರು ಏಕವ್ಯಕ್ತಿ ಚಿತ್ರ ಕಲಾ ಪ್ರದರ್ಶನ. ಸಮೂಹ ಚಿತ್ರ ಕಲಾ ಪ್ರದರ್ಶನ ಮಾಡಿದ್ದಾರೆ. ತಮ್ಮ ವಿದ್ಯಾರ್ಥಿಗಳ ಕಲಾ ಪ್ರದರ್ಶನಗಳಿಗೆ ಮಾರ್ಗದರ್ಶನ ನೀಡಿ ಪ್ರದರ್ಶನಗಳನ್ನು ಮಾಡಿಸಿದ್ದಾರೆ.
* ಸಿ.ಎನ್. ಪಾಟೀಲರು ಭಾರತೀಯ ಸ್ಕೌಟ್ಸ್ ಹಾಗೂ ಗೈಡ್ಸ್ ಗದಗ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.
* ಶ್ರೀಯುತರು ಉತ್ತಮ ವಾಗ್ಮಿಗಳಾಗಿದ್ದರು. ನಾಡು, ನುಡಿ, ಕಲೆ ಆಧ್ಯಾತ್ಮದ ಜೊತೆಗೆ ಹಲವಾರು ವಿಷಯಗಳ ಬಗ್ಗೆ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು.
* ಸಿ.ಎನ್. ಪಾಟೀಲರು ಕಲಾಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ ಈ ಮಹಾನ್ ಕಲಾವಿದರು ೨೫.೦೬.೨೦೦೭ರಂದು ಅಸ್ತಂಗತರಾದರು ಎಂದು ಹೇಳುವುದರೊಂದಿಗೆ ಪ್ರಬಂಧಕ್ಕೆ ವಿರಾಮ ನೀಡುತ್ತಿದ್ದೇನೆ.

[illegible]


ಅನುಬಂಧಗಳು

* ಪ್ರಶಸ್ತಿಗಳು
* ಗ್ರಂಥಋಣ
* ಕಲಾಕೃತಿಗಳ ಸಂಗ್ರಹದ ನೆಲೆಗಳು
* ವಕ್ತೃವಿವರ

ಪ್ರಶಸ್ತಿಗಳು








ಪ್ರಶಸ್ತಿಗಳು







ಪ್ರಶಸ್ತಿಗಳು


The Bharat Scouts & Guides, Karnataka
XV Karnataka State Jamborette - 27th Dec. 1977 to 2nd Jan. 1978
Shri C.N.Patil Secretary District Association,
of GADAG District
participated in the XV Karnataka State
Jamborette at Sakleshpur, Hassan Dist.
Exhibited his painting on a large scale.
(KONDAJJI BASAPPA)
Jamborette Chief & State Chief Commissioner



॥ ಸಿರಿಗನ್ನಡಂ ಗೆಲ್ಗೆ ॥
ಗದಗ ತಾಲೂಕಾ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನ
ಪ್ರಮಾಣ ಪತ್ರ
ಶ್ರೀಮತಿ/ಶ್ರೀ ಸಿ. ಎನ್. ಪಾಟೀಲ. ಕಲಾಚಾರ್ಯರು ಇವರು
ದಿನಾಂಕ 29-8-2004 ರಂದು ಗದಗದಲ್ಲಿ ಜರುಗಿದ ಗದಗ ತಾಲೂಕಾ ಪ್ರಥಮ
ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡು ಸನ್ಮಾನ ಪಡೆದದ್ದ ಕ್ಕಾಗಿ
ಈ ಪ್ರಮಾಣ ಪತ್ರವನ್ನು ನೀಡಲಾಗಿದೆ.
ಸಮ್ಮೇಳನಾಧ್ಯಕ್ಷರು
ತಾಲೂಕಾ ಪ್ರಥಮ ಚು. ಸಾ. ಸಮ್ಮೇಳನ
ಕವಿಗೋಷ್ಠಿ
ಅಧ್ಯಕ್ಷರು
ಅಧ್ಯಕ್ಷರು
ತಾಲೂಕಾ ಚು. ಸಾ. ಪರಿಷತ್



ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಿ.ಎನ್.ಪಾಟೀಲರು-೧೯೭೦




ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಿ.ಎನ್.ಪಾಟೀಲರು-೧೯೭೧



ಶ್ರೀ ಅನ್ನದಾನೇಶ್ವರ ಸ್ವಾಮಿಗಳ ಜೊತೆ ಸಿ.ಎನ್.ಪಾಟೀಲರು

ಅಪೂರ್ಣಗೊಂಡ ಕಲಾಕೃತಿಗಳು









* ಪ್ರಶಸ್ತಿಗಳು

೦೧. ಲಲಿತ ಕಲಾ ಕಪಾಲಿ

೦೨. ಲಲಿತ ಕಲಾ ಸಂಗಮ

೦೩. ಲಲಿತ ಕಲಾ ಭೂಷಣ

೦೪. ಲಲಿತ ಕಲಾ ಶರಣ

೦೫. ಲಲಿತ ಕಲಾ ರತ್ನ

೦೬. ಲಲಿತ ಕಲಾ ಬ್ರಹ್ಮ

೦೭. ಗುರು ಸೇವಾ ನಿಧಿ

೦೮. ಸಾಹಿತ್ಯ ರತ್ನ

೦೯. ಜಾನಪದ ಸಾಹಿತ್ಯ ಸುಧಾರಕ

೧೦. ವೈವಿಧ್ಯಮಯ ವರ್ಣಯೋಗಿ

೧೧. ಸಂಘಟನಾ ಚತುರ

೧೨. ನಿಪುಣ ನಿರ್ದೇಶಕರು

೧೩. ಕಮಕ ಕಲಾನಿಧಿ

೧೪. ಕಲಾಚಾರ್ಯ

೧೫. ಲಲತಿ ಕಲಾ ಕಾಲೇಶ

* ಗ್ರಂಥಋಣ

೦೧. ಕೃತಪುರ ಕಲಾವೈಭವ, ಸಂ.ಅಶೋಕ ಅಕ್ಕಿ
ಪ್ರ.ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗದಗ, ೨೦೦೮

೦೨. ನಮ್ಮ ಗದಗ ಬೆಟಗೇರಿ, ಸಂ.ಹ.ರಾ.ಕಿದಿಯೂರು
ಪ್ರ.ಆರ್.ಎಚ್.ಕಿದಿಯೂರು, ಅನುಪಮ ಪ್ರಿಂಟರ್ಸ್, ಗದಗ, ೧೯೭೫

೦೩. ಧಾರವಾಡ ಜಿಲ್ಲೆ ಸಂ.ಸೂರ್ಯನಾಥ ಯು.ಕಾಮತ್
ಪ್ರ. ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ, ೧೯೮೩

೦೪. ಕರ್ನಾಟಕ ಜನಪದ ಚಿತ್ರಕಲೆ ಡಾ.ಎಸ್.ಸಿ.ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೩

೦೫. ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಕಲಾಕೃತಿಗಳು ಒಂದು ಅಧ್ಯಯನ
ಸಂ.ಡಾ.ಲಕ್ಷ್ಮೀದೇವಿ ಗವಾಯಿ
ಪಿಎಚ್.ಡಿ ಪ್ರಕಟಿತ ಮಹಾಪ್ರಬಂಧ

೦೬. ಚಿತ್ರಕಲಾವಿದ ಜೆ.ಎಸ್.ಖಂಡೇರಾವ್ ಮಲ್ಲಿಕಾರ್ಜುನ ಒಂದು ಅಧ್ಯಯನ ಸಿ.ಬಾಗೋಡಿ
ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೦೭. ಡಿ.ಜಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ
ಶಂತರಪ್ಪ ಎಂ.ಕುಂದಗೋಳ
ಎಂ.ಫಿಲ್, ಪ್ರಬಂಧ, ೨೦೦೫, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೮. ಚಿತ್ರಕಲಾವಿದ ಡಾ.ಎಸ್.ಎಮ್.ಪಂಡಿತ್ ಒಂದು ಅಧ್ಯಯನ
ಡಾ.ಮೋಹನರಾವ್ ಬಿ.ಪಂಚಾಳ
ಪಿಎಚ್.ಡಿ ಮಹಾಪ್ರಬಂಧ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲಬರ್ಗಾ

೦೯. ಟಿ.ಪಿ.ಅಕ್ಕಿ ಕಲಾವಿದರ ಪರಿಚಯ ಪುಸ್ತಕ ಕೆ.ಮುಕುಂದ ಸಂ.ವಿ.ಟಿ.ಕಾಳೆ
ಪ್ರ.ಲಲಿತ ಕಲಾ, ಅಕಾಡೆಮಿ, ಬೆಂಗಳೂರು, ೧೯೯೪

೧೦. ಅಮೀನ ಸಾಹೇಬ ಕಮಡೋಳಿ ಕಲಾವಿದರ ಪರಿಚಯ ಪುಸ್ತಕ ಬಿ.ಕೆ.ಹಿರೇಮಠ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೪

೧೧. ಬಿ.ಕೆ.ಹುಬಳಿ ಕಲಾವಿದರ ಪರಿಚಯ ಪುಸ್ತಕ ಪ್ರೊ.ವಿ.ಜಿ.ಅಂದಾನಿ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೧೨. ಚಿತ್ರ ಕಲಾ ಪ್ರಪಂಚ ಸಂ.ಅ.ಲ.ನರಸಿಂಹನ್
ಪ್ರ.ವಿ.ಎನ್.ಮಲ್ಲಿಕಾರ್ಜುನ್ ಸ್ವಾಮಿ ರಿಜಿಸ್ಟಾರ್

೧೩. ದೃಶ್ಯಕಲೆಯ ಆರಾಧಕರು ಸಂ.ಹೆಚ್.ಎನ್.ಸುರೇಶ್
ಪ್ರ.ಟಿ.ಎಸ್.ವೆಂಕಟಾಚಲಯ್ಯ ಕರ್ನಾಟಕ ಲಲಿತಕಲಾ ಅಕಾಡೆಮಿ

೧೪. ವರ್ಣ ಸಂಚಯ ಡಾ.ಎಸ್.ಸಿ.ಪಾಟೀಲ
ಪ್ರ.ವಿಜಯ ಚಿತ್ರಕಲಾ ಮಹಾವಿದ್ಯಾಲಯ, ೧೯೮೫

೧೫. ಸುವರ್ಣ ವಿಜಯ ಟಿ.ಪಿ.ಅಕ್ಕಿ
ಪ್ರ.ವಿಜಯ, ಕಲಾಮಂದಿರ ಸುವರ್ಣ ಮಹೋತ್ಸವ ಸಮಿತಿ, ಗದಗ

೧೬. ಕಲಾ, ಚರಿತ್ರೆ ಅಶೋಕ, ಅಕ್ಕಿ
ಪ್ರ.ವಿಜಯ ಕಲಾ ಮಂದಿರ

೧೭. ಜ್ಯೋತಿರ್ಗಮಯ ಲೇ.ಡಾ.ಆಯ್.ಎಮ್.ಮಾನೇದ
ಪ್ರ.ಸಿ.ಎನ್.ಪಾಟೀಲ ವಜ್ರಮಹೋತ್ಸವ, ೧೯೯೬

೧೮. ವಜ್ರ ವಿಜಯ ನೆನಪಿನ ಸಂಚಿಕೆ ಸಂ.ವಿಲ್ಸನ್ ಎಸ್.ಸೋನಘುರ್,
ಡಾ.ಮೋಹನರಾವ್ ಬಿ.ಪಂಚಾಳ
ಪ್ರ.ವಿಜಯ ಕಲಾಮಂದಿರ, ವಜ್ರ ಮಹೋತ್ಸವ ಸಮಿತಿ ೨೦೦೭-೦೮

೧೯. ವಜ್ರ ಮಹೋತ್ಸವ -೧೯೯೫ ಡಾ.ಎಸ್.ಸಿ.ಪಾಟೀಲ
ಪ್ರ.ಹಾಲಭಾವಿ, ಸ್ಕೂಲ್ ಆಫ್ ಆರ್ಟ್, ಧಾರವಾಡ

೨೦. ಲಕ್ಕುಂಡಿ ಉತ್ಸವ -೨೦೦೬ ಶ್ರೀ.ಜಿ.ಎಂ.ಧನಂಜಯ ಭಾ.ಆ.ಸೇ,
ಸಂ.ಪಿ.ಎಸ್.ಹರ್ಲಾಪೂರ ಅಧ್ಯಕ್ಷರು
ಪ್ರ.ಲಕ್ಕುಂಡಿ ಉತ್ಸವ, ಸಮಿತಿ, ಗದಗ

೨೧. ಲಕ್ಕುಂಡಿ ಉತ್ಸವ -೨೦೦೮, ಸ್ಮರಣ ಸಂಚಿಕೆ ಸಂ.ಶ್ರೀಮತಿ ಶಿಖಾ ಭಾ.ಆ.ಸೇ, ಅಧ್ಯಕ್ಷರು
ಪ್ರ.ಶ್ರೀ.ಎನ್.ಶ್ರೀರಾಮನ್ ಭಾ.ಆ.ಸೇ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಲಕ್ಕುಂಡಿ ಉತ್ಸವ ಸಮಿತಿ ಗದಗ

೨೨. ಲಕ್ಕುಂಡಿ ಉತ್ಸವ -೨೦೦೯ ಸ್ಮರಣ ಸಂಚಿಕೆ ಸಂ.ಶ್ರೀ.ವಿ.ಎಫ್.ಪಾಟೀಲ
ಪ್ರ.ಶ್ರೀ.ಸುಬೋಧ ಯಾಧವ ಭಾ.ಆ.ಸೇ
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಗದಗ

೨೩. ನಾಗರಿಕ ಪತ್ರಿಕೆ, ೧೬.೦೯.೨೦೦೨

೨೪. ನವೋದಯ ಪತ್ರಿಕೆ ಲೇ.ಡಾ.ಯೋಗೇಶನ್

೨೫. ಆನೇ ಆಲ್ ಇಂಡಿಯಾ ವೆಸ್ಟರ್ನ್ ಆರ್ಟಿಸ್ಟ್ ನ್ಯೂಡೆಲ್ಲಿ ೧೯೯೩

೨೬. ವಿಜಯ ಕರ್ನಾಟಕ ೦೧.೦೯.೨೦೦೯ ವಿನೋದಕುಮಾರ ಬಿ.ನಾಯಕ್

* ಕಲಾಕೃತಿಗಳ ಸಂಗ್ರಹದ ನೆಲೆಗಳು

೦೧. ನಗರಸಭೆ -ಗದಗ -ಬೆಟಗೇರಿ

೦೨. ವಿಜಯ ಕಲಾಮಂದಿರ -ಗದಗ

೦೩. ಶ್ರೀ ಜಗದ್ಗುರು ತೋಂಟದಾರ್ಯ ಮಠ -ಗದಗ

೦೪. ಸಚ್ಚಿದಾನಂದ ಮಠ -ಗದಗ, ವಿರೇಶ್ವರ ಮಠ ನರಸಾಪೂರ, ದೊಡ್ಡಮೇಟ್ಟಿ ಅಂಧಾನಪ್ಪನವರ ಮನೆ -ಜಕ್ಕಲ ಗ್ರಾಮ

೦೫. ಪಂಡಿತ ಡಾ.ಪುಟ್ಟರಾಜ ಗವಾಯಿಗಳವರ ಮಠ -ಗದಗ

೦೬. ಮಾಡೆಲ್ ಹೈಸ್ಕೂಲ್ -ಗದಗ

೦೭. ಎ.ಸಿ.ಆಫಿಸ್ -ಗದಗ

೦೮. ಆರ್ಘಾದ ಬ್ಯಾಂಕ್ -ಗದಗ

೦೯. ಮುನ್ಸಿಪಾಲ್ ಹೈಸ್ಕೂಲ್ -ಗದಗ

೧೦. ಆರ್.ಟಿ.ಕುಲಕರ್ಣಿ ಸ್ಪಿಟಲ್ -ಗದಗ

೧೧. ಶ್ರೀ ಅನ್ನದಾನೇಶ್ವರ ಮಠ -ಮುಂಡರಗಿ

೧೨. ಡಾ. ಹಿರೇಗೌಡರ ಮನೆ -ಗದಗ

೧೩. ಚಿಕ್ಕನಕೊಪ್ಪ ಶರಣರ ಮಠ -ಬಳಾಗಾನೂರು

೧೪. ಸ್ಕೂಲ್ ಆಫ್ ಆರ್ಟ್ -ಬಿಜಾಪುರ

೧೫. ಮೂರು ಸಾವಿರ ಮಠ -ಹುಬ್ಬಳ್ಳಿ

೧೬. ಲಿಂಗರಾಜ ಕಾಲೇಜ್ -ಬೆಳಗಾಂವ

೧೭. ಮುರಘರಾಜೇಂದ್ರ ಮಠ -ಧಾರವಾಡ

೧೮. ಲಲಿತ ಕಲಾ ಅಕಾಡೆಮಿ -ಬೆಂಗಳೂರು

೧೯. ಲಲಿತ ಕಲಾ ಅಕಾಡೆಮಿ -ನ್ಯೂಡೆಲ್ಲಿ

೨೦. ಡಾ. ಯೋಗೀಶನ್‌ರವರ ಮನೆ -ಗದಗ

೨೧. ಸಾವಳಗಿ ಮಠ -ಗೋಕಾಕ ತಾಲೂಕ್

* ವಕ್ತೃ ವಿವರ

ಕ್ರ.ಸಂ	ಹೆಸರು	ವೃತ್ತಿ	ಊರು
೦೧.	ಶ್ರೀ.ಸಿ.ಎನ್.ಪಾಟೀಲ	ಕುಟುಂಬವರ್ಗ	ಗದಗ
೦೨.	ಶ್ರೀ.ಎನ್.ಎ.ಹರ್ಲಾಪೂರ	ನಿವೃತ್ತ ಕಲಾ ಶಿಕ್ಷಕರು ಮತ್ತು ಕಲಾವಿದರು	ಗದಗ
೦೩.	ಶ್ರೀ.ಬಿ.ಎನ್.ಚವ್ಹಾಣ	ಪ್ರಾಂಶುಪಾಲರು ಜೈನ್ ಕಲಾ ಶಾಲೆ	ಗದಗ
೦೪.	ಶ್ರೀ.ಎಸ್.ಎನ್.ಹರ್ಲಾಪೂರ	ಅಧ್ಯಾಪಕರು	ಗದಗ
೦೫.	ಶ್ರೀ ಅಣಿಗೇರಿಮಠ ಸರ್	ನಿವೃತ್ತ ಶಿಕ್ಷಕರು	ಗದಗ
೦೬.	ಶ್ರೀ ಡಾ.ಯೋಗೇಶನ್	ಆಯುರ್ವೇದಿಕ್ ವೈದ್ಯಾಧಿಕಾರಿಗಳು	ಗದಗ
೦೭.	ಶ್ರೀ.ಎಂ.ಎ.ಕುಂಬಾರ	ಶಿಕ್ಷಕರು	ಅಣ್ಣಿಗೇರಿ
೦೮.	ಶ್ರೀ.ಎಚ್.ಎನ್.ಬಾಳಿಕಾಯಿ	ನಿವೃತ್ತ ಪ್ರಾಧ್ಯಾಪಕರು	ಗದಗ
೦೯.	ಶ್ರೀ.ಸಿ.ಎ.ಬೇವಿನಕಟ್ಟಿ	ಶಿಕ್ಷಕರು	ಗದಗ
೧೦.	ವಿಜಯ ಕಲಾಮಂದಿರ ಸಂಸ್ಥೆ		ಗದಗ
೧೧.	ಜೆ.ಎನ್.ಕಲಾಶಾಲೆ		ಗದಗ
೧೨.	ಮಾಡೆಲ್ ಹೈಸ್ಕೂಲ್		ಗದಗ
೧೩.	ಮುನ್ಸಿಪಾಲ್ ಹೈಸ್ಕೂಲ್		ಗದಗ

